# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಗುರುವಾರ, ಜನವರಿ 02, 2025

ಸಂಪುಟ : 51 ಸಂಚಿಕೆ : 230 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com






ಹೊಸ ವರ್ಷದ ಹಿನ್ನೆಲೆಯಲ್ಲಿ ಬುಧವಾರ ಜನರು ದಾವಣಗೆರೆ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನಕ್ಕೆ ತೆರಳಿ ದರ್ಶನ ಪಡೆದರು.

# ಹೊಸ ವರ್ಷಕ್ಕೆ ದೇವನಗರಿಯಲ್ಲಿ ಸಂಭ್ರಮದ ಸ್ವಾಗತ

## ಕೇಕ್ ಕತ್ತರಿಸಿ ಸಂಭ್ರಮ, ದೇವಸ್ಥಾನಗಳಿಗೆ ತೆರಳಿ ದರ್ಶನ ಪಡೆದ ಭಕ್ತರು, ಕುಡಿದು ದಣಿದ ಯುವಕರು

ದಾವಣಗೆರೆ, ಜ.1- ರಾತ್ರಿ 12 ಗಂಟೆಯಾಗುತ್ತಲೇ ಪಟಾಕಿಗಳು ಆಕಾಶದಲ್ಲಿ ಚಿತ್ತಾರ ಮೂಡಿಸಿದವು. ಯುವಕರು ಕೇಕೆ ಹಾಕಿದರು. ಹ್ಯಾಪಿ ನ್ಯೂ ಇಯರ್ ಎಂದು ಕೂಗಿದರು. ಸಂಭ್ರಮಿಸುತ್ತಾ ಹೊಸ ವರ್ಷವನ್ನು ಸ್ವಾಗತಿಸಿದರು.

ನಗರದಲ್ಲಿ ಹೊಸ ವರ್ಷಕ್ಕೆ ಯುವಕ-ಯುವತಿಯರಿಂದ ಸಂಭ್ರಮದ ಸ್ವಾಗತ ಸಿಕ್ಕಿತು. ಪ್ರತಿಷ್ಠಿತ ಹೋಟೆಲ್‌ಗಳಲ್ಲಿ ನೆರೆದಿದ್ದವರು ಸಂಗೀತ, ಹಾಡು, ನೃತ್ಯಗಳ ಮೂಲಕ ಸಂಭ್ರಮಿಸಿದರು. ಯುವಕರು ಬೈಕ್‌ಗಳಲ್ಲಿ ಕೇಕೇ ಹಾಕುತ್ತಾ ರಸ್ತೆಗಳಲ್ಲಿ ತಿರುಗಾಡಿದರು.

ಖಾಸಗಿ ಹೋಟೆಲ್‌ಗಳಲ್ಲಿ ಆಯೋಜನೆ ಮಾಡಿದ್ದ ಇವೆಂಟ್‌ಗಳಲ್ಲಿ ಯುವ ಜನತೆ ಭಾಗಿಯಾಗಿ ಹಾಡುಗಳಿಗೆ ಕುಣಿದು ಕುಪ್ಪಳಿಸಿದರು. ಯುವಕರಿಗಿಂತ ನಾವೇನು ಕಮ್ಮಿ ಇಲ್ಲ ಎಂಬಂತೆ ಯುವತಿಯರು ಸ್ಟೆಪ್ ಹಾಕಿದರು. ಇವೆಂಟ್‌ಗಳಲ್ಲಿ ಯುವತಿಯರಿಗೆ, ಮಹಿಳೆಯರಿಗೆ ಬೌನ್ಸರ್‌ಗಳು ವಿಶೇಷ ಭದ್ರತೆ ಒದಗಿಸಿದ್ದರು.

### ಅಂದಾಜು 8 ಕೋಟಿ ರೂ. ಮೌಲ್ಯದ ಮದ್ಯ ಖರೀದಿ

**ಹೊಸ ವರ್ಷದ ಸಂಭ್ರಮ ಎಂದಾಕ್ಷಣ ಯುವಜನತೆ ಮಾತನಾಡುವುದೇ ಎಣ್ಣೆ, ಊಟದ ಬಗ್ಗೆ. ಇತ್ತೀಚೆಗಂತೂ ಮದ್ಯ ಇಲ್ಲದೆ ಸಂಭ್ರಮ ಇಲ್ಲ ಎನ್ನುವಂತಾಗಿದೆ.**

**ವಾರದ ಮೊದಲೇ ಡಿಸೆಂಬರ್ 31ರ ರಾತ್ರಿಯ ಪಾರ್ಟಿಗೆ ಸಿದ್ಧತೆಗಳು ನಡೆಯುತ್ತವೆ. ಇತ್ತ ಬಾರ್ ಅಂಡ್ ರೆಸ್ಟೋರೆಂಟ್‌ಗಳು ಗ್ರಾಹಕರನ್ನು ಆಕರ್ಷಿಸಲು ಕಸರತ್ತು ನಡೆಸುತ್ತವೆ.**

**ಸಂಭ್ರಮದ ನೆಪದಲ್ಲಿ ಪ್ರತಿ ವರ್ಷ ಮದ್ಯ ಮಾರಾಟದಲ್ಲಿಯೇ ಕೋಟ್ಯಾಂತರ ರೂಪಾಯಿ ವಹಿವಾಟು ನಡೆಯುತ್ತದೆ.**

**ಅಂದ ಹಾಗೆ ಕಳೆದ ಡಿಸೆಂಬರ್ 31ರಂದು ಡಿಪೋದಿಂದ ಜಿಲ್ಲೆಯಲ್ಲಿ ಬಾರ್‌ಗಳ ಮಾಲೀಕರು 79 ಕೋಟಿ ರೂ.ಗಳಷ್ಟು ಮದ್ಯ ಖರೀದಿಸಿದ್ದಾರೆ.**

**ಈ ಪೈಕಿ 7.26 ಕೋಟಿ ರೂ. ಮೌಲ್ಯದ 117190 ಬಾಕ್ಸ್ ಮದ್ಯವಾದರೆ, 67.33 ಲಕ್ಷ ರೂ. ಮೌಲ್ಯದ 3811 ಬಾಕ್ಸ್ ಬಿಯರ್ ಖರೀದಿಯಾಗಿದೆ.**

ಮನೆಗಳಲ್ಲಿ ಕೇಕ್ ಕತ್ತರಿಸಿ ಸಂಭ್ರಮಿಸಲು ಕೇಕ್‌ಗಳಿಗೆ ಬೇಡಿಕೆ ಹೆಚ್ಚಾಗಿತ್ತು. ಬುಧವಾರ ತಡರಾತ್ರಿಯವರೆಗೂ ಬೇಕರಿಗಳಲ್ಲಿ ಕೇಕ್ ಬಿಕರಿಯಾಯಿತು. ಗುರುವಾರವೂ ಸಂಘ-ಸಂಸ್ಥೆ ಗಳು, ಕಚೇರಿಗಳಲ್ಲಿ ಕೇಕ್ ಕತ್ತರಿಸಿ ಸಂಭ್ರಮಿಸಲಾಯಿತು.

ಮಧ್ಯಾಹ್ನ ಹಾಗೂ ರಾತ್ರಿಯೂ ಊಟದ ಹೋಟೆಲ್‌ಗಳು, ಅದರಲ್ಲೂ ನಾರ್ಥ್ ಇಂಡಿಯನ್ ಹೋಟೆಲ್‌ಗಳು ಭರ್ತಿಯಾಗಿ ದ್ದವು. ಹೆದ್ದಾರಿ ಪಕ್ಕದ ಬಾರ್ ಅಂಡ್ ರೆಸ್ಟೋರೆಂಟ್ ಗಳೂ ಭರ್ತಿಯಾಗಿದ್ದವು. (2ನೇ ಪುಟಕ್ಕೆ)

### ಸಂಭ್ರಮಾಚರಣೆ ದಿನವೇ ಅಪಘಾತ: ಯುವಕ ಸಾವು

**ದಾವಣಗೆರೆ : ಹೊಸ ವರ್ಷದ ಸಂಭ್ರಮದ ದಿನವೇ ಬೈಕ್ ಅಪಘಾತಕ್ಕೆ ಯುವಕನೊಬ್ಬ ಸಾವಿಗೀಡಾಗಿರುವ ಘಟನೆ ನಡೆದಿದೆ.**

**ನಗರದ ನೂತನ ಕಾಲೇಜ್ ಮುಂಭಾಗ ಬುಧವಾರ ರಾತ್ರಿ 1 ಗಂಟೆ ಸುಮಾರಿಗೆ ಬೈಕ್ ಅಪಘಾತ ಸಂಭವಿಸಿದೆ. ಈ ಅಪಘಾತದಲ್ಲಿ ನಿಟ್ಟುವಳ್ಳಿ ಹೊಸ ಬಡಾವಣೆಯ ಕಾರ್ತಿಕ್ (19) ಸ್ಥಳದಲ್ಲಿಯೇ ಮೃತಪಟ್ಟರೆ, ಮತ್ತೊಬ್ಬ ಯುವಕ ಗಂಭೀರವಾಗಿ ಗಾಯಗೊಂಡಿದ್ದಾನೆ.**

**ಹೊಸ ವರ್ಷ ಸಂಭ್ರಮಾಚರಣೆಗೆ ಸ್ನೇಹಿತರ ಜೊತೆ ಯುವಕ ಆಗಮಿಸುತ್ತಿದ್ದ. ಬೈಕ್‌ನಲ್ಲಿ ವೇಗವಾಗಿ ಬರುತ್ತಿದ್ದಾಗ ಬೈಕ್ ಹಾಗೂ ಕಾರು ನಡುವೆ ಅಪಘಾತದಲ್ಲಿ ನಡೆದಿದೆ. ಬೈಕ್ ಸಂಪೂರ್ಣ ಜಖಂಗೊಂಡಿದೆ.**

# ರಾಜ್ಯದಲ್ಲಿ ಡ್ರಗ್ಸ್ ಹಾವಳಿ

## ಮುಖ್ಯಮಂತ್ರಿ ಸಿದ್ದರಾಮಯ್ಯ ಆತಂಕ



ಬೆಂಗಳೂರು,ಜ.1- ರಾಜ್ಯಾದ್ಯಂತ ಕ್ರೈಮ್, ಡ್ರಗ್ಸ್ ಹಾವಳಿ ಹೆಚ್ಚುತ್ತಿರುವುದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆತಂಕ ವ್ಯಕ್ತಪಡಿಸಿದ್ದಾರೆ.

ಡ್ರಗ್ಸ್, ಕ್ರೈಮ್ ಬಗ್ಗೆ ಅಷ್ಟೇ ಅಲ್ಲ, ಭ್ರಷ್ಟಾಚಾರದ ಪಿಡುಗೂ ಸಹ ಕಡಿಮೆ ಆಗುವ ಬದಲು ಹೆಚ್ಚಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ ಮುಖ್ಯಮಂತ್ರಿ, ನಮ್ಮ ಚುನಾವಣಾ ವ್ಯವಸ್ಥೆಯೂ ಹದಗೆಟ್ಟು ಹೋಗಿದೆ ಎಂದು ಬೇಸರ ಹೊರಹಾಕಿದರು.

ಹೊಸ ವರ್ಷಾರಂಭದ ಸಂದರ್ಭದಲ್ಲಿ ಮುಖ್ಯಮಂತ್ರಿ ಗಳಿಗೆ ಹಿರಿಯ ಅಧಿಕಾರಿಗಳಿಂದ ಶುಭ ಹಾರೈಕೆಗೆ ಸರ್ಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಆಯೋಜಿಸಿದ್ದ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕಾನೂನು ಸುವ್ಯವಸ್ಥೆ, ಆರ್ಥಿಕ ಪರಿಸ್ಥಿತಿ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದಂತೆ ಅಧಿಕಾರಿಗಳ ಮುಂದೆ ತಮ್ಮ ಮಾತುಗಳನ್ನು ಬಹಳ ಸೌಮ್ಯದಿಂದ ಬಿಡಿಸಿಟ್ಟರು.

ಯುವಜನತೆ ನಮ್ಮ ಸಮಾಜದ ಆಸ್ತಿ, ಇವರ ಭವಿಷ್ಯ ಹಾಳಾಗದಂತೆ ಎಚ್ಚರ ವಹಿಸಬೇಕು. ಡ್ರಗ್ಸ್ ಹಾವಳಿ ಹೆಚ್ಚಾಗಿ ಅಪರಾಧಿಕ ಜಗತ್ತಿನ ಕಡೆ ಯುವಜನರು ಆಕರ್ಷಿತ ರಾಗುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ವಿಜ್ಞಾನ, ತಂತ್ರಜ್ಞಾನ ಬಹಳಷ್ಟು ಅಭಿವೃದ್ಧಿಯಾಗಿದೆ, ಅದನ್ನು ಪೊಲೀಸ್ ಇಲಾಖೆಯೂ ಸಮರ್ಥವಾಗಿ ಬಳಕೆ ಮಾಡಿ ಕೊಳ್ಳುತ್ತಿದೆ, ಇಷ್ಟಾದರೂ ಡ್ರಗ್ಸ್ ಹಾವಳಿ ಮತ್ತು ಕ್ರೈಮ್ ತಡೆಯುವಲ್ಲಿ ಏಕೆ ವಿಫಲರಾಗಿದ್ದೀರಿ? ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು.

ನೀವು, ಅಧಿಕಾರಿ ವರ್ಗ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಿದರೆ, ರಾಜ್ಯದಲ್ಲಿ ಅದ್ಭುತ ಬದಲಾವಣೆ ಮತ್ತು ಸುಧಾರಣೆಗಳನ್ನು ತರಲು ಸಾಧ್ಯವಿದೆ, ಇದಕ್ಕಾಗಿ ನಿಮ್ಮ ಕಾರ್ಯಕ್ಷಮತೆ ಬಳಕೆಯಾಗಲಿ ಎಂದರು.

ಅಧಿಕಾರಿ ವರ್ಗಕ್ಕೆ ನಮ್ಮ ಸಲಹೆ ಅಗತ್ಯವಿಲ್ಲ, ನೀವು ಆತ್ಮಸಾಕ್ಷಿಗೆ ತಕ್ಕಂತೆ ನಡೆದುಕೊಂಡರೆ ಸಾಕು, ಭ್ರಷ್ಟಾಚಾರ ವ್ಯವಸ್ಥೆ ಕಡಿಮೆ ಆಗುವ ಬದಲಿಗೆ ಹೆಚ್ಚುತ್ತಿರುವುದು ದುರಂತ, ಆದ್ದರಿಂದ ನಾವೆಲ್ಲರೂ ನಮ್ಮ ಆತ್ಮಸಾಕ್ಷಿಗೆ ತಕ್ಕಂತೆ ಪ್ರಾಮಾಣಿಕವಾಗಿ ನಡೆದುಕೊಳ್ಳೋಣ ಎಂದು ಕರೆ ನೀಡಿದರು.

ಹೊಸ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲು ಹಣವಿಲ್ಲ. ನಿಜ, ಆದರೆ ಬೊಕ್ಕಸ ಬರಿದಾಗಿದೆ, ಅಭಿವೃದ್ಧಿಗೆ ಹಣವಿಲ್ಲ ಎಂಬುದು ಅಪ್ಪಟ ಸುಳ್ಳು. (2ನೇ ಪುಟಕ್ಕೆ)

### ಎಟಿಎಫ್, ವಾಣಿಜ್ಯ ಸಿಲಿಂಡರ್ ದರ ಇಳಿಕೆ

ನವದೆಹಲಿ, ಜ. 1- ವೈಮಾನಿಕ ಇಂಧನವಾದ ಎಟಿಎಫ್ ದರವನ್ನು ಶೇಕಡ 1.5 ರಷ್ಟು ಇಳಿಕೆ ಮಾಡಲಾಗಿದೆ. ವಾಣಿಜ್ಯ ಬಳಕೆಯ 19 ಕೆಜಿ ಸಿಲಿಂಡರ್ ಬೆಲೆಯನ್ನು 14.5 ರೂ. ಇಳಿಕೆ ಮಾಡಲಾಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ದರಗಳು ಇಳಿಕೆಯಾಗಿರುವ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ. ಕಳೆದ 2 ತಿಂಗಳಲ್ಲಿ ದರಗಳು ಏರಿಕೆಯಾಗಿದ್ದವು. ಹೊಸ ವರ್ಷದ ಮೊದಲ ದಿನ ದರ ಇಳಿಕೆಯಾಗಿದೆ. ಸ್ಥಳೀಯ ತೆರಿಗೆಗಳಿಗೆ ಅನುಗುಣವಾಗಿ ಇಳಿಕೆಯಲ್ಲಿ ವ್ಯತ್ಯಾಸವಾಗಲಿದೆ.

### ಜಿಪಂ ಸಿಇಒ ಸುರೇಶ್ ಇಟ್ನಾಳ್ ಅವರಿಗೆ ಬಡ್ತಿ



ದಾವಣಗೆರೆ, ಜ. 1- ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಬಿ. ಇಟ್ನಾಳ್ ಅವರಿಗೆ ಬಡ್ತಿ ನೀಡಿ ರಾಜ್ಯ ಸರ್ಕಾರ ಆದೇಶ ನೀಡಿದೆ.

ಜನವರಿ 1 ರಿಂದ ಜಾರಿ ಬರುವಂತೆ ಜ್ಯೂನಿಯರ್ ಅಡ್ಮಿನಿಸ್ಟ್ರೇಟಿವ್ ಗ್ರೇಡ್ ಹುದ್ದೆಯನ್ನು ನೀಡಿರುವ ಸರ್ಕಾರ ಸದ್ಯಕ್ಕೆ ಸ್ಥಳವನ್ನು ತೋರಿಸಿಲ್ಲ. ಈ ಹುದ್ದೆ ಅಲಂಕರಿಸುವವರೆಗೆ ಸಿಇಒ ಆಗಿಯೇ ಕಾರ್ಯ ನಿರ್ವಹಿಸಲಿದ್ದಾರೆ.

### ಎರಡು ಬೆಳೆ ವಿಮೆ ಯೋಜನೆ ವಿಸ್ತರಣೆ

ನವದೆಹಲಿ, ಜ. 1- ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಹಾಗೂ ಪರಿವರ್ತಿತ ಹವಾಮಾನ ಆಧರಿತ ಫಸಲ್ ಬಿಮಾ ಯೋಜನೆಗಳನ್ನು 2025- 26 ರವರೆಗೆ ವಿಸ್ತರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಈ ಯೋಜನೆಗಳಿಗೆ ತಂತ್ರಜ್ಞಾನ ಒದಗಿಸಲು 824.77 ಕೋಟಿ ರೂ.ಗಳ ನಿಧಿ ರೂಪಿಸಲು ತೀರ್ಮಾನಿಸಲಾಗಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟದ ಆರ್ಥಿಕ ಸಮಿತಿ ಸಭೆಯಲ್ಲಿ ಈ ನಿರ್ಧಾರ ತೆಗೆದು ಕೊಳ್ಳಲಾಗಿದೆ. ಈ 2 ಯೋಜನೆಗಳಿಗೆ 2021-22 ರಿಂದ 2025-26 ರವರೆಗೆ 69,515.71 ಕೋಟಿ ರೂ. ಒದಗಿಸಲು ನಿರ್ಧರಿಸಲಾಗಿದೆ.

### ಡಿಎಪಿ ಗೊಬ್ಬರಕ್ಕೆ ವಿಶೇಷ ಪ್ಯಾಕೇಜ್

ನವದೆಹಲಿ, ಜ.1- ಡಿಎಪಿ ಗೊಬ್ಬರಕ್ಕಾಗಿ ಕೇಂದ್ರ ಸರ್ಕಾರ 3,250 ಕೋಟಿ ರೂ.ಗಳ ವಿಶೇಷ ಪ್ಯಾಕೇಜ್ ಘೋಷಿಸಿದೆ. ಪ್ರತಿ 50 ಕೆಜಿ ಡಿಎಪಿ ಗೊಬ್ಬರವನ್ನು ರೈತರಿಗೆ 1,950 ರೂ. ದರದಂತೆ ಮಾರುವುದನ್ನು ಮುಂದು ವರೆಸಲು ಈ ಕ್ರಮ ತೆಗೆದುಕೊಳ್ಳಲಾಗಿದೆ. ಸಚಿವ ಸಂಪುಟದ ಆರ್ಥಿಕ ವ್ಯವಹಾರಗಳ ಸಮಿತಿ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಗಿದೆ.

# ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಿಗೆ ಆಮಂತ್ರಣ

ದಾವಣಗೆರೆ, ಜ. 1 - ಇದೇ ದಿನಾಂಕ 11, 12 ರಂದು ಜಗಳೂರಿನಲ್ಲಿ ನಡೆಯಲಿರುವ ದಾವಣಗೆರೆ ಜಿಲ್ಲಾ 14ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ನಿಯೋಜಿತಗೊಂಡಿರುವ ಡಾ. ಎ.ಬಿ. ರಾಮಚಂದ್ರಪ್ಪ ಅವರನ್ನು ಇಂದು ಸಂಜೆ ಸ್ಥಳೀಯ ಜಯನಗರದಲ್ಲಿರುವ ಅವರ ನಿವಾಸದಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ಅವರ ನೇತೃತ್ವದಲ್ಲಿ ಆಹ್ವಾನ ಪತ್ರಿಕೆ ನೀಡಿ ಸಮ್ಮೇಳನಕ್ಕೆ ಅಧಿಕೃತವಾಗಿ ಆಹ್ವಾನಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ಮಾತನಾಡಿ, ಸಮ್ಮೇಳನದ ಸರ್ವಾಧ್ಯಕ್ಷ ರಾಗಿ ಡಾ. ರಾಮಚಂದ್ರಪ್ಪನವರ ಆಯ್ಕೆ ಅತ್ಯಂತ ಪರಿಪೂರ್ಣವಾದದ್ದು ಹಾಗೂ ಸಮ್ಮೇಳನಕ್ಕೆ ಕಳಶ ಪ್ರಾಯವಾಗಿದೆ ಎಂದು ನುಡಿದರು.

ಈ ಸಮ್ಮೇಳನವು ಹಲವಾರು ವೈಶಿಷ್ಟ್ಯಗಳಿಂದ ಕೂಡಿದ್ದು, ಅದರಲ್ಲಿ 'ಕನ್ನಡ ರಥ' ಜಗಳೂರು ತಾಲ್ಲೂಕಿನ ಎಲ್ಲಾ 22 ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಹಳ್ಳಿಗಳಲ್ಲೂ ಒಂಬತ್ತು ದಿನಗಳ ಕಾಲ ಸಂಚರಿಸಿ, ಕನ್ನಡ ಜಾಗೃತಿ ಮೂಡಿಸುವುದರೊಂದಿಗೆ ಎಲ್ಲಾ ಕನ್ನಡಿಗರನ್ನು ಸಮ್ಮೇಳನಕ್ಕೆ ಅಧಿಕೃತವಾಗಿ ಆಹ್ವಾನ ನೀಡಲಾಗುತ್ತದೆ. ಸಮ್ಮೇಳನದಲ್ಲಿ ಅರ್ಥಪೂರ್ಣ ಗೋಷ್ಠಿಗಳನ್ನು ಏರ್ಪಡಿಸ ಲಾಗಿದ್ದು, ಹೆಸರಾಂತ ಸಾಹಿತಿಗಳನ್ನು ಆಹ್ವಾನಿಸಲಾಗಿದೆ.

ಸಮ್ಮೇಳನದ ಮೆರವಣಿಗೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 10



ವೈಶಿಷ್ಟ್ಯ ಪೂರ್ಣವಾದ ಕಲಾ ತಂಡಗಳು ಹಾಗೂ ಜಗಳೂರಿನ ಸ್ಥಳೀಯ ಕಲಾ ತಂಡಗಳು ಭಾಗವಹಿಸಿ ಮೆರುಗು ನೀಡಲಿವೆ. ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಸುಮಾರು 9 ಕೃತಿಗಳು ಅನಾವರಣಗೊಳ್ಳಲಿವೆ. ಹೀಗೆ ಹಲವು ವೈಶಿಷ್ಟ್ಯಗಳಿಂದ ಈ ಸಮ್ಮೇಳನ ಆಯೋಜನೆ ಗೊಳ್ಳಲಿದೆ ಎಂದು ತಿಳಿಸುತ್ತಾ ದಿ. 2 ರಂದು ಬೆಳಗ್ಗೆ 9 ಗಂಟೆಗೆ ಕನ್ನಡ ರಥ ಸಂಚಾರದ ಉದ್ಘಾಟನೆ ನೆರವೇರಲಿದೆ ಎಂದು ತಿಳಿಸಿದರು.

ಸಮ್ಮೇಳನವು ಅಭೂತ ಪೂರ್ವವಾಗಿ ಆಯೋಜನೆ ಗೊಳ್ಳುವಲ್ಲಿ ಜಗಳೂರು ಶಾಸಕ ಬಿ. ದೇವೇಂದ್ರಪ್ಪ ಅವರ ಆಸಕ್ತಿ, ಕಾಳಜಿ ಎಲ್ಲರನ್ನೂ ವಿಸ್ಮಯಗೊಳಿಸಿದೆ ಎಂದರು.

ಜಗಳೂರಿನ ಹಿರಿಯ ಸಾಹಿತಿಗಳಾದ ಎನ್.ಟಿ. ಎರ್ರಿ ಸ್ವಾಮಿ, ಹರಿಹರದ ಮರಿಯೋಜಿ ರಾವ್ ಮಾತನಾಡಿದರು.

> **ಸಮ್ಮೇಳನದ ಯಶಸ್ಸಿಗೆ ಪರಿಪೂರ್ಣ ಪ್ರಮಾಣದಲ್ಲಿ ನ್ಯಾಯ ಒದಗಿಸುತ್ತೇನೆ.**
> **- ಡಾ. ಎ.ಬಿ. ರಾಮಚಂದ್ರಪ್ಪ**
> **ನಿಯೋಜಿತ ಜಿಲ್ಲಾ ಸಮ್ಮೇಳನಾಧ್ಯಕ್ಷರು**

ಸಮ್ಮೇಳನದ ಸರ್ವಾಧ್ಯಕ್ಷರಾಗಿ ನಿಯೋಜಿತಗೊಂಡಿರುವ ಡಾ. ಎ.ಬಿ. ರಾಮಚಂದ್ರಪ್ಪ ಮಾತನಾಡಿ, ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ನನ್ನನ್ನು ಆಯ್ಕೆ ಮಾಡಿರುವುದು ತುಂಬಾ ಸಂತೋಷವಾಗಿದೆ ಎಂದರು. ಸಮ್ಮೇಳನದ ಸಿದ್ಧತೆಗಳನ್ನು ಗಮನಿಸಿದಾಗ ಇದೊಂದು ಅಭೂತಪೂರ್ವ ಸಮ್ಮೇಳನವಾಗಲಿದೆ. ಸಮ್ಮೇಳನದ ಆಹ್ವಾನ ಪತ್ರಿಕೆಯೇ ಸಮ್ಮೇಳನದ ಪ್ರತಿಬಿಂಬದಂತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಸಮ್ಮೇಳನದ ಯಶಸ್ಸಿಗೆ ಪರಿಪೂರ್ಣ ಪ್ರಮಾಣದಲ್ಲಿ ನ್ಯಾಯ ಒದಗಿಸುತ್ತೇನೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಸಾಪದ ಗೌರವ ಕಾರ್ಯದರ್ಶಿಗಳಾದ ಬಿ. ದಿಳ್ಯಪ್ಪ, ರೇವಣಸಿದ್ದಪ್ಪ ಅಂಗಡಿ, ಕೋಶಾಧ್ಯಕ್ಷ ಕೆ. ರಾಘವೇಂದ್ರ ನಾಯರಿ, ಸಂಘಟನಾ ಕಾರ್ಯದರ್ಶಿಗಳಾದ ಸಿ.ಜಿ. ಜಗದೀಶ್ ಕೂಲಂಬಿ, ಜಿಗಳಿ ಪ್ರಕಾಶ್, ಕಾರ್ಯಕಾರಿ ಸಮಿತಿ ಸದಸ್ಯ ಎಸ್.ಎಂ. ಮಲ್ಲಮ್ಮ, ಸತ್ಯಭಾಮ ಮಂಜುನಾಥ್, ರುದ್ರಾಕ್ಷಿ ಬಾಯಿ ಪುಟ್ಟನಾಯ್ಕ್, ತಾಲ್ಲೂಕು ಕಸಾಪ (2ನೇ ಪುಟಕ್ಕೆ)

### ಕೆಎಸ್ಸಾರ್ಟಿಸಿಗೆ ರಾಷ್ಟ್ರಮಟ್ಟದ 9 ಪ್ರಶಸ್ತಿ

ಬೆಂಗಳೂರು, ಜ. 1 - ರಾಷ್ಟ್ರಮಟ್ಟದ 9 ಪ್ರಶಸ್ತಿಗಳಿಗೆ ಕೆಎಸ್‌ಆರ್‌ಟಿಸಿ ಭಾಜನವಾಗಿದೆ. ಅಶ್ವಮೇಧ ಕ್ಲಾಸಿಕ್ ಬಸ್ಸುಗಳ ಪರಿಚಯಕ್ಕೆ ಪರಿಣಾಮಕಾರಿ ಸಾರ್ವಜನಿಕ ಸಂಪರ್ಕ ಉಪಕ್ರಮ ಪ್ರಶಸ್ತಿ, ಅತ್ಯುತ್ತಮ ಕಾರ್ಪೊರೇಟ್ ಸಂವಹನ ಹಾಗೂ ನಿರ್ವಹಣೆ ಪ್ರಶಸ್ತಿ, ವರ್ಷದ ಅತ್ಯುತ್ತಮ ಬ್ರ್ಯಾಂಡ್ ಪ್ರಶಸ್ತಿ, ಅಂಬಾರಿ ಉತ್ಸವಕ್ಕೆ ಅತ್ಯುತ್ತಮ ಬ್ರ್ಯಾಂಡ್ ಅನುಭವ ಪ್ರಶಸ್ತಿ, ಪಲ್ಲಕ್ಕಿ ಬಸ್‌ಗೆ ಅತ್ಯುತ್ತಮ ಗ್ರಾಹಕ ಸ್ವೀಕೃತಿ ಪ್ರಶಸ್ತಿ, ಪ್ರತಿಷ್ಠಿತ ಬಸ್‌ಗಳ ಸೇವೆಗಳ ಬ್ರ್ಯಾಂಡಿಂಗ್‌ಗೆ ಅತ್ಯುತ್ತಮ ಸಾರ್ವಜನಿಕ ಸಂಪರ್ಕ ಪ್ರಶಸ್ತಿಗಳು ಲಭಿಸಿವೆ.

ನಿಗಮವು ಅತ್ಯುತ್ತಮ ಪರಿಸರ ನಿರ್ವಹಣೆ ಹಾಗೂ ವಿನೂತನ ಮಾನವ ಸಂಪನ್ಮೂಲ ಯೋಜನೆಗಳ ಅನುಷ್ಠಾನಕ್ಕಾಗಿ ಗ್ರೋ ಕೇರ್ ಇಂಡಿಯಾ ಪ್ರಶಸ್ತಿಯನ್ನು ಎರಡು ವಿಭಾಗದಲ್ಲಿ ಪಡೆದಿದೆ. ದೆಹಲಿಯಲ್ಲಿ ಆ್ಯಡ್‌ವರ್ಲ್ಡ್ ಪ್ರಶಸ್ತಿಗಳನ್ನು, ಗೋವಾದಲ್ಲಿ ಗ್ರೋ ಕೇರ್ ಇಂಡಿಯಾ ಪ್ರಶಸ್ತಿ ಹಾಗೂ ರಾಯಪುರದಲ್ಲಿ ಪಿಆರ್‌ಎಸ್‌ಐ ಪ್ರಶಸ್ತಿ ಪ್ರದಾನ ಮಾಡಲಾಯಿತು.

### 1.77 ಲಕ್ಷ ಕೋಟಿ ರೂ. ಜಿಎಸ್ಟಿ ಸಂಗ್ರಹ

ನವದೆಹಲಿ, ಜ. 1- ಕಳೆದ ಡಿಸೆಂಬರ್ ತಿಂಗಳಲ್ಲಿ 1.77 ಲಕ್ಷ ಕೋಟಿ ರೂ. ಜಿಎಸ್‌ಟಿ ಸಂಗ್ರಹಿಸಲಾಗಿದೆ. ತೆರಿಗೆ ಸಂಗ್ರಹದಲ್ಲಿ ಶೇ. 7.3 ರ ಹೆಚ್ಚಳವಾಗಿದೆ. ನವೆಂಬರ್ ತಿಂಗಳಲ್ಲಿ 1.82 ಲಕ್ಷ ಕೋಟಿ ರೂ. ತೆರಿಗೆ ಸಂಗ್ರಹವಾಗಿತ್ತು. 2024ರ ಏಪ್ರಿಲ್ ತಿಂಗಳಲ್ಲಿ ಅತಿ ಹೆಚ್ಚಿನ 2.10 ಲಕ್ಷ ಕೋಟಿ ರೂ. ತೆರಿಗೆ ಸಂಗ್ರಹವಾಗಿತ್ತು.

## ಮುದೇಗೌಡ್ರ ಪ್ರಕಾಶ್ ನಿಧನ



ದಾವಣಗೆರೆ ಮುದೇಗೌಡರ ಗಲ್ಲಿ, ಕಾಳಿಕಾದೇವಿ ದೇವಸ್ಥಾನದ ಹತ್ತಿರದ ವಾಸಿಗಳಾದ

**ಮುದೇಗೌಡ್ರ ಪ್ರಕಾಶ್**


ಇವರು ದಿನಾಂಕ 1.1.2025ನೇ ಬುಧವಾರ ರಾತ್ರಿ 8.00 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 75 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 2.01.2025ನೇ ಗುರುವಾರ ಮಧ್ಯಾಹ್ನ 1 ಗಂಟೆಗೆ ಗಾಂಧಿನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

**ಮುದೇಗೌಡ್ರ ವಂಶಸ್ಥರು ಹಾಗೂ ಬಂಧು-ಮಿತ್ರರು**

**ಮೊ. : 99641 64315**

# ಈ ವರ್ಷ ಉತ್ತಮ ಆರ್ಥಿಕ ಬೆಳವಣಿಗೆ ನಿರೀಕ್ಷೆ ; ಶೀಘ್ರ ಬಡ್ಡಿ ದರ ಕಡಿತ ಸಾಧ್ಯತೆ



ನವದೆಹಲಿ, ಜ.1- ಸೆಪ್ಟೆಂಬರ್ ಚತುರ್ಥದಲ್ಲಿ ಕುಂಠಿತವಾಗಿದ್ದ ಆರ್ಥಿಕ ಬೆಳವಣಿಗೆಗೆ ತೆರೆ ಎಳೆದು ಮತ್ತೆ ವೇಗದ ಆರ್ಥಿಕ ಬೆಳವಣಿಗೆಯ ದಾರಿಗೆ ಬರಲು ಭಾರತ ಹಲವಾರು ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ.

ಜಾಗತಿಕ ಸಂಘರ್ಷಗಳ ನಡುವೆ ಸಮತೋಲನ ಕಾಯ್ದುಕೊಳ್ಳಬೇಕಿದೆ. ಹಣದುಬ್ಬರ ನಿಯಂತ್ರಿಸುವ ಹಾಗೂ ಖಾಸಗಿ ವಲಯ ಹೂಡಿಕೆಗೆ ಮುಂದಾಗುವ ವಾತಾವರಣ ರೂಪಿಸುವ ಕ್ರಮಗಳನ್ನು ತೆಗೆದುಕೊಂಡಾಗ ವೇಗದ ಆರ್ಥಿಕ ಬೆಳವಣಿಗೆ ಸಾಧ್ಯವಾಗಲಿದೆ.

ಹಬ್ಬದ ದಿನಗಳ ಚಟುವಟಿಕೆಗಳು ಹಾಗೂ ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಬೇಡಿಕೆ ಕಾರಣದಿಂದ 2024-25ರ ಮೂರನೇ ಚತುರ್ಥದಲ್ಲಿ ಬೆಳವಣಿಗೆ ಉತ್ತಮವಾಗಿರಲಿದೆ ಎಂದು ರಿಸರ್ವ್ ಬ್ಯಾಂಕ್ ಆರ್ಥಿಕ ಪರಿಣಿತರು ಅಭಿಪ್ರಾಯ ಪಟ್ಟಿದ್ದಾರೆ.

ಸೆಪ್ಟೆಂಬರ್ ಚತುರ್ಥದಲ್ಲಿ ಆರ್ಥಿಕ ಬೆಳವಣಿಗೆ ಶೇ. 5.4 ಹಂತಕ್ಕೆ ಕುಸಿದಿದ್ದು ಕೇವಲ ತಾತ್ಕಾಲಿಕ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಬೆಳವಣಿಗೆ ದರ ಹಾಗೂ ಹಣದುಬ್ಬರದ ನಡುವೆ ಸಮತೋಲನ ತರುವ ಕುರಿತು ಹಣಕಾಸು ಸಚಿವಾಲಯ ಹಾಗೂ ರಿಸರ್ವ್ ಬ್ಯಾಂಕ್ ಬೇರೆ ಬೇರೆ ನಿಲುವು ಹೊಂದಿವೆ.

ಫೆಬ್ರವರಿ ತಿಂಗಳಲ್ಲಿ ರಿಸರ್ವ್ ಬ್ಯಾಂಕ್ ಹಣಕಾಸು ನೀತಿ ಸಮಿತಿಯ ಸಭೆ ನಡೆಯಲಿದೆ. ಈ ಸಭೆಯಲ್ಲಿ ಬಡ್ಡಿ ದರ ಕಡಿತಗೊಳಿಸುವ ನಿರೀಕ್ಷೆ ಇದೆ. ನೂತನ ಗವರ್ನರ್ ಸಂಜಯ್ ಮಲ್ಹೋತ್ರ ಅವರ (2ನೇ ಪುಟಕ್ಕೆ)




# ಮಠಗಳು ರಾಜಕೀಯದಿಂದ ದೂರ ಇದ್ದಾಗ ಸುಧಾರಣೆ ಸಾಧ್ಯ

## ಶ್ರೀ ಶರಣ ಬಸವಲಿಂಗ ಸ್ವಾಮೀಜಿ 75ನೇ ಹುಟ್ಟು ಹಬ್ಬದ ಸಮಾರಂಭದಲ್ಲಿ ಮಾಜಿ ಶಾಸಕ ಹೆಚ್.ಎಸ್ ಶಿವಶಂಕರ್



ಹರಿಹರ, ಜ.1- ಶ್ರೀ ಶರಣ ಬಸವಲಿಂಗ ಶ್ರೀಗಳು ತಮ್ಮ ಜ್ಞಾನ ಹಾಗೂ ಶಕ್ತಿಯ ಬಲದಿಂದ 256 ಅನುಷ್ಠಾನಗಳನ್ನು ಮಾಡಿ ರಾಷ್ಟ್ರೀಯ ಶ್ರೇಷ್ಠ ಸಂತರಾಗಿ ಹೊರಮ್ಮಿದ್ದಾರೆ ಎಂದು ಮಾಜಿ ಶಾಸಕ ಹೆಚ್.ಎಸ್ ಶಿವಶಂಕರ್ ಹೇಳಿದರು.

ನಗರದ ಹೊಸಭರಂಪುರ ಬಡಾವಣೆಯ ನೂರಾ ಎಂಟು ಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ನಡೆದ ದಾನಮ್ಮ ದೇವಿಯ ಪುರಾಣ ಮಂಗಲೋತ್ಸವ ಹಾಗೂ ಶ್ರೀ ಶರಣ ಬಸವಲಿಂಗ ಸ್ವಾಮಿಗಳವರ 75 ನೇ ಹುಟ್ಟು ಹಬ್ಬದ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಸೊಲ್ಲಾಪುರ ನಗರದಲ್ಲಿ ಬಹಳಷ್ಟು ಪ್ರಚಲಿತ ವಾಗಿರುವ ಶರಣ ಶ್ರೀ ಬಸವಲಿಂಗ ಶ್ರೀಗಳವರನ್ನು ಹರಿಹರ ನಗರಕ್ಕೆ ಕರೆ ತರುವುದರೊಂದಿಗೆ ಅವರ ಹುಟ್ಟು ಹಬ್ಬದ ಆಚರಣೆಯನ್ನು ಅದ್ದೂರಿಯಾಗಿ ಮಾಡುತ್ತಿರುವುದು ಸಂತಸದ ವಿಚಾರ ಎಂದರು. ಎಲ್ಲಾ ಧರ್ಮಗಳು ಶ್ರೇಷ್ಠವಾಗಿವೆ. ಆದರೆ ಧರ್ಮ ಸಂಘರ್ಷ ಹೋಗಬೇಕಾದರೆ, ಯಾವುದೇ ಮಠದ ಶ್ರೀಗಳೇ ಇರಲಿ ರಾಜಕೀಯದಿಂದ ಹೊರಗಡೆ ಇದ್ದು, ಜನರಿಗೆ ಸನ್ಮಾರ್ಗ, ಸಂಸ್ಕಾರ ನೀಡಿದಾಗ ಸಮಾಜದಲ್ಲಿ ಸುಧಾರಣೆ ತರಲು ಸಾಧ್ಯವಾಗುತ್ತದೆ ಎಂದು ಅವರು ಹೇಳಿದರು.

ಶ್ರೀ ಶರಣ ಬಸವಲಿಂಗ ಸ್ವಾಮಿಗಳು ಮಾತ ನಾಡಿ, ನಾವೆಲ್ಲರೂ ಧರ್ಮದಿಂದ, ಸತ್ಯದಿಂದ, ಪೂಜೆ, ಧ್ಯಾನ ಮಾಡುತ್ತ ಬದುಕೋಣ, ಧರ್ಮವನ್ನು ರಕ್ಷಣೆ ಮಾಡಿ, ಅದನ್ನು ಎತ್ತಿ ಹಿಡಿಯುವಂತಹ ನಿಟ್ಟಿನಲ್ಲಿ ಎಲ್ಲರೂ ಸಾಗೋಣ ಎಂದು ಹೇಳಿದರು.

ಒಳ್ಳೆಯ ಕೆಲಸವನ್ನು ಮಾಡಬೇಕಾದರೆ ಜನರ ಸಹಕಾರದ ಅವಶ್ಯಕತೆ ಇರುತ್ತದೆ. ಸಮಿತಿಯ ಸದಸ್ಯರು ನಿಷ್ಠೆಯಿಂದ ಸೇವೆಯನ್ನು ಮಾಡುವುದಕ್ಕೆ ಮುಂದಾದರೆ, ಇಲ್ಲಿನ ಮಠವನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಬೆಳೆಸುವುದಕ್ಕೆ ನಾನು ಸಿದ್ದನಿದ್ದು, ನನಗೆ ಸೊಲ್ಲಾಪುರ ಸ್ವಾಮೀಜಿ ಅನ್ನುವುದಕ್ಕಿಂತ, ನೂರಾ ಎಂಟು ಲಿಂಗೇಶ್ವರ ಸ್ವಾಮಿಗಳು ಎನ್ನುವಂತಹ ಹೆಸರೇ ಹೆಚ್ಚು ಪ್ರಚಲಿತದಲ್ಲಿದೆ ಎಂದು ಅವರು ಹೇಳಿದರು.

ಮಾಜಿ ಶಾಸಕ ಎಸ್. ರಾಮಪ್ಪ ಮಾತನಾಡಿ, ದೇವಸ್ಥಾನ ಅಭಿವೃದ್ಧಿ ಆಗಬೇಕಾದರೆ ಆದಾಯದ ಮೂಲ ಬಹಳಷ್ಟು ಅತ್ಯವಶ್ಯಕವಾಗಿದೆ. ಹಾಗಾಗಿ ದೇವಸ್ಥಾನಕ್ಕೆ ಆದಾಯ ಬರುವ ನಿಟ್ಟಿನಲ್ಲಿ ಮಳಿಗೆ ನಿರ್ಮಾಣಕ್ಕೆ ಗುದ್ದಲಿ ಪೂಜೆ ಮಾಡಿರುವುದು ಸಂತಸದ ವಿಚಾರ. ಇದಕ್ಕೆ ನನ್ನ ಕಡೆಯಿಂದ ಆಗುವ ಸಹಕಾರ ನೀಡುವುದಾಗಿ ಹೇಳಿದರು.

ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಡಿ. ಜೆ. ಶಿವಾನಂದಪ್ಪ, ನಗರಸಭೆ ಉಪಾಧ್ಯಕ್ಷ ಗುತ್ತೂರು ಜಂಬಣ್ಣ, ನಗರಸಭೆ ಸದಸ್ಯ ಕೆ.ಬಿ. ರಾಜಶೇಖರ್, ಎಸ್.ಎಸ್.ಕೆ. ಸಮಾಜದ ಉಪಾಧ್ಯಕ್ಷ ಪರಶುರಾಮ್ ಕಾಟ್ವೆ, ಮಂಜುನಾಥ್ ಅಪ್ಪಜ್ಜಿ ಮಾತನಾಡಿದರು.

ಸರ್ವೋದಯ ಮಠದ ಶ್ರೀ ಶಿವಕುಮಾರ ಸ್ವಾಮಿಗಳು, ಪಂಚಾಕ್ಷರಿ ಮಠದ ಶ್ರೀಗಳು, ನಿಂಬಕ್ಕ ಚಂದಪೂರ್, ಜ್ಯೋತಿ ಪ್ರಕಾಶ್, ಜೆ.ನಂಜಪ್ಪ, ಹೊಸಪೇಟೆ ವೆಂಕಟೇಶ್, ಬೆಣ್ಣೆ ರೇವಣಸಿದ್ದಪ್ಪ, ಪಿ.ಎನ್. ವಿರೂಪಾಕ್ಷಪ್ಪ, ನಾಗರಾಜ್ ಕುರುವತ್ತಿ, ಪರಶುರಾಮ್ ಕಾಟ್ವೆ, ಕಂಚಿಕೇರಿ ಶಿವಕುಮಾರ್, ಹಾವನೂರು ಮಹಾರುದ್ರಪ್ಪ, ಕಂಚಿಕೇರಿ ಕರಿಬಸಪ್ಪ, ಮಹಾಂತೇಶ್, ಬೆಣ್ಣೆ ಸಿದ್ದೇಶ್, ಮಜ್ಜಿಗೆ ಚಂದ್ರಪ್ಪ, ಪರಮೇಶ್ವರಪ್ಪ, ಹರಪನಹಳ್ಳಿ ಬಸವರಾಜ್, ಹಿರೇಬಿದರಿ ಕೊಟ್ರೇಶಪ್ಪ, ಈರಣ್ಣ ಹಾವನೂರು, ಗಜೇಂದ್ರ, ಬೆಟ್ಟಪ್ಪ, ಅಮರಾವತಿ ನಾಗರಾಜ್, ಅಡಕಿ ಕುಮಾರ್, ಶಿವಕುಮಾರ್, ರಾಜು ವೆಲ್ಡಿಂಗ್ ಇತರರು ಉಪಸ್ಥಿತರಿದ್ದರು.

ರಾಜಶೇಖರ ಸಂಗಳಕರ ಹುಬ್ಬಳ್ಳಿ ಪ್ರಾರ್ಥಿಸಿದರು. ಶಶಿಕುಮಾರ್ ತಾಳಿಕೋಟಿ ಸ್ವಾಗತಿಸಿದರು. ಉಪನ್ಯಾಸಕ ಗುರುಬಸವರಾಜಯ್ಯ ನಿರೂಪಿಸಿದರು. ಕಂಚಿಕೇರಿ ಕೆ.ಜಿ ಶಿವಕುಮಾರ್ ವಂದಿಸಿದರು.

### ಶಾಸಕರಿಂದ ಹೆಚ್. ಬಸವರಾಜ್‌ಗೆ ಸನ್ಮಾನ



ದಾವಣಗೆರೆ, ಜ.1- ಇಲ್ಲಿನ ಜಿಲ್ಲಾ ಪಂಚಾಯಿತಿ ಎದುರು ಈಚೆಗೆ ಆಯೋಜಿಸಿದ್ದ ಅಜಾತಶತ್ರು ಅಟಲ್ ಬಿಹಾರಿ ವಾಜಪೇಯಿ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ರಾಜ್ಯಪಾಲರಿಂದ ಸ್ಕೌಟ್ ಗೈಡ್ ಪುರಸ್ಕೃತ ಹಾಗೂ ಎನ್ನೆಸ್ಸೆಸ್ ಸೇರಿದಂತೆ, ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ವಿದ್ಯಾರ್ಥಿ ಬಸವರಾಜ ಹೆಚ್. ಕಡ್ಲೆಬಾಳು ಅವರನ್ನು ಶಾಸಕ ಬಿ.ಪಿ. ಹರೀಶ್ ಸನ್ಮಾನಿಸಿದರು.

ಈ ವೇಳೆ ಬಿಜೆಪಿ ಜಿಲ್ಲಾಧ್ಯಕ್ಷ ಎನ್. ರಾಜಶೇಖರ್, ಹನಗವಾಡಿ ವೀರೇಶ್, ಚಂದ್ರಶೇಖರ್ ಪೂಜಾರ್, ಧನಂಜಯ್ ಕಡ್ಲೆಬಾಳು ಹಾಗೂ ಇತರರು ಇದ್ದರು.

### ಸಮ್ಮೇಳನದ ಸರ್ವಾಧ್ಯಕ್ಷರಿಗೆ ಆಮಂತ್ರಣ

(1ನೇ ಪುಟದಿಂದ) ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ, ಗೌರವ ಕಾರ್ಯ ದರ್ಶಿಯಾದ ದಾಗಿನಕಟ್ಟೆ ಪರಮೇಶ್ವರಪ್ಪ, ಕೋಶ್ಯಾಧ್ಯಕ್ಷ ಎಚ್.ಕೆ. ಪಾಲಾಕ್ಷಪ್ಪ ಗೋಪನಾಳು, ನಿರ್ದೇಶಕರಾದ ಎ.ಎಂ. ಸಿದ್ದೇಶ್ ಕುರ್ಕಿ, ಷಡಕ್ಷರಪ್ಪ ಬೇತೂರು, ಆರ್. ಶಿವಕುಮಾರ್, ಕೆ.ಜಿ. ಸೌಭಾಗ್ಯ, ಆನೆಕೊಂಡದ ಲಿಂಗರಾಜ್, ಸಾಹಿತಿ ಜಿ.ಆರ್. ರೇವಣಸಿದ್ದಪ್ಪ, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಡಾ. ಎಂ. ಮಂಜಣ್ಣ ಮುಂತಾದವರು ಉಪಸ್ಥಿತರಿದ್ದರು.

# ಹೊಸ ವರ್ಷಕ್ಕೆ ವೃದ್ಧೆಗೆ 'ವಾತ್ಸಲ್ಯ' ಮನೆ

## ಹೊಳೆಸಿರಿಗೆರೆ: ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕೊಡುಗೆ



ಮಲೇಬೆನ್ನೂರು, ಜ. 1- ಹೊಳೆಸಿರಿಗೆರೆ ಗ್ರಾಮದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾ ಭಿವೃದ್ಧಿ ಯೋಜನೆಯ ಜ್ಞಾನವಿಕಾಸ ಕಾರ್ಯಕ್ರಮದಡಿಯಲ್ಲಿ ನಿರ್ಮಿಸಿರುವ 'ವಾತ್ಸಲ್ಯ' ಮನೆಯನ್ನು ಕಡು ಬಡ ಮಹಿಳೆ ರಟ್ಟಿಹಳ್ಳಿ ಸಿದ್ದಮ್ಮ ಅವರಿಗೆ ಬುಧವಾರ ಹೊಸ ವರ್ಷದ ಕೊಡುಗೆಯಾಗಿ ಹಸ್ತಾಂತರಿಸಲಾಯಿತು.

'ವಾತ್ಸಲ್ಯ' ಮನೆಯಲ್ಲಿ ಶ್ರೀ ಮಂಜುನಾಥ ಸ್ವಾಮಿ ಭಾವಚಿತ್ರ ಇಟ್ಟು ಪೂಜೆ ಸಲ್ಲಿಸಿದ ನಂತರ ಹಾಲು ಉಕ್ಕಿಸುವ ಶಾಸ್ತ್ರ ಮಾಡಿ, ಗೋಮಾತೆಯ ಪ್ರವೇಶವನ್ನೂ ಮಾಡಿಸಲಾಯಿತು.

ಬಳಿಕ ಜಿಲ್ಲಾ ಜನಜಾಗೃತಿ ವೇದಿಕೆಯ ಉಪಾಧ್ಯಕ್ಷ ಎನ್.ಜಿ. ನಾಗನಗೌಡ್ರು ಟೇಪ್ ಕತ್ತರಿಸಿ ಹೊಸ ಮನೆಯನ್ನು ಉದ್ಘಾಟಿಸಿ, ದೀಪ ಬೆಳಗಿಸಿದರು.

ಈ ಸರಳ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಧರ್ಮಸ್ಥಳ ಯೋಜನೆಯ ಜಿಲ್ಲಾ ನಿರ್ದೇಶಕ ಲಕ್ಷ್ಮಣ್ ಅವರು, ಬಡವರ ಪರಿವರ್ತನೆ ಮತ್ತು ಏಳಿಗೆಗಾಗಿ ಹತ್ತು ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದಾರೆ. 'ವಾತ್ಸಲ್ಯ' ಯೋಜನೆ ಕಡು ಬಡವರಿಗೆ ವರದಾನವಾಗಿದ್ದು, ಜಾಗ ತೋರಿಸಿದರೆ ನಾವೇ ಮನೆ ಕಟ್ಟಿಸಿ, ಗೃಹ ಪ್ರವೇಶ ಮಾಡಿಸಿ, ಮನೆಗೆ ಅಗತ್ಯ ಸಾಮಾನುಗಳನ್ನೂ ಕೊಡುತ್ತೇವೆ.

ಮದ್ಯವರ್ಜನೆ ಶಿಬಿರ ಕೂಡಾ ಕುಡಿತಕ್ಕೆ ಒಳಗಾಗಿರುವ ಬಡವರನ್ನು ಕುಡಿತದಿಂದ ಹೊರತರಲು ಸಹಕಾರಿಯಾಗಲಿದೆ. 2025ರ ಹೊಸ ವರ್ಷದ ದಿನದಂದು ಸಿದ್ದಮ್ಮನವರಿಗೆ ಹೊಸ ಮನೆಯ ಗೃಹ ಪ್ರವೇಶ ಮಾಡಿಸಿಕೊಟ್ಟಿರುವುದು ಬಹಳ ಸಂತೋಷ ತಂದಿದೆ ಎಂದು ಲಕ್ಷ್ಮಣ್ ಹೇಳಿದರು.

ಜ್ಞಾನವಿಕಾಸ ಕಾರ್ಯಕ್ರಮದ ಯೋಜನಾಧಿಕಾರಿ ಶ್ರೀಮತಿ ನಾಗರತ್ನ ಮಾತನಾಡಿ, ಚಿತ್ರದುರ್ಗ ಪ್ರಾದೇಶಿಕ ಕಛೇರಿ ವ್ಯಾಪ್ತಿಯ 4 ಜಿಲ್ಲೆಗಳಲ್ಲಿ 197 ಮನೆಗಳು ನಿರ್ಮಾಣ ಹಂತದಲ್ಲಿದ್ದು, ದಾವಣಗೆರೆ ಜಿಲ್ಲೆಯಲ್ಲಿ 18 'ವಾತ್ಸಲ್ಯ' ಮನೆಗಳನ್ನು ಈಗಾಗಲೇ ಹಸ್ತಾಂತರ ಮಾಡಿದ್ದೇವೆ.

ಅಸಹಾಯಕರನ್ನು ಗುರುತಿಸುವ ಕೆಲಸ ನಮ್ಮಯೋಜನೆಯ ಮುಖ್ಯ ಗುರಿಯಾಗಿದ್ದು, ಪೋಷಕರನ್ನು ಪೋಷಣೆ ಮಾಡುವುದನ್ನು ಮಕ್ಕಳಿಗೆ, ಸೊಸೆಯಂದಿರಿಗೆ ಕಲಿಸ ಬೇಕೆಂಬುದು ಹೇಮಾವತಿ ಅಮ್ಮನವರ ಆಶಯವಾಗಿದೆ. 1898 ಬಡವರಿಗೆ 'ವಾತ್ಸಲ್ಯ' ಫುಡ್ ಕಿಟ್ ಮತ್ತು 1124 ಬಡವರಿಗೆ ಬಟ್ಟೆ ಕಿಟ್‌ಗಳನ್ನು ವಿತರಿಸಿದ್ದೇವೆ. 'ವಾತ್ಸಲ್ಯ' ಕಾರ್ಯಕ್ರಮ ಬಡವರ ಆಶಾಕಿರಣವಾಗಿದೆ ಎಂದು ನಾಗರತ್ನ ಹೇಳಿದರು.

ಫಲಾನುಭವಿ ಸಿದ್ದಮ್ಮ ಮಾತನಾಡಿ, ಇನ್ನೊಬ್ಬರ ಮನೆಯ ಕಟ್ಟೆಯ ಮೇಲೆ ವಾಸ ಮಾಡುತ್ತಿದ್ದ ನನಗೆ ಸ್ವಂತ ಮನೆ ಕಟ್ಟಿಸಿಕೊಟ್ಟಿರುವ ಧರ್ಮಸ್ಥಳ ಯೋಜನೆ ಮತ್ತು ಶ್ರೀ ವೀರೇಂದ್ರ ಹೆಗ್ಗಡೆ ಅವರಿಗೆ ಚಿರಋಣಿ ಎಂದರು.

ಜಿಲ್ಲಾ ಜನ ಜಾಗೃತಿ ವೇದಿಕೆ ಸದಸ್ಯರಾದ ಜಿ. ಮಂಜುನಾಥ್ ಪಟೇಲ್, ಜಿಗಳಿ ಪ್ರಕಾಶ್, ಧರ್ಮಸ್ಥಳ ಯೋಜನೆಯ ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ, ಜ್ಞಾನವಿಕಾಸ ಮೇಲ್ವಿಚಾರಕಿ ಸವಿತಾ, ಹೊಳೆಸಿರಿಗೆರೆ ವಲಯ ಮೇಲ್ವಿಚಾರಕ ರಂಗಸ್ವಾಮಿ, ಗ್ರಾಮದ ನಿವೃತ್ತ ಯೋಧ ಪರಶುರಾಮ್, ಪ್ರಗತಿಪರ ಕೃಷಿಕ ಕುಂದೂರು ಮಂಜಪ್ಪ, ಅಧ್ಯಾತ್ಮಿಕ ಚಿಂತಕ ಡಿ. ಸಿದ್ದೇಶ್, ಮಲ್ಲಿಕಾರ್ಜುನ್ ಕಲಾಲ್, ಒಕ್ಕೂಟದ ಅಧ್ಯಕ್ಷರಾದ ಯಶೋಧಮ್ಮ, ಸರೋಜಮ್ಮ, ಸೇವಾ ಪ್ರತಿನಿಧಿಗಳಾದ ಜ್ಯೋತಿ, ಮಂಜುಳಾ, ನಾಗರಾಜ್ ಮತ್ತು ಇತರರು ಈ ವೇಳೆ ಹಾಜರಿದ್ದರು.

### ರಾಜ್ಯದಲ್ಲಿ ಡ್ರಗ್ಸ್ ಹಾವಳಿ

(1ನೇ ಪುಟದಿಂದ) ಹಿಂದಿನ ಬಿಜೆಪಿ ಸರ್ಕಾರ ಬಜೆಟ್ ಅನುಮತಿ ಪಡೆಯದೇ 2 ಲಕ್ಷ ಕೋಟಿ ರೂ.ಗಳಿಗೂ ಹೆಚ್ಚು ಕಾಮಗಾರಿಗಳಿಗೆ ಹಸಿರು ನಿಶಾನೆ ತೋರಿದ್ದೇ ಇಂತಹ ಪರಿಸ್ಥಿತಿಗೆ ಕಾರಣ. ತಮ್ಮ ತಪ್ಪನ್ನು ಮರೆಮಾಚಿ ದಿನನಿತ್ಯ ಹಣ ಇಲ್ಲ ಎಂದು ನಮ್ಮನ್ನು ದೂಷಿಸುತ್ತಾ ಪ್ರತಿಪಕ್ಷದವರು ಬೊಬ್ಬೆ ಹೊಡೆಯುತ್ತಿದ್ದಾರೆ ಎಂದು ಕಿಡಿಕಾರಿದರು.

ಹಣ ಸಂಗ್ರಹಿಸುವ ಮತ್ತು ವೆಚ್ಚ ಮಾಡುವ ಇಲಾಖೆಗಳೆರಡೂ ಸಮತೋಲನದಿಂದ ಕರ್ತವ್ಯ ನಿರ್ವಹಿಸುವ ಮೂಲಕ ಹೆಚ್ಚು ಸೋರಿಕೆ ಆಗದಂತೆ ನೋಡಿಕೊಳ್ಳಬೇಕಾಗಿದೆ ಎಂದರು.

ರಾಜ್ಯದ ಜನರ ಆರ್ಥಿಕ ಶಕ್ತಿ ಹೆಚ್ಚಿಸಲು ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿ, ಪ್ರಾದೇಶಿಕ ಅಸಮತೋಲನ, ಅಸಮಾನತೆ ತೊಡೆಯಲು ಅಧಿಕಾರಿಗಳು ಹೆಚ್ಚು ಶ್ರಮ ವಹಿಸಬೇಕು ಎಂದರು.

ಸಮಾಜದ ಎಲ್ಲಾ ವರ್ಗಗಳಿಗೆ ಸಾಮಾಜಿಕ, ಆರ್ಥಿಕ ಸ್ವಾತಂತ್ರ್ಯ ಒದಗಿಸಬೇಕು. ಇಲ್ಲದಿದ್ದರೆ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥ ಬರುವುದಿಲ್ಲ ಎಂಬುದಾಗಿ ಸಂವಿಧಾನ ಜಾರಿ ಸಂದರ್ಭದಲ್ಲಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಹೇಳಿದ್ದರು ಎಂದು ಮುಖ್ಯಮಂತ್ರಿ ಉಲ್ಲೇಖಿಸಿದರು.

ಸಮಾನ ಅವಕಾಶಗಳು ಸಿಕ್ಕಾಗ ಸಮಾನತೆಯ ದಿಕ್ಕಿನಲ್ಲಿ ಸಾಗಬಹುದು ಎನ್ನುವ ಕಾರಣದಿಂದಲೇ ನಮ್ಮ ಸರ್ಕಾರ ಐದು ಗ್ಯಾರಂಟಿಗಳನ್ನು ಜಾರಿ ಮಾಡಿದೆ, ಜನರ ಕೈಯಲ್ಲಿ ಹಣ ಇದ್ದಾಗ ಖರೀದಿ ಶಕ್ತಿ ಹೆಚ್ಚಾಗುತ್ತದೆ, ಮಧ್ಯವರ್ತಿಗಳ ಹಾವಳಿ ಇಲ್ಲದೇ ಜನರಿಗೆ ನೇರ ಹಣ ತಲುಪಿಸುತ್ತಿದ್ದೇವೆ, ಇದನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮಾಡುವ ಜವಾಬ್ದಾರಿ ಅಧಿಕಾರಿಗಳ ಮೇಲಿದೆ ಎಂದರು.



### ಹೊಸಪಾಳ್ಯ ಕೆರೆಗೆ ಬಾಗಿನ ಅರ್ಪಣೆ

ಮಲೇಬೆನ್ನೂರು, ಜ.1- ಹೊಸಪಾಳ್ಯ ಗ್ರಾಮದ ಶ್ರೀ ಕರಿಯಮ್ಮ ದೇವಿ ಕೆರೆಯನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಅಭಿವೃದ್ಧಿ ಪಡಿಸಿದ ಬಳಿಕ ಕೆರೆ ಭರ್ತಿಯಾಗಿದ್ದು, ಬುಧವಾರ ಗ್ರಾಮಸ್ಥರು ಕೆರೆಗೆ ಪೂಜೆ ಸಲ್ಲಿಸಿ ಬಾಗಿನ ಅರ್ಪಿಸಿದರು.

ಈ ವೇಳೆ 'ಶುದ್ಧ ಜಲ' ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಧರ್ಮಸ್ಥಳ ಯೋಜನೆಯ ಜಿಲ್ಲಾ ನಿರ್ದೇಶಕ ಲಕ್ಷ್ಮಣ್ ಅವರು, ರಾಜ್ಯದಲ್ಲಿ 780 ಮತ್ತು ದಾವಣಗೆರೆ ಜಿಲ್ಲೆಯಲ್ಲಿ 60 ಶುದ್ಧಗಂಗಾ ಘಟಕಗಳಿದ್ದು, ಗ್ರಾಮೀಣ ಜನರಿಗೆ ಶುದ್ಧ ನೀರನ್ನು ಪೂರೈಸುತ್ತಿದ್ದೇವೆ. ಫೆಬ್ರವರಿಯಿಂದ ಜೂನ್‌ವರೆಗೆ ಬೇಸಿಗೆ ಕಾಲ ಇರುವುದರಿಂದ ಜನರು ಶುದ್ಧ ನೀರನ್ನೇ ಕುಡಿದು ಆರೋಗ್ಯ ಕಾಪಾಡಿಕೊಳ್ಳಬೇಕೆಂಬ ಉದ್ದೇಶದಿಂದ ಡಾ. ವೀರೇಂದ್ರ ಹೆಗ್ಗಡೆ ಅವರು, ರಾಜ್ಯದಲ್ಲಿ ಶುದ್ಧ ಜಲ ಅಭಿಮಾನ ಆರಂಭಿಸಿದ್ದಾರೆ ಎಂದರು.

ಜಿಲ್ಲಾ ಜನಜಾಗೃತಿ ವೇದಿಕೆ ಉಪಾಧ್ಯಕ್ಷ ಸಿರಿಗೆರೆ ನಾಗನಗೌಡ್ರು ಮಾತನಾಡಿ, 36 ವರ್ಷಗಳ ಹಿಂದೆ ನಾನು ಗ್ರಾ.ಪಂ. ಅಧ್ಯಕ್ಷನಾಗಿದ್ದಾಗ ಈ ಕೆರೆಯನ್ನು 60 ಸಾವಿರ ರೂ. ವೆಚ್ಚದಲ್ಲಿ ಅಭಿವೃದ್ಧಿ ಪಡಿಸಿದ್ದೇವೆ. ಈಗ ಮತ್ತೆ ಕೆರೆಯನ್ನು ಧರ್ಮಸ್ಥಳ ಯೋಜನೆಯಿಂದ ಅಭಿವೃದ್ಧಿ ಪಡಿಸಿದ್ದು, ಕೆರೆಗೆ ಸುತ್ತಲು ತಂತಿಬೇಲಿ ಹಾಕಿಸಿ ಎಂದು ಸಲಹೆ ನೀಡಿದರು.

ಗ್ರಾಮದ ವಸಂತಪ್ಪ ಮಾತನಾಡಿ, ಕೆರೆ ಅಭಿವೃದ್ಧಿಯಿಂದ ಜನ - ಜಾನುವಾರಗಳಿಗೆ ತುಂಬಾ ಅನುಕೂಲವಾಗಿದೆ ಎಂದರು. ಗ್ರಾ.ಪಂ. ಉಪಾಧ್ಯಕ್ಷ ಎನ್.ಪರಶುರಾಮ್ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯರಾದ ಜಿ. ಮಂಜುನಾಥ್ ಪಟೇಲ್, ಜಿಗಳಿ ಪ್ರಕಾಶ್, ಕೊಕ್ಕನೂರಿನ ಹನುಮಂತರಾಯ, ಶ್ರೀ ಕರಿಯಮ್ಮ ದೇವಿ ಕೆರೆ ಸಮಿತಿ ಅಧ್ಯಕ್ಷ ಗದಿಗೆಪ್ಪ, ಸದಸ್ಯರಾದ ಭೀಮನಗೌಡ್ರು, ತಿಪ್ಪೇಶಪ್ಪ, ಶೇಖರಪ್ಪ, ನಾಗೇಂದ್ರಪ್ಪ, ಜ್ಞಾನ ವಿಕಾಸ ಕಾರ್ಯಕ್ರಮದ ಯೋಜನಾಧಿಕಾರಿ ಶ್ರೀಮತಿ ನಾಗರತ್ನ, ಜ್ಞಾನ ವಿಕಾಸ ಮೇಲ್ವಿಚಾರಕಿ ಸವಿತಾ, ವಲಯ ಮೇಲ್ವಿಚಾರಕ ರಂಗಸ್ವಾಮಿ, ಸಿರಿಗೆರೆಯ ನಿವೃತ್ತ ಯೋಧ ಪರಶುರಾಮ್, ಕುಂದೂರು ಮಂಜಪ್ಪ, ಡಿ.ಸಿದ್ದೇಶ್, ಮೆಣಸಿನಹಾಳ್ ರುದ್ರಗೌಡ ಸೇರಿದಂತೆ ಇತರರು ಭಾಗವಹಿಸಿದ್ದರು.

### ವಿಜಯ ಅಗಡಿ ಮಾರ್ಷಲ್ ಆರ್ಟ್ಸ್ ಕ್ಲಬ್‌ಗೆ ಚಾಂಪಿಯನ್ಸ್ ಟ್ರೋಫಿ




ರಾಣೇಬೆನ್ನೂರು, ಜ.1- ಇಲ್ಲಿನ ವಿಜಯ ಅಗಡಿ ಮಾರ್ಷಲ್ ಆರ್ಟ್ಸ್ ಕ್ಲಬ್ಬಿನ ಕರಾಟೆ ಪಟುಗಳು ಹುಬ್ಬಳ್ಳಿಯಲ್ಲಿ ಕಳೆದ ನಡೆದ ರಾಷ್ಟ್ರ ಮಟ್ಟದ ಕರಾಟೆ ಪಂದ್ಯಾವಳಿಯಲ್ಲಿ ಭಾಗವಹಿಸುವ ಮೂಲಕ ಉತ್ತಮ ಸಾಧನೆ ಮಾಡಿದ್ದಾರೆ. ಬಾಲಕ ಮತ್ತು ಬಾಲಕಿಯರು ಸೇರಿದಂತೆ ಕ್ಲಬ್‌ನ 40 ಕರಾಟೆ ಪಟುಗಳು ಪಂದ್ಯದಲ್ಲಿ ಭಾಗವಹಿಸಿ, 16 ಚಿನ್ನದ ಪದಕ, 12 ಬೆಳ್ಳಿ ಪದಕ ಮತ್ತು 9 ಕಂಚಿನ ಪದಕ ಪಡೆಯುವ ಮೂಲಕ ಚಾಂಪಿಯನ್ಸ್ ಟ್ರೋಫಿಯನ್ನು ತನ್ನದಾಗಿಸಿಕೊಂಡಿದೆ. ಎಂ.ಕೆ ಸಾನ್ವಿತ್, ಎಂ.ಕೆ ವಿಜಯ, ಸನ್ನಿಧಿ, ಬಿ.ಎನ್. ಮಾಹುಲ್, ವಿಕ್ಕಿ ಎಂ. ಮಾಲೆ, ಭವಿತ್ ಪಿ. ರೆಡ್ಡಿ, ಎಸ್. ಭುವನ್, ಕೆ. ಭರತ್, ಶರದಿ ನಾಯಕ್, ಸಂಜೀವ ಕುಮಾರ ಎನ್. ಬನ್ನಿಕೋಡ, ಝುಮೀನ್ ಮತ್ತು ಗೌಸ್ ಅವರು ಚಿನ್ನದ ಪದಕ ಪಡೆದಿದ್ದಾರೆ.

### ಕನ್ನಡ ಪುಸ್ತಕ ಪ್ರಾಧಿಕಾರದಿಂದ ಶೇ. 50 ರಷ್ಟು ರಿಯಾಯಿತಿ

ದಾವಣಗೆರೆ, ಜ. 1 - ಗಣರಾಜ್ಯೋತ್ಸವದ ಅಂಗವಾಗಿ 2025ರ ಜನವರಿ ತಿಂಗಳು ಬೆಂಗಳೂರಿನ ಕನ್ನಡ ಭವನದ ಸಿರಿಗನ್ನಡ ಪುಸ್ತಕ ಮಳಿಗೆಯಲ್ಲಿ ಹಾಗೂ ಎಲ್ಲಾ ಜಿಲ್ಲೆಗಳ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದಿಂದ ತೆರೆಯಲಾದ ಎಲ್ಲಾ ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆಗಳಲ್ಲಿ ಪೂರ್ತಿ ಕನ್ನಡ ಪುಸ್ತಕ ಪ್ರಾಧಿಕಾರದ ಎಲ್ಲಾ ಪುಸ್ತಕಗಳನ್ನು ಶೇ. 50ರ ರಿಯಾಯಿತಿ ದರಗಳಲ್ಲಿ ಮಾರಾಟ ಮಾಡಲಾಗುವುದು. ಕನ್ನಡ ಪುಸ್ತಕ ಪ್ರಾಧಿಕಾರದ ಆನ್ ಲೈನ್ https://kpp.karnataka.gov.in ನಲ್ಲಿ ಕೂಡ ಈ ಶೇ. 50 ರಿಯಾಯಿತಿ ಲಭ್ಯವಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 080-22107705 ಸಂಪರ್ಕಿಸಲು ಆಡಳಿತಾಧಿಕಾರಿ ಕಿರಣ್ ಸಿಂಗ್ ತಿಳಿಸಿದ್ದಾರೆ.

### 2025 ಸುಧಾರಣಾ ವರ್ಷವಾಗಿ ರಕ್ಷಣಾ ಸಚಿವಾಲಯ ಘೋಷಣೆ

ನವದೆಹಲಿ, ಜ.1- 2025 ಸುಧಾರಣಾ ವರ್ಷವಾಗಲಿದೆ. ಈ ವರ್ಷ ಸೈನ್ಯದ ಮೂರು ಸೇವೆಗಳ ನಡುವೆ ಸಮನ್ವಯ ಹೆಚ್ಚಿಸುವತ್ತ ಗಮನ ಹರಿಸಲಾಗುವುದು ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.


ಸೈನ್ಯವನ್ನು ತಂತ್ರಜ್ಞಾನದಲ್ಲಿ ಆಧುನೀಕರಣಗೊಳಿಸುವ ಹಾಗೂ ಸಮರ ಸನ್ನದ್ಧವಾಗಿರಿಸುವ ದಿಸೆಯಲ್ಲಿ ಸುಧಾರಣಾ ಕ್ರಮ ತೆಗೆದುಕೊಳ್ಳಲಾಗುವುದು ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಸೈಬರ್ ಮತ್ತು ಬಾಹ್ಯಾಕಾಶ, ಪ್ರವರ್ಧಮಾನಕ್ಕೆ ಬರುತ್ತಿರುವ ತಂತ್ರಜ್ಞಾನಗಳಾದ ಕೃತಕ ಬುದ್ಧಿವಂತಿಕೆ, ಯಾಂತ್ರಿಕ ಕಲಿಕೆ, ಹೈಪರ್‌ಸಾನಿಕ್ ಹಾಗೂ ರೋಬೋಟಿಕ್ ರೀತಿಯ ಹೊಸ ವಲಯಗಳ ಕಡೆಗೆ 2025ರಲ್ಲಿ ಗಮನ ಕೇಂದ್ರೀಕರಿಸಲಾಗುವುದು ಎಂದು ಸಚಿವಾಲಯ ತಿಳಿಸಿದೆ. ಸಶಸ್ತ್ರ ಪಡೆಗಳನ್ನು ಆಧುನಿಕರಣಗೊಳಿಸುವ ದಾರಿಯಲ್ಲಿ ಈ ಸುಧಾರಣಾ ವರ್ಷ ಮಹ ತ್ವದ ಹೆಜ್ಜೆಯಾಗಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಿಳಿಸಿದ್ದಾರೆ.

### ವಿನೋಬನಗರದಲ್ಲಿ ವಿಷ್ಣುವರ್ಧನ್ ಪುಣ್ಯತಿಥಿ ಆಚರಣೆ



ದಾವಣಗೆರೆ, ಜ. 1- ನಗರದ ವಿನೋಬನಗರ ಮೊದಲನೇ ಮೇನ್, 17ನೇ ಕ್ರಾಸ್‌ನಲ್ಲಿರುವ ವಿಷ್ಣು ಕಾಲೋನಿಯಲ್ಲಿ ನಟ ಡಾ. ವಿಷ್ಣುವರ್ಧನ್ ಪುಣ್ಯತಿಥಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯ ಎ. ನಾಗರಾಜ್, ರಮೇಶ್ ಎಸ್. ಆರ್. ಸೋಲಾರ್, ಮಂಜು, ಶ್ರೀಧರ, ಹಾಲೇಶ್ ಜಿ.ಎನ್., ನವೀನ್ ಲಯನ್, ಸುರೇಶ್ ಹೆಚ್., ಸಿದ್ದಣ್ಣ, ನಾರಾಯಣಪ್ಪ, ಚಂದ್ರಣ್ಣ, ಸತೀಶ್ ಶೆಟ್ಟಿ, ರಾಮಚಂದ್ರ ರಾಯ್ಕರ್, ಸುರೇಶ್ ಉತ್ತಂಗಿ, ಯೋಗೀಶ್, ತಮ್ಮಣ್ಣ ಮತ್ತಿತರರು ಉಪಸ್ಥಿತರಿದ್ದರು.

### ಕೃಷಿಕ ಸಮಾಜದ ಅಧ್ಯಕ್ಷರಾಗಿ ದೊಡ್ಡಮನಿ ನಾಗೇಶ್




ಕೊಟ್ಟೂರು, ಜ.1- ತಾಲ್ಲೂಕಿನ ಕೃಷಿ ಇಲಾಖೆಯಲ್ಲಿ ನಿನ್ನೆ ನಡೆದ ಕೃಷಿಕ ಸಮಾಜದ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಲ್ಲಿ ದೊಡ್ಡಮನಿ ನಾಗೇಶ್ ಅವರು ಅಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾದರು. ಉಪಾಧ್ಯಕ್ಷ ಸ್ಥಾನಕ್ಕೆ ಕೆ. ಕೊಟ್ರೇಶ್, ಖಜಾಂಚಿ ಜೆ. ಅಂಜಿನಪ್ಪ, ಪ್ರಧಾನ ಕಾರ್ಯದರ್ಶಿ ಪಿ. ಸಾಬುಲಿ ಮತ್ತು ಜಿಲ್ಲಾ ಪ್ರತಿನಿಧಿಯಾಗಿ ಜೆ. ಮರಳು ಸಿದ್ದಪ್ಪ ಆಯ್ಕೆಯಾಗಿದ್ದಾರೆ ಎಂದು ಇಲಾಖೆಯ ಕೃಷಿ ಅಧಿಕಾರಿ ಡಿ. ಶ್ಯಾಮಸುಂದರ ಘೋಷಿಸಿದರು.

### ಡಾ. ರವಿಕುಮಾರ್‌ಗೆ ಪ್ರಶಸ್ತಿ ಪ್ರದಾನ




ದಾವಣಗೆರೆ, ಜ.1- ಇಂಡಿಯನ್ ಡೆಂಟಲ್ ಅಸೋಸಿಯೇಷನ್ ವತಿಯಿಂದ ಡೆಪ್ಯುಟಿ ಚೀಫ್ ಡೆಂಟಲ್ ಆಫೀಸರ್ ಡಾ. ರವಿಕುಮಾರ್ ಅವರಿಗೆ ದಾವಣಗೆರೆ ಶಾಖೆಯು 'ಲೈಫ್ ಟೈಮ್ ಅಚೀವ್‌ಮೆಂಟ್ ಅವಾರ್ಡ್' ನೀಡಿ ಗೌರವಿಸಿದೆ. ಈ ವೇಳೆ ದಂತ ಕಾಲೇಜಿನ ಪ್ರಾಚಾರ್ಯರಾದ ಡಾ. ನಂದೀಶ್ವರ, ಡಾ. ಅಶೋಕ್, ಡಾ.ಅಲಿ ಹಾಗೂ ಇತರರು ಇದ್ದರು.

### ಪುಟಗನಾಳು ಗೌಡ್ರು ಹನುಮಂತಪ್ಪ ನಿಧನ



ದಾವಣಗೆರೆ ತಾಲ್ಲೂಕು ಪುಟಗನಾಳು ಗ್ರಾಮದ ದಿ. ಗೌಡ್ರು ಮಹಾದೇವಪ್ಪನವರ ಪುತ್ರ ಗೌಡ್ರು ಹನುಮಂತಪ್ಪ (92) ಇವರು ದಿನಾಂಕ 1.1.2025ನೇ ಬುಧವಾರ ಮಧ್ಯಾಹ್ನ 1.50ಕ್ಕೆ ನಿಧನರಾದರು. ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 2.01.2025ನೇ ಗುರುವಾರ ಮಧ್ಯಾಹ್ನ 12ಕ್ಕೆ ಪುಟಗನಾಳು ಗ್ರಾಮದ ಮೃತರ ತೋಟದಲ್ಲಿ ನೆರವೇರಲಿದೆ.

### ಬೆಳವಣಿಗೆ ನಿರೀಕ್ಷೆ; ಶೀಘ್ರ ಬಡ್ಡಿ ದರ ಕಡಿತ ಸಾಧ್ಯತೆ

(1ನೇ ಪುಟದಿಂದ) ಅಧ್ಯಕ್ಷತೆಯಲ್ಲಿ ನಡೆಯಲಿರುವ ಮೊದಲ ಸಭೆ ಇದಾಗಿದೆ.

2025-26ರ ಬಜೆಟ್‌ನಲ್ಲಿ ಮೋದಿ ಸರ್ಕಾರದ ಮೂರನೇ ಅವಧಿಯ ಆರ್ಥಿಕ ನೀತಿಯ ಚಿತ್ರಣ ದೊರೆಯುವ ನಿರೀಕ್ಷೆ ಇದೆ. ಜಾಗತಿಕ ಸಮಸ್ಯೆಗಳು ಹಾಗೂ ಅಮೆರಿಕದ ನೂತನ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ತೆಗೆದುಕೊಳ್ಳುವ ನಿರ್ಧಾರಗಳ ಹಿನ್ನೆಲೆಯಲ್ಲಿ ಮೊದಲ ಬಜೆಟ್ ಇನ್ನಷ್ಟು ಪ್ರಾಮುಖ್ಯತೆ ಪಡೆದುಕೊಂಡಿದೆ.

ಇಷ್ಟೆಲ್ಲದರ ನಡುವೆ ಭಾರತದ ಸಮಗ್ರ ಆರ್ಥಿಕತೆಯ ಮೂಲಭೂತಗಳು ಬಲಿಷ್ಠವಾಗಿವೆ ಎಂದು ಪರಿಣಿತರು ಅಭಿಪ್ರಾಯ ಪಟ್ಟಿದ್ದಾರೆ.

2024-25ರ ಅವಧಿಯಲ್ಲಿ ಜಿಡಿಪಿ ಬೆಳವಣಿಗೆ ದರ ಶೇ. 6.6 ಆಗಿರುವ ನಿರೀಕ್ಷೆ ಇದೆ. 2025-26ರ ಸಾಲಿನಲ್ಲಿ ಬೆಳವಣಿಗೆ ದರ ಶೇ. 6.9ರ ಹಂತಕ್ಕೆ ತಲುಪುವ ಸಾಧ್ಯತೆ ಇದೆ ಎಂದು ರಿಸರ್ವ್ ಬ್ಯಾಂಕ್ ಅಂದಾಜಿಸಿದೆ.

ಜನವರಿ 20ರಂದು ಅಮೆರಿಕದ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಅವರು ತೆಗೆದುಕೊಳ್ಳುವ ಆರ್ಥಿಕ ಕ್ರಮಗಳು ಜಾಗತಿಕ ಆರ್ಥಿಕತೆ ಮೇಲೆ ಪರಿಣಾಮ ಬೀರಲಿವೆ ಎಂದು ಪರಿಣಿತರು ಹೇಳಿದ್ದಾರೆ.

ಭಾರತದ ಆರ್ಥಿಕತೆ ಉತ್ತಮ ಸ್ಥಿತಿಯಲ್ಲಿದೆ, ಮುಂದಿನ ವರ್ಷ ಬೆಳವಣಿಗೆಯಾಗುವ ನಿರೀಕ್ಷೆ ಇದೆ ಎಂದು ಬ್ಯಾಂಕ್ ಆಫ್ ಬರೋಡ ಮುಖ್ಯ ಆರ್ಥಿಕ ತಜ್ಞ ಮದನ್ ಸಬ್ನವೀಸ್ ಹೇಳಿದ್ದಾರೆ.

ಕಳೆದ ಫೆಬ್ರವರಿ 2023 ರಿಂದ ರಿಸರ್ವ್ ಬ್ಯಾಂಕ್ ಬಡ್ಡಿ ದರಗಳನ್ನು ಯಥಾ ಸ್ಥಿತಿಯಲ್ಲಿ ಇಟ್ಟಿದೆ. ಬಡ್ಡಿದರ ಕಡಿಮೆ ಮಾಡಿದಲ್ಲಿ ಆರ್ಥಿಕತೆಗೆ ಉತ್ತೇಜನ ಸಿಗಲಿದೆ. ಫೆಬ್ರವರಿ 2023ರಿಂದ ಪ್ರಮುಖ ಬಡ್ಡಿ ದರ 6.5ರ ಹಂತದಲ್ಲಿ ಮುಂದುವರೆದಿದೆ.

ದೇಶೀಯವಾಗಿ ಭಾರತದ ಆರ್ಥಿಕತೆ ಉತ್ತಮ ಸ್ಥಿತಿಯಲ್ಲಿದೆ. ಮುಂದಿನ ಬಜೆಟ್ ಮಧ್ಯಾವಧಿ ಆರ್ಥಿಕ ನೀತಿಯ ದಿಕ್ಸೂಚಿಯಾಗಲಿದೆ. ಹಣಕಾಸು ಆಯೋಗದ ವರದಿಯು ವಿತ್ತೀಯ ನೀತಿಯನ್ನು ರೂಪಿಸಲಿದೆ ಎಂದು ಇಕ್ರಾ ಮುಖ್ಯ ಆರ್ಥಿಕ ಪರಿಣಿತೆ ಅಧಿತಿ ನಾಯರ್ ತಿಳಿಸಿದ್ದಾರೆ.

### ಕನಕ ಜಯಂತ್ಯೋತ್ಸವದ ಸಿದ್ಧತೆ ವೀಕ್ಷಣೆ



ದಾವಣಗೆರೆ, ಜ. 1- ನಗರದ ಹೈಸ್ಕೂಲ್ ಮೈದಾನದಲ್ಲಿ ಇದೇ ದಿನಾಂಕ 5 ರಂದು ನಡೆಯುತ್ತಿರುವ ಕನಕದಾಸರ 537ನೇ ಜಯಂತ್ಯೋತ್ಸವ ಕಾರ್ಯಕ್ರಮದ ಪೂರ್ವ ಸಿದ್ಧತೆಯನ್ನು ಪಾಲಿಕೆ ಮೇಯರ್ ಕೆ. ಚಮನ್ ಸಾಬ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ವೀಕ್ಷಿಸಿದರು. ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ. ಶಿವಕುಮಾರ್, ಎಸ್. ಮಲ್ಲಿಕಾರ್ಜುನ್, ಮಾಜಿ ಸದಸ್ಯರಾದ ಉಮೇಶ್, ರಾಕೇಶ್, ಕವಿತಾ ಚಂದ್ರಶೇಖರ್ ಇತರರಿದ್ದರು.

### ಹೊಸ ವರ್ಷಕ್ಕೆ ಸಂಭ್ರಮದ ಸ್ವಾಗತ

(1ನೇ ಪುಟದಿಂದ) ಹೋಟೆಲ್-ರೆಸ್ಟೋರೆಂಟ್‌ಗಳಲ್ಲಿ ಮದ್ಯಕ್ಕೆ ಹೆಚ್ಚು ದರ ನೀಡಬೇಕಾಗಿದ್ದ ಯುವಕರು, ಖಾಲಿ ನಿವೇಶನ, ದೊಡ್ಡ ಮೈದಾನಗಳಲ್ಲಿ ಪಾರ್ಟಿ ಮಾಡಿದರು. ಹೋಲ್‌ಸೇಲ್ ಅಂಗಡಿಗಳಲ್ಲಿ ಮದ್ಯ ಖರೀದಿಸಿ ನಾಲ್ಕಾರು ಜನ ಗುಂಪು ಕೂಡಿ ಕುಡಿದು, ಕೇಕೆ ಹಾಕುತ್ತಿದ್ದರು. ಸನಿಹದಲ್ಲೇ ಇದ್ದ ಮನೆಗಳಿಗೆ ಇದು ಕಿರಿ ಕಿರಿಯಾಗುತ್ತಿತ್ತು. ಬೆಳಿಗ್ಗೆ ದೇವಸ್ಥಾನಗಳಲ್ಲಿ ಜನ ಜಂಗುಳಿ ಇತ್ತು. ಹೊಸ ವರ್ಷದ ಮೊದಲ ದಿನ ದೇವರ ದರ್ಶನಕ್ಕೆ ಜನರು ತೆರಳುತ್ತಿದ್ದುದು ಸಾಮಾನ್ಯವಾಗಿತ್ತು.

## ಸಮಾಜಮುಖಿ ಕಾರ್ಯನಿರ್ವಹಿಸಿದ ಕೀರ್ತಿ ವಿಷ್ಣುವರ್ಧನ್‌ರಿಗೆ ಸಲ್ಲುತ್ತದೆ



ದಾವಣಗೆರೆ, ಜ. 1- ಅಡ್ಡಿ ಆತಂಕಗಳ ನಡುವೆಯೂ ಮೇರು ನಟರಾಗಿ ಬೆಳೆದು, ಸಮಾಜ ಮುಖಿಯಾಗಿ ಕಾರ್ಯ ನಿರ್ವಹಿಸಿದ್ದ ಕೀರ್ತಿ ಸಾಹಸ ಸಿಂಹ ಡಾ. ವಿಷ್ಣುವರ್ಧನ್ ಅವರಿಗೆ ಸಲ್ಲುತ್ತದೆ ಎಂದು ಜಿಲ್ಲಾಧ್ಯಕ್ಷ ವಿ. ತಿರುಮಲೇಶ್ (ಸ್ವಾಮಿ) ಅಭಿಪ್ರಾಯಪಟ್ಟರು.

ಇಲ್ಲಿನ ಭಗತ್‌ಸಿಂಗ್ ಆಟೋ ನಿಲ್ದಾಣದಲ್ಲಿ ಸಾಹಸ ಸಿಂಹ ಡಾ. ವಿಷ್ಣುವರ್ಧನ್ ಅವರ 15 ನೇ ಪುಣ್ಯಸ್ಮರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವಿಷ್ಣು ಅವರು ಕೇವಲ ಕಲಾವಿದರಾಗಿರಲಿಲ್ಲ. ಸಮಾಜದ ಒಳತಿಗಾಗಿ ಶ್ರಮ ವಹಿಸಿದ್ದರು ಎಂದು ಹೇಳಿದರು.

ಬೆಂಗಳೂರಿನಲ್ಲಿ ವಿಷ್ಣು ಸ್ಮಾರಕ ನಿರ್ಮಿಸಲು ಸಾಧ್ಯವಾಗಿಲ್ಲ. ಆದ್ದರಿಂದ ಮುಖ್ಯಮಂತ್ರಿ ಸಿದ್ಧರಾಮಯ್ಯ ಸ್ಮಾರಕ ನಿರ್ಮಿಸಲು ಮುಂದಾಗಬೇಕು ಎಂದು ಅವರು ಮನವಿ ಮಾಡಿದರು.

ವಿಷ್ಣುವರ್ಧನ್ ಅವರ ನಾಡು-ನುಡಿ ಸೇವೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಯಾವುದೇ ಪ್ರಶಸ್ತಿ ನೀಡಿಲ್ಲ. ಮರಣೋತ್ತರವಾಗಿ ಪದ್ಮವಿಭೂಷಣ ಪ್ರಶಸ್ತಿ ನೀಡಬೇಕೆಂದು ಒತ್ತಾಯಿಸಿದರು.

ನಗರಸಭೆ ಮಾಜಿ ಸದಸ್ಯ ಎನ್.ಜೆ. ನಿಂಗಪ್ಪ, ಪತ್ರಕರ್ತ ಹನುಮಂತಪ್ಪ ಹಾಲಿವಾಣ, ವಿನಾಯಕ ಪಗಡೆ, ಬಿಜೆಪಿ ಮುಖಂಡ ಲಕ್ಷ್ಮಣ್, ಆವರಗೆರೆ ಶೇಖರಪ್ಪ, ಮಲ್ಲಯ್ಯ ಹಿರೇಮಠ್, ಶಿವಕುಮಾರ್, ಆಟೋ ಚಾಲಕರುಗಳು ಹಾಗೂ ಅಭಿಮಾನಿಗಳು ಹಾಜರಿದ್ದರು. ಇದೇ ಸಂದರ್ಭದಲ್ಲಿ ಅನ್ನ ಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು.

## ನಗರದ ಶ್ರೀ ವಿಠ್ಠಲ ರುಕುಮಾಯಿ ದೇವಸ್ಥಾನದಲ್ಲಿ ಕಾರ್ತಿಕೋತ್ಸವ



ದಾವಣಗೆರೆ, ಜ. 1- ಶ್ರೀ ಭಾವಸಾರ ಕ್ಷತ್ರಿಯ ತರುಣ ಮಂಡಳಿಯ ವತಿಯಿಂದ ನಗರದ ಮಹಾರಾಜಪೇಟೆಯ ಶ್ರೀ ವಿಠಲ ರುಕುಮಾಯಿ ದೇವಸ್ಥಾನದಲ್ಲಿ 6ನೇ ವರ್ಷದ ಶ್ರೀ ವಿಠ್ಠಲ ರುಕುಮಾಯಿ ದೇವರ ಕಾರ್ತಿಕೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು. ಇದೇ ವೇಳೆ 2025ನೇ ಇಸ್ವಿಯ 1000 ಕ್ಯಾಲೆಂಡರ್‌ಗಳನ್ನು ದೈವ ಮಂಡಳಿಯ ಅಧ್ಯಕ್ಷ ರಘು ಮೊಸಳೆ, ಭಜನಾ ಮಂಡಳಿಯ ಅಧ್ಯಕ್ಷ ನಿಂಗಸ್ವಾಮಿ ಖಮಿತ್ಕರ್ ಮತ್ತು ತರುಣ ಮಂಡಳಿ ಅಧ್ಯಕ್ಷ ವಿನಾಯಕ್ ಟಿಕಾರೆ ಹಾಗೂ ಇತರೆ ಎಲ್ಲಾ ಅಂಗ ಸಂಸ್ಥೆಗಳ ಮುಖ್ಯಸ್ಥರಿಂದ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು.

## ನೂತನ ವರ್ಷದ ಕೇಶವಿನ್ಯಾಸ...!



ದಾವಣಗೆರೆ ಎಸ್‌ಪಿಎಸ್ ನಗರದ ಬೂದಾಳ್ ರಸ್ತೆಯಲ್ಲಿರುವ ಸಮರ್ಥ್ ಹೇರ್ ಸಲೂನ್ ವತಿಯಿಂದ ಜಂಗ್ಲಿ ಶಶಿ ಅವರು ಸತತವಾಗಿ 16 ವರ್ಷಗಳಿಂದ ಹೊಸ ವರ್ಷಕ್ಕೆ ವಿನೂತನ ಕೇಶವಿನ್ಯಾಸ ಮಾಡಿಸಿಕೊಂಡು ಶುಭ ಕೋರಿದ್ದಾರೆ

## ವಿದ್ಯಾಭ್ಯಾಸಕ್ಕಾಗಿ ಲ್ಯಾಪ್‌ಟಾಪ್ ವಿತರಣೆ

ದಾವಣಗೆರೆ, ಜ.1- ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್, ಸಫಾಯಿ ಕರ್ಮಚಾರಿ ಕುಟುಂಬದ ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ ಲ್ಯಾಪ್‌ಟಾಪ್ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಮಕ್ಕಳಿಗೆ 3 ಹಾಗೂ ಸಫಾಯಿ ಕರ್ಮಚಾರಿ ಮಕ್ಕಳಿಗೆ 2 ಲ್ಯಾಪ್‌ಟಾಪ್ ವಿತರಿಸಲು ಅವಕಾಶವಿರುತ್ತದೆ. ಬಿ.ಕಾಂ, ಬಿ.ಎಸ್ಸಿ, ಎಂ.ಕಾಂ, ಎಂ.ಎಸ್ಸಿ, ಬಿ.ಇ, ಎಂ.ಟೆಕ್ ವಿದ್ಯಾಭ್ಯಾಸ ಮಾಡುತ್ತಿರಬೇಕು. ಅರ್ಜಿದಾರರು ಜಿಲ್ಲಾ ವ್ಯವಸ್ಥಾಪಕರು, ಡಾ.ಬಿ. ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ನಂ.337/16ಎ-16, ಗಣೇಶ್ ಲೇಔಟ್ 1ನೇಕ್ರಾಸ್ ಪಿ.ಬಿ.ರಸ್ತೆ ದಾವಣಗೆರೆಯಲ್ಲಿ ಪಡೆದು ಕಚೇರಿಗೆ ಸಲ್ಲಿಸಬೇಕು ಎಂದು ನಿಗಮದ ವ್ಯವಸ್ಥಾಪಕರು ತಿಳಿಸಿದ್ದಾರೆ.

# ಕಾಂಗ್ರೆಸ್‌ಗೆ ಅವಕಾಶ ಕಳೆದುಕೊಳ್ಳುವ ವರ್ಷವಾದ 2024



ನವದೆಹಲಿ, ಜ.1- ಕಾಂಗ್ರೆಸ್ ಪಕ್ಷದ ಪಾಲಿಗೆ 2024 ಅವಕಾಶ ಕಳೆದುಕೊಳ್ಳುವ ವರ್ಷವಾಗಿ ಪರಿಣಮಿಸಿದೆ. ಲೋಕಸಭಾ ಚುನಾವಣೆಯಲ್ಲಿ 99 ಸ್ಥಾನಗಳಿಗೆ ಸೀಮಿತವಾದ ಕಾಂಗ್ರೆಸ್, ವಿಧಾನಸಭಾ ಚುನಾವಣೆಗಳಲ್ಲೂ ಉತ್ತಮ ಸಾಧನೆ ತೋರಿಸುವಲ್ಲಿ ವಿಫಲವಾಯಿತು.

ಹರಿಯಾಣ ಮತ್ತು ಮಹಾರಾಷ್ಟ್ರ ಚುನಾವಣೆಗಳಲ್ಲಿ ಕಾಂಗ್ರೆಸ್ ಹಿನ್ನಡೆ ಅನುಭವಿಸಿತು. ಜಾರ್ಖಂಡ್ ಹಾಗೂ ಜಮ್ಮು ಮತ್ತು ಕಾಶ್ಮೀರ ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ ಮಿತ್ರ ಪಕ್ಷಗಳ ಕಾರಣದಿಂದಾಗಿ ಕಾಂಗ್ರೆಸ್ ಉತ್ತಮ ಸಾಧನೆ ತೋರಿಸಲು ಸಾಧ್ಯವಾಯಿತು.

ವರ್ಷದ ಅಂತ್ಯಕ್ಕೆ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರಾಗಿದ್ದ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ನಿಧನರಾದರು. ಅವರ ನಿಧನದ ಹಿನ್ನೆಲೆಯಲ್ಲಿ ಡಿಸೆಂಬರ್ 26ರಂದು ಕರ್ನಾಟಕದ ಬೆಳಗಾವಿಯಲ್ಲಿ ನಡೆಸಬೇಕಿದ್ದ ಸಮಾವೇಶವನ್ನು ರದ್ದುಗೊಳಿಸಬೇಕಾಯಿತು. 2025 ರಲ್ಲಿ ಪಕ್ಷ ನಡೆಯಬೇಕಾದ ಹಾದಿ ನಿರ್ಧರಿಸಲು ಹಾಗೂ ಮಹಾತ್ಮ ಗಾಂಧಿ ಅಧ್ಯಕ್ಷತೆಯಲ್ಲಿ ನಡೆಸಲಾದ ಕಾಂಗ್ರೆಸ್ ಸಮಾವೇಶಕ್ಕೆ ಶತಮಾನ ತುಂಬಿದ ಹಿನ್ನೆಲೆಯಲ್ಲಿ ಬೆಳಗಾವಿ ಸಮಾವೇಶ ಹಮ್ಮಿಕೊಳ್ಳಲಾಗಿತ್ತು.

2024ರಲ್ಲಿ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರ ಅವರು ಚುನಾವಣಾ ರಾಜಕೀಯಕ್ಕೆ ಕಾಲಿರಿಸಿದರು. ಕೇರಳದ ವಯನಾಡ್ ಕ್ಷೇತ್ರದಲ್ಲಿ ಅವರು ಭಾರೀ ಬಹುಮತದಿಂದ ಲೋಕಸಭೆಗೆ ಆಯ್ಕೆಯಾದರು. ಕಾಂಗ್ರೆಸ್ ಹಿರಿಯ ನಾಯಕಿ ಸೋನಿಯಾ ಗಾಂಧಿ ಅವರು ರಾಜ್ಯಸಭಾ ಸದಸ್ಯರಾಗಿದ್ದಾರೆ. ರಾಹುಲ್ ಗಾಂಧಿಯವರು ಲೋಕಸಭೆಯಲ್ಲಿ ಪ್ರತಿಪಕ್ಷದ ನಾಯಕರಾಗಿದ್ದಾರೆ. ಗಾಂಧಿ ಕುಟುಂಬದ ಮೂವರು ಸಂಸತ್ತಿನಲ್ಲಿ ಸ್ಥಾನಗಳನ್ನು ಪಡೆದಿದ್ದಾರೆ.

2024ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ಉತ್ತಮ ಸ್ಥಿತಿಯಲ್ಲಿರುವಂತೆ ಕಂಡುಬಂದಿತ್ತು. ಸಂವಿಧಾನ ಬದಲಿಸುವ ಮೂಲಕ ಮೀಸಲಾತಿಯನ್ನು ರದ್ದುಗೊಳಿಸಲು ಬಿಜೆಪಿ 400 ಸ್ಥಾನಗಳನ್ನು ಬಯಸುತ್ತಿದೆ ಎಂದು ಕಾಂಗ್ರೆಸ್ ಹೇಳಿತ್ತು. ಈ ವಿಷಯದ ಕಾರಣದಿಂದ ಬಿಜೆಪಿ ಹಿನ್ನಡೆ ಅನುಭವಿಸಿದಂತೆ ಕಂಡುಬಂದಿದೆ ಎಂದು ಹಲವರು ಪ್ರತಿಪಾದಿಸಿದರು. ಆದರೆ ಅಂತಿಮವಾಗಿ ಫಲಿತಾಂಶ ಬೇರೆ ರೀತಿಯಲ್ಲೇ ಬಂದಿತ್ತು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರು ಜನವರಿ 14 ರಿಂದ ಮಾರ್ಚ್ 16 ರವರೆಗೆ ಕೈಗೊಂಡ ಭಾರತ್ ಜೋಡೋ ಯಾತ್ರೆ ನಿರೀಕ್ಷಿತ ಫಲ ಕೊಡಲಿಲ್ಲ. ಗಲಭೆಯಿಂದ ಪೀಡಿತವಾಗಿದ್ದ ಮಣಿಪುರದಿಂದ ಯಾತ್ರೆ ಆರಂಭಿಸಲಾಗಿತ್ತು. ಆದರೂ ಈಶಾನ್ಯದಲ್ಲಿ ಕಾಂಗ್ರೆಸ್ ಮೇಲುಗೈ ಪಡೆಯಲು ಸಾಧ್ಯವಾಗಲಿಲ್ಲ.

ಪಂಚ ನ್ಯಾಯ ಘೋಷಣೆಯ ಮೂಲಕ ಸಾಮಾಜಿಕ ನ್ಯಾಯ ಒದಗಿಸಲಾಗುವುದು ಎಂದು ಕಾಂಗ್ರೆಸ್ ಹೇಳಿತ್ತು. ಆ ಮೂಲಕ ಬಡವರು, ಕಾರ್ಮಿಕರು, ರೈತರು, ಮಹಿಳೆಯರು, ಯುವಕರು, ಹಿಂದುಳಿದ ವರ್ಗದವರು, ದಲಿತರು, ಬುಡಕಟ್ಟು ಜನರು ಹಾಗೂ ಅಲ್ಪಸಂಖ್ಯಾತರ ಮತ ಪಡೆಯಲು ಕಾಂಗ್ರೆಸ್ ಪ್ರಯತ್ನ ನಡೆಸಿತ್ತು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮೀಸಲಾತಿ ಕುರಿತು ನೀಡಿದ ಹೇಳಿಕೆ ಹಾಗೂ ಸ್ಯಾಮ್ ಪಿತ್ರೋಡಾ ಅವರು ದೇಶದ ವೈವಿಧ್ಯತೆ ಕುರಿತು ನೀಡಿದ ಹೇಳಿಕೆಗಳು ಲೋಕಸಭಾ ಚುನಾವಣಾ ಪ್ರಚಾರದ ವೇಳೆ ಮುಜುಗರಕ್ಕೆ ಕಾರಣವಾದವು.

ಬಿಜೆಪಿ ಸ್ವಂತ ಬಲದ ಮೇಲೆ ಬಹುಮತ ಪಡೆಯಲು ಸಾಧ್ಯವಾಗಲಿಲ್ಲ. ಆದರೂ ಮಿತ್ರ ಪಕ್ಷಗಳೊಂದಿಗೆ ಅಧಿಕಾರದ ಚುಕ್ಕಾಣಿ ಹಿಡಿಯುವಲ್ಲಿ ಯಶಸ್ವಿಯಾಯಿತು. ಈ ಚುನಾವಣಾ ಫಲಿತಾಂಶ ನೈತಿಕ ಜಯ ಎಂದು ರಾಹುಲ್ ಗಾಂಧಿ ಹಾಗೂ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರತಿಪಾದಿಸಿದರು.

ಸಂವಿಧಾನದ ಕುರಿತು ಕಾಂಗ್ರೆಸ್ ನಡೆಸಿದ ಪ್ರಚಾರವು ಉತ್ತರ ಪ್ರದೇಶ ಸೇರಿದಂತೆ ಹಲವು ರಾಜ್ಯಗಳಲ್ಲಿ ಪರಿಣಾಮ ಬೀರಿತು ಎಂದು ಬಿಜೆಪಿ ವಿಶ್ಲೇಷಿಸಿತು. ಅಲ್ಲದೆ ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಕ್ಷದ ಜೊತೆ ಕಾಂಗ್ರೆಸ್ ಮೈತ್ರಿ ಮಾಡಿಕೊಂಡಿದ್ದು, ಉತ್ತಮ ಫಲ ನೀಡಿತ್ತು. ಇಷ್ಟಾದರೂ ಬಿಜೆಪಿ ಸತತ ಮೂರನೇ ಬಾರಿ ಅಧಿಕಾರ ಪಡೆಯಿತು. 60 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಪಕ್ಷವೊಂದು ಹ್ಯಾಟ್ರಿಕ್ ಭಾರಿಸಿದೆ.

ಲೋಕಸಭಾ ಚುನಾವಣೆ ವೇಳೆ ಪ್ರತಿಪಕ್ಷಗಳ ಪರ ಇದ್ದ ಅಲೆಯನ್ನು ಬಳಸಿಕೊಳ್ಳಲು ಕಾಂಗ್ರೆಸ್ ವಿಫಲವಾಯಿತು. ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅನಿರೀಕ್ಷಿತ ಮುಖಭಂಗಕ್ಕೆ ಗುರಿಯಾಯಿತು. ಚುನಾವಣಾ ಸೋಲಿಗೆ ಮತಯಂತ್ರಗಳೇ ಹೊಣೆ ಎಂದು ಕಾಂಗ್ರೆಸ್ ಆರೋಪಿಸಿತು.

ನಂತರ ನಡೆದ ಮಹಾರಾಷ್ಟ್ರ ಚುನಾವಣೆಯಲ್ಲಿ ಕಾಂಗ್ರೆಸ್, ಎನ್.ಸಿ.ಪಿ. ಹಾಗೂ ಶಿವಸೇನೆ ಯುಬಿಟಿ ಮೈತ್ರಿಕೂಟ ತೀವ್ರ ಮುಖಭಂಗಕ್ಕೆ ಗುರಿ ಆಯಿತು.

2024ರಲ್ಲಿ ಅರುಣಾಚಲ ಪ್ರದೇಶ, ಆಂಧ್ರ ಪ್ರದೇಶ, ಒಡಿಶಾ ಹಾಗೂ ಸಿಕ್ಕಿಂ ಸೇರಿದಂತೆ ಎಂಟು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಚುನಾವಣೆ ನಡೆದಿತ್ತು. ಒಂದು ರಾಜ್ಯದಲ್ಲೂ ಕಾಂಗ್ರೆಸ್ ಜಯಗಳಿಸಲು ಸಾಧ್ಯವಾಗಲಿಲ್ಲ.

ಬಿಜೆಪಿ ಹಾಗೂ ಮಿತ್ರ ಪಕ್ಷಗಳು ಅರುಣಾಚಲ ಪ್ರದೇಶ, ಆಂಧ್ರಪ್ರದೇಶ, ಒಡಿಶಾ, ಸಿಕ್ಕಿಂ, ಮಹಾರಾಷ್ಟ್ರ ಹಾಗೂ ಹರಿಯಾಣಗಳಲ್ಲಿ ಗೆಲುವು ಸಾಧಿಸಿದವು.

ಜಮ್ಮು ಮತ್ತು ಕಾಶ್ಮೀರ ಹಾಗೂ ಜಾರ್ಖಂಡ್ ಚುನಾವಣೆಗಳಲ್ಲಿ ಕಾಂಗ್ರೆಸ್ಸೇತರ ಪಕ್ಷಗಳು ಮುನ್ನಡೆ ಕಂಡವು. ಈ ಎರಡು ರಾಜ್ಯಗಳಲ್ಲಿ ಕಾಂಗ್ರೆಸ್ ಪ್ರಾಂತೀಯ ಪಕ್ಷಗಳಿಗೆ ಕಿರಿಯ ಸಹಭಾಗಿಯಾಗಿದೆ.

ಇದರಿಂದಾಗಿ ಕಾಂಗ್ರೆಸ್ ಪಕ್ಷ ಪರಾವಲಂಬಿ ಎಂದು ಪ್ರಧಾನ ಮಂತ್ರಿ ಹಾಗೂ ಬಿಜೆಪಿ ಲೇವಡಿ ಮಾಡಿದವು. ಸ್ವಂತ ಬಲದ ಮೇಲೆ ಕಾಂಗ್ರೆಸ್ ಗೆಲ್ಲಲು ಸಾಧ್ಯವಿಲ್ಲ ಎಂದು ರಾಜಕೀಯ ವಲಯದಲ್ಲಿ ಟೀಕೆ ಎದುರಿಸಬೇಕಾಯಿತು.

ರಾಜ್ಯ ವಿಧಾನಸಭೆಗಳಿಗೆ ನಡೆದ 59 ಉಪಚುನಾವಣೆಗಳಲ್ಲೂ ಕಾಂಗ್ರೆಸ್ ಉತ್ತಮ ಸಾಧನೆ ತೋರಿಸಲು ಸಾಧ್ಯವಾಗಲಿಲ್ಲ. ಆದರೆ 2024ರಲ್ಲಿ ಎರಡು ಲೋಕಸಭಾ ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿತು.

ಕಾಂಗ್ರೆಸ್ ಪಕ್ಷ ಹಲವಾರು ವಿಷಯಗಳನ್ನು ಚುನಾವಣೆಯಲ್ಲಿ ಪ್ರತಿಪಾದಿಸಿತು. ಆದರೆ ಪಕ್ಷದ ಪ್ರಮುಖ ಸಂದೇಶ ಏನೆಂಬುದನ್ನು ಸ್ಪಷ್ಟವಾಗಿ ತಿಳಿಸಲು ವಿಫಲವಾಯಿತು.

ಲೋಕಸಭಾ ಚುನಾವಣೆ ವೇಳೆ ಸಂವಿಧಾನ ಬದಲಾವಣೆ ಹಾಗೂ ಜಾತಿಗಣತಿ ವಿಷಯಗಳನ್ನು ಪ್ರಮುಖವಾಗಿ ಪ್ರಸ್ತಾಪಿಸಿದ್ದ ಕಾಂಗ್ರೆಸ್, ವಿಧಾನಸಭಾ ಚುನಾವಣೆಯಲ್ಲಿ ಹಿನ್ನಡೆ ಎದುರಾದ ನಂತರ ಮತಯಂತ್ರಗಳನ್ನು ದೂರಿತು. ಉದ್ಯಮಿ ಗೌತಮ್ ಅದಾನಿ ಅವರ ವಿರುದ್ಧ ಟೀಕಾ ಪ್ರಹಾರ ಮುಂದುವರಿಸಿತ್ತು. ವರ್ಷಾಂತ್ಯದ ವೇಳೆ ಕೇಂದ್ರ ಸಚಿವ ಅಮಿತ್ ಶಾ ಅವರು ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ಅವ ಮಾನಿಸಿದ್ದಾರೆ ಎಂದು ತೀವ್ರ ವಾಗ್ದಾಳಿ ನಡೆಸಿತು, ಬೀದಿಗಿಳಿದು ಪ್ರತಿಭಟನೆ ನಡೆಸಲಾಯಿತು.

ಸಂಸತ್ ಆವರಣದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳು ಅಂಬೇಡ್ಕರ್ ವಿಷಯದ ಕುರಿತು ಪ್ರತಿಭಟನೆ ನಡೆಸುವಾಗ ಘರ್ಷಣೆ ಉಂಟಾಗಿ ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ಅವರ ವಿರುದ್ಧ ಪೊಲೀಸರಲ್ಲಿ ಪ್ರಕರಣ ಸಹ ದಾಖಲಿಸಲಾಯಿತು.

ಕಳೆದ ವರ್ಷದ ಆರಂಭದಲ್ಲಿ ನಡೆದ ಅಯೋಧ್ಯೆ ರಾಮ ಮಂದಿರ ಪ್ರಾಣ ಪ್ರತಿಷ್ಠಾಪನೆ ಸಮಾರಂಭಕ್ಕೆ ಕಾಂಗ್ರೆಸ್ ಹಾಗೂ ಅದರ ಮಿತ್ರ ಪಕ್ಷಗಳ ನಾಯಕರು ಗೈರಾಗಿದ್ದರು. ಆದರೆ ಇದರಿಂದ ಲೋಕಸಭಾ ಚುನಾವಣೆಯಲ್ಲಿ ಯಾವುದೇ ಪರಿಣಾಮ ಕಂಡು ಬರಲಿಲ್ಲ. ಅಯೋಧ್ಯೆ ಇರುವ ಫೈಜಾಬಾದ್ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಸೋಲು ಕಂಡಿತ್ತು.

ಅಗಲಿದ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಅಂತ್ಯ ಸಂಸ್ಕಾರ ಹಾಗೂ ಸ್ಮಾರಕ ನಿರ್ಮಿಸುವ ಕುರಿತು ಸರ್ಕಾರದ ವಿರುದ್ಧ ಕಾಂಗ್ರೆಸ್ ವಾಗ್ದಾಳಿ ನಡೆಸಿತು. ಆದರೆ, ಶೋಕಾಚರಣೆಯ ನಡುವೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿದೇಶ ಪ್ರವಾಸಕ್ಕೆ ತೆರಳಿದ್ದಾರೆ ಎಂಬುದು ಬಿಜೆಪಿ ಟೀಕೆಗೆ ಅಸ್ತ್ರ ಒದಗಿಸಿತು.

# ವೇದ ವೇದಾಂತಗಳ ಸರ್ವಸ್ವವೂ ಭಾಗವತದಲ್ಲಿ ಅಡಗಿದೆ

## ಪುರಾಣ ಪ್ರವಚನ ಸಪ್ತಾಹದಲ್ಲಿ ಹಿರಿಯ ಪ್ರವಚನಕಾರ ಗೋಪಾಲಚಾರ್ ಮಣ್ಣೂರ್



ದಾವಣಗೆರೆ, ಜ.1- ಶ್ರೀಮದ್ ಭಾಗವತ ಮಹಾ ಪುರಾಣಗಳಲ್ಲಿ ಜ್ಞಾನ ಮತ್ತು ಭಕ್ತಿಯ ಎರಡೂ ವಿಚಾರಗಳು ಸಮರ್ಥವಾಗಿ ಮೂಡಿ ಬಂದಿವೆ ಎಂದು ಹಿರಿಯ ಪ್ರವಚನಕಾರ ಗೋಪಾಚಾರ್ ಮಣ್ಣೂರ್ ಹೇಳಿದರು.


ನಗರದ ಆದರ್ಶ ಯೋಗ ಪ್ರತಿಷ್ಠಾನದ ಯೋಗ ಚಿಕಿತ್ಸಾ ಕೇಂದ್ರದಲ್ಲಿ ಶ್ರೀ ಕುದ್ದುಂಜಿ ಮಹಾಬಲರಾವ್ ಪುಣ್ಯಸ್ಮರಣೆ ನಿಮಿತ್ತ ಹಮ್ಮಿಕೊಳ್ಳಲಾಗಿದ್ದ ಶ್ರೀಮದ್ ಭಾಗವತ ಪುರಾಣ ಪ್ರವಚನ ಸಪ್ತಾಹದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಅಲ್ಲದೇ ಇದರಲ್ಲಿ ವೇದ ವೇದಾಂತಗಳ ಸರ್ವಸ್ವವೂ ಅಡಗಿ, ವೇದವ್ಯಾಸರು ರಚಿಸಿದ 18 ಪುರಾಣಗಳಲ್ಲೇ ಭಾಗವತವು ಅತ್ಯಂತ ಶ್ರೇಷ್ಠವಾದುದು ಎಂದು ಅಭಿಪ್ರಾಯಪಟ್ಟರು.

ಸಜ್ಜನರ ಹಾಗೂ ಭಗವತ್ ಭಕ್ತರ ಅನುಗ್ರಹಕ್ಕಾಗಿ ರಚಿತವಾದ ಅತ್ಯಂತ ಶ್ರೇಷ್ಠವಾದ ಪುರಾಣವೆನಿಸಿದೆ. ಇದರ ಶ್ರವಣ ಮಾತ್ರದಿಂದ ಮನುಷ್ಯರು ಎಲ್ಲಾ ವಿಧವಾದ ಪಾಪಗಳಿಂದ ಮುಕ್ತರಾಗುತ್ತಾರೆ. ಅಷ್ಟೇ ಅಲ್ಲದೇ ಜೀವನದಲ್ಲಿ ತಮಗೆ ಅಪೇಕ್ಷಿತವಾದ ಎಲ್ಲಾ ಆಸೆಗಳನ್ನು ಪೂರೈಸಿಕೊಂಡು ಮುಂದೆ ಉತ್ತಮ ಜೀವನ ಸಾಗಿಸಬಹುದಾಗಿವೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಕುಟುಂಬ ಪ್ರಬೋಧನಾ ವರ್ಗದ ಸಂಚಾಲಕಿ ಗೀತಕ್ಕ ಮತ್ತು ಸಂಗಡಿಗರು ದೇವರ ನಾಮ ಹಾಡಿದರು. ಸಂವೇದಿತಾ ಪ್ರಾರ್ಥನಾ ಶ್ಲೋಕ ಹಾಡಿದರು. ಯೋಗ ತಜ್ಞ ರಾಘವೇಂದ್ರ ಗುರೂಜಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಆಶಾ ಪ್ರದೀಪ್, ಮಂಜುನಾಥ್, ಪ್ರದೀಪ್, ರೇಖಾ ಕಲ್ಲೇಶ್, ಸಾವಿತ್ರಮ್ಮ, ಶಾಂತಮ್ಮ, ಯೋಗ ವಿದ್ಯಾರ್ಥಿಗಳಾದ ಕಾವ್ಯ, ರಾಹುಲ್ ವಿ.ಕೆ. ಇತರರು ಇದ್ದರು.

## ನಗರದ ನಿಜಲಿಂಗಪ್ಪ ಬಡಾವಣೆ ಇಂದು ಶ್ರೀ ಅಯ್ಯಪ್ಪ ಸ್ವಾಮಿ ದೀಪೋತ್ಸವ, ಅನ್ನ ಸಂತರ್ಪಣೆ



ಶ್ರೀ ಎಸ್. ನಿಜಲಿಂಗಪ್ಪ ಬಡಾವಣೆಯ ಬಕ್ಕೇಶ್ವರ ಶಾಲೆ ಹತ್ತಿರದ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಇಂದು ಶ್ರೀ ಅಯ್ಯಪ್ಪ ಸ್ವಾಮಿಯ ಪಡಿಪೂಜೆ ನಡೆಯಲಿದೆ. ಬೆಳಗ್ಗೆ 6-30 ಗಂಟೆಗೆ ಶ್ರೀ ಓಂಕಾರ ಗಣಪತಿ, ಶ್ರೀ ಅಯ್ಯಪ್ಪ ಸ್ವಾಮಿ, ಶ್ರೀ ಸುಬ್ರಮಣ್ಯಸ್ವಾಮಿ ದೇವರುಗಳಿಗೆ ಪಂಚಾಮೃತ ಅಭಿಷೇಕ ಮತ್ತು ಗಣಹೋಮ, ಮಹಾ ಮಂಗಳಾರತಿ ನೆರವೇರಲಿದೆ. ಮಧ್ಯಾಹ್ನ 3 ಗಂಟೆಗೆ ಮಹಾ ದೀಪೋತ್ಸವವು ಜರುಗುವುದು ಹಾಗೂ ರಾತ್ರಿ 8 ಗಂಟೆಗೆ ದೇವಸ್ಥಾನದ ಆವರಣದಲ್ಲಿ ಅನ್ನ ಸಂತರ್ಪಣೆ ಇರುತ್ತದೆ.

## ಶೈಕ್ಷಣಿಕ ಪ್ರವಾಸಕ್ಕೆ ಎಮ್.ಹೆಚ್. ಪಾಟೀಲ್ ಚಾಲನೆ




ರಾಣೇಬೆನ್ನೂರು, ಜ.1- ನಗರದ ಮಾತಾ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳು 2024-25ನೇ ಸಾಲಿನ ಒಂದು ದಿನದ ಶೈಕ್ಷಣಿಕ ಪ್ರವಾಸಕ್ಕೆಂದು ಮಂಗಳವಾರ ಹುಬ್ಬಳ್ಳಿಯ ಪಿಆರ್‌ಎಸ್ ಕಡೆಗೆ ಹೋಗಿ ಬಂದರು.

ಈ ಶೈಕ್ಷಣಿಕ ಪ್ರವಾಸಕ್ಕೆ ಹಾವೇರಿಯ ಡಯಟ್ ಹಿರಿಯ ಉಪನ್ಯಾಸಕ ಎಮ್.ಹೆಚ್. ಪಾಟೀಲ್ ಚಾಲನೆ ನೀಡಿ, ಶುಭ ಹಾರೈಸಿದರು. ಈ ವೇಳೆ ಮುಖ್ಯ ಶಿಕ್ಷಕ ಎಸ್. ಚನ್ನಬಸಪ್ಪ, ಸದಸ್ಯೆ ಸಿ.ಎಸ್ ಲತಾ, ಸಿಬ್ಬಂದಿ ಎಂ. ನಾಗರಾಜ್, ಪುಷ್ಪಾ ಉಜ್ಜೇರ್, ಬಿ.ಎ. ಆಶಾ, ಗೀತಾ ಕಮ್ಮಾರ, ಪ್ರವೀಣ್‌ಗೌಡ ಪಾಟೀಲ್, ಕೆ.ಎಂ. ಕವಿತಾ ಇತರರು ಇದ್ದರು.

## ನಗರದಲ್ಲಿ ಇಂದು ಸಾಂಸ್ಕೃತಿಕ ಸಂಭ್ರಮ

ಕನ್ನಡ ರಂಗಭೂಮಿ ಹಾಗೂ ಸಂಗೀತ ಕ್ಷೇತ್ರಗಳಲ್ಲಿ ನಾಲ್ಕು ದಶಕಗಳಿಗೂ ಹೆಚ್ಚು ಸೇವೆ ಸಲ್ಲಿಸುತ್ತಿರುವ ಶ್ರೀ ಗುರು ವಾದ್ಯವೃಂದ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಶ್ರೀ ಸಂಚಾರಿ ಕೆ.ಬಿ.ಆರ್. ಡ್ರಾಮಾ ಕಂಪನಿ ಇವರ ಸಹಯೋಗದೊಂದಿಗೆ ಇಂದು ಸಂಜೆ 6ಕ್ಕೆ ಕುವೆಂಪು ಕನ್ನಡ ಭವನದಲ್ಲಿ ಕರ್ನಾಟಕ ಶ್ರೇಷ್ಠ ಕಲಾವಿದರಿಂದ 'ಕಿವುಡ ಮಾಡಿದ ಕಿತಾಪತಿ' ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ. ಸಂಜೆ 5.30 ರಿಂದ 6ರವರೆಗೆ ದರ್ಶನ ಮತ್ತು ತಂಡದವರಿಂದ ಸುಗಮ ಸಂಗೀತ ಕಾರ್ಯಕ್ರಮ ನಡೆಯಲಿದೆ.

**ಕಿವುಡ ಮಾಡಿದ ಕಿತಾಪತಿ ನಾಟಕ ಪ್ರದರ್ಶನ**

ಶ್ರೀ ಬಸವಪ್ರಭು ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಲಿದ್ದು, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಕ.ಸಾ.ಪ. ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದು, ವಿಶೇಷ ಆಹ್ವಾನಿತರಾಗಿ ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಎನ್.ಡಿ. ತಿಪ್ಪೇಸ್ವಾಮಿ ಅವರು ಆಗಮಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಹೊನ್ನಾಳಿ ತಹಶೀಲ್ದಾರ್ ಪಟ್ಟರಾಜ ಗೌಡ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಇ.ಎಂ. ಮಂಜುನಾಥ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ಉಪಸ್ಥಿತರಿರುವರು.

ಸಮಾರಂಭದ ಸಂಚಾಲಕರಾಗಿ ಬಿ.ಕೆ. ಗಣೇಶ್ ಬಿಸಲೇರಿ, ಬಿ. ಶಿವಕುಮಾರ್ ಉಪಸ್ಥಿತರಿರುವರು ಎಂದು ಶ್ರೀ ಗುರು ವಾದ್ಯವೃಂದದ ಅಧ್ಯಕ್ಷ ಚಿಂದೋಡಿ ಶಂಭುಲಿಂಗಪ್ಪ ತಿಳಿಸಿದ್ದಾರೆ.

# ಟೆಲಿಕಾಂ ವಲಯಕ್ಕೆ ತೆರ ಸಮರ ; ಉಪಗ್ರಹ ಸೇವೆಗಳ ಅವಳಿ ಸವಾಲು




ನವದೆಹಲಿ, ಜ. 1- ಬೆಲೆ ಏರಿಕೆಯ ಕಾರಣದಿಂದ ಗ್ರಾಹಕರು ಕಡಿಮೆಯಾಗಿರುವ ಜೊತೆಗೆ, ಉಪಗ್ರಹ ಸೇವೆ ಒದಗಿಸುವ ಕಂಪನಿಗಳ ಜೊತೆ ಸ್ಪರ್ಧೆ ನಡೆಸುವ ಅವಳಿ ಸವಾಲನ್ನು ದೇಶದ ಖಾಸಗಿ ಟೆಲಿಕಾಂ ವಲಯ ಎದುರಿಸಬೇಕಿದೆ.

2024ರಲ್ಲಿ 5ಜಿ ಸೇವೆಗಳ ವಿಸ್ತರಣೆಗಾಗಿ ಖಾಸಗಿ ಟೆಲಿಕಾಂ ಕಂಪನಿಗಳು ಸುಮಾರು 70 ಸಾವಿರ ಕೋಟಿ ರೂ.ಗಳ ಹೂಡಿಕೆ ಮಾಡಿವೆ. ಈ ಹೂಡಿಕೆಯಿಂದ ಲಾಭ ಪಡೆಯಲು ಕಂಪನಿಗಳು ದರ ಏರಿಕೆ ಮಾಡಿದ್ದವು. ಆದರೆ ಈ ಬೆಲೆ ಏರಿಕೆ ತಿರುಗುಬಾಣವಾಗಿದೆ.

ರಿಲೈಯನ್ಸ್ ಜಿಯೋ, ಭಾರತಿ ಏರ್‌ಟೆಲ್ ಹಾಗೂ ವೊಡಾಫೋನ್ ಐಡಿಯಾ ಕಂಪನಿಗಳು ಶೇ. 10 ರಿಂದ 26ರವರೆಗೆ ಬೆಲೆ ಏರಿಕೆ ಮಾಡಿದ್ದವು. ಇದಾದ ನಂತರ 2.6 ಕೋಟಿ ಗ್ರಾಹಕರನ್ನು ಕಳೆದುಕೊಂಡಿವೆ.

ಸರ್ಕಾರಿ ಸ್ವಾಮ್ಯದ ಟೆಲಿಕಾಂ ಕಂಪನಿಯಾದ ಬಿ.ಎಸ್.ಎನ್.ಎಲ್. ಬೆಲೆ ಏರಿಕೆ ಮಾಡಿರಲಿಲ್ಲ. ನಂತರ ಈ ಕಂಪನಿಗೆ ಸುಮಾರು 68 ಲಕ್ಷ ಗ್ರಾಹಕರು ಸೇರ್ಪಡೆಯಾಗಿದ್ದಾರೆ. ನಷ್ಟದಲ್ಲಿರುವ ಈ ಕಂಪನಿ ಈಗಲೂ ಹಳೆಯ 3ಜಿ ಸೇವೆಗಳನ್ನು ಒದಗಿಸುತ್ತಿದ್ದು, 4ಜಿ ನೆಟ್‌ವರ್ಕ್ ಅಳವಡಿಕೆಯ ಕ್ರಮ ತೆಗೆದುಕೊಳ್ಳುತ್ತಿದೆ.

ಖಾಸಗಿ ಕಂಪನಿಗಳು ಗ್ರಾಹಕರನ್ನು ಕಳೆದುಕೊಂಡಿದ್ದರೂ ಸಹ ತಮ್ಮ ಹೂಡಿಕೆಯನ್ನು ವಾಪಾಸ್ ಪಡೆಯಬೇಕಿದೆ ಹಾಗೂ 5ಜಿ ಜಾಲವನ್ನು ಇನ್ನಷ್ಟು ಹರಡಲು ಹೂಡಿಕೆ ಮಾಡಬೇಕಿದೆ.

2024ರಲ್ಲಿ ರಿಲೈಯನ್ಸ್ ಜಿಯೋ, ಭಾರತಿ ಏರ್‌ಟೆಲ್ ಹಾಗೂ ವೊಡಾಫೋನ್ ಐಡಿಯಾ ಕಂಪನಿಗಳು ಒಟ್ಟಾರೆ 70200 ಕೋಟಿ ರೂ. ಹೂಡಿಕೆ ಮಾಡಿವೆ ಎಂದು ಈ.ವೈ. ಇಂಡಿಯಾ ಮಾರ್ಕೆಟ್ಸ್ ಅಂಟ್ ಟೆಲಿಕಾಂನ ಪ್ರಶಾಂತ್ ಸಿಂಘಾಲ್ ತಿಳಿಸಿದ್ದಾರೆ.

5ಜಿ ಸೇವೆ ಒದಗಿಸುವ ಸೌಲಭ್ಯಗಳಿಗಾಗಿ 2022ರಿಂದ 27ರ ನಡುವೆ ಕಂಪನಿಗಳು ಒಟ್ಟಾರೆ 92 ಸಾವಿರ ಕೋಟಿ ರೂ.ಗಳಿಂದ 1.41 ಲಕ್ಷ ಕೋಟಿ ರೂ. ರೂ. ಹೂಡಿಕೆ ಮಾಡಲು ಬಯಸಿವೆ ಎಂದು ಡಿಜಿಟಲ್ ಇನ್‌ಫ್ರಾಸ್ಟ್ರಕ್ಚರ್ ಪ್ರೊವೈಡರ್ಸ್ ಅಸೋಸಿಯೇಷನ್ ಪ್ರಧಾನ ನಿರ್ದೇಶಕ ಮನೋಜ್‌ಕುಮಾರ್ ಸಿಂಗ್ ಹೇಳಿದ್ದಾರೆ.

ಖಾಸಗಿ ಟೆಲಿಕಾಂ ಕಂಪನಿಗಳು ನೆಟ್‌ವರ್ಕ್ ಮೇಲೆ ಹೂಡಿಕೆ ಮಾಡಬೇಕಿರುವ ಕಾರಣ ಅವುಗಳು ಸೇವಾ ದರ ಹೆಚ್ಚಿಸಿರುವುದನ್ನು ಜೋತಿರಾದಿತ್ಯ ಸಿಂಧ್ಯಾ ಸಹ ಬೆಂಬಲಿಸಿದ್ದಾರೆ. 2024ರಲ್ಲಿ 5ಜಿ ಸೇವೆಗಳನ್ನು ಆರಂಭಿಸಿರುವುದರಿಂದ ಇತ್ತೀಚಿನ ತಂತ್ರಜ್ಞಾನಗಳಾದ ಕೃತಕ ಬುದ್ಧಿವಂತಿಕೆ ಮತ್ತಿತರೆ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ನೆರವಾಗಿದೆ.

5ಜಿ ತಂತ್ರಜ್ಞಾನ ಬದಲಾವಣೆ ತಂದಿದೆ. 5 ಜಿ ಸ್ಥಾವರಗಳ ಸಂಖ್ಯೆ 2024ರ ನವೆಂಬರ್ ವೇಳೆಗೆ 4.62 ಲಕ್ಷಕ್ಕೆ ತಲುಪಿದೆ ಎಂದು ಅಂದಾಜಿಸಲಾಗಿದೆ.

ಬೃಹತ್ ಹೂಡಿಕೆ ಮಾಡುತ್ತಲೇ ಮತ್ತು ಕಡಿಮೆಯಾಗುತ್ತಿರುವ ಗ್ರಾಹಕರ ಸಮಸ್ಯೆ ಎದುರಿಸುತ್ತಲೇ ಕಂಪನಿಗಳು ಉತ್ತಮ ಲಾಭದ ದಾರಿ ಕಂಡುಕೊಳ್ಳಬೇಕಿದೆ. ಆದರೆ ಕಂಪನಿಗಳ ಸವಾಲು ಇಲ್ಲಿಗೇ ನಿಂತಿಲ್ಲ.

ಮುಂದಿನ ವರ್ಷದಿಂದ ಖಾಸಗಿ ಟೆಲಿಕಾಂ ಕಂಪನಿಗಳು ಉಪಗ್ರಹ ಆಧಾರಿತ ಬ್ರಾಡ್‌ಬ್ಯಾಂಡ್ ಸೇವೆ ಒದಗಿಸಲಿವೆ. ಸ್ಪೆಕ್ಟ್ರಂ ವಿತರಣೆಗಾಗಿ ಉಪಗ್ರಹ ಬ್ರಾಡ್‌ಬ್ಯಾಂಡ್ ವಲಯ ತೀವ್ರ ಲಾಬಿ ಮಾಡುತ್ತಿರುವುದು ಕಂಡು ಬಂದಿತ್ತು.

ಉಪಗ್ರಹ ಬ್ರಾಡ್‌ಬ್ಯಾಂಡ್ ಸೇವೆ ಒದಗಿಸಲು ಆಡಳಿತಾತ್ಮಕ ಅನುಮೋದನೆಯ ದಾರಿ ಹಿಡಿಯಬಾರದು. ಹರಾಜಿನ ಮೂಲಕವೇ ಸ್ಪೆಕ್ಟ್ರಂ ವಿತರಿಸಬೇಕು ಎಂದು ಖಾಸಗಿ ಟೆಲಿಕಾಂ ವಲಯ ಒತ್ತಾಯಿಸಿತ್ತು.

ಆಡಳಿತಾತ್ಮಕ ಮಾರ್ಗದ ಮೂಲಕ ಉಪಗ್ರಹ ಬ್ರಾಡ್‌ಬ್ಯಾಂಡ್ ಸ್ಪೆಕ್ಟ್ರಂ ಒದಗಿಸಿದರೆ ಅದರ ಬೆಲೆ ಕಡಿಮೆಯಾಗಲಿದೆ ಹಾಗೂ ಡಾಟಾ ಚಂದಾದಾರರ ಸಂಖ್ಯೆ ಕಡಿಮೆಯಾಗಲಿದೆ ಎಂದು ಟೆಲಿಕಾಂ ಕಂಪನಿಗಳು ಕಳವಳ ಹೊಂದಿವೆ. ಆದರೆ ಸರ್ಕಾರ ಆಡಳಿತಾತ್ಮಕವಾಗಿ ಉಪಗ್ರಹ ಬ್ರಾಡ್‌ಬ್ಯಾಂಡ್ ಸ್ಪೆಕ್ಟ್ರಂ ವಿತರಣೆ ಮಾಡುವುದಾಗಿ ತಿಳಿಸಿದೆ. ಈ ಹಿಂದೆ 2ಜಿ ಸ್ಪೆಕ್ಟ್ರಂ ಅನ್ನು ಆಡಳಿತಾತ್ಮಕವಾಗಿ ವಿತರಿಸಿದಾಗ 1.76 ಲಕ್ಷ ಕೋಟಿ ರೂ.ಗಳ ನಷ್ಟವಾಗಿತ್ತು ಎಂದು ಸಿಎಜಿ ವರದಿಯಲ್ಲಿ ತಿಳಿಸಲಾಗಿತ್ತು. ಹೀಗಾಗಿ ಮತ್ತೆ ಆಡಳಿತಾತ್ಮಕ ಮಾರ್ಗದ ಮೂಲಕ ಸ್ಪೆಕ್ಟ್ರಂ ವಿತರಿಸುತ್ತಿರುವುದು ರಾಜಕೀಯ ಟೀಕೆಗೂ ಕಾರಣವಾಗಿದೆ.

ಆದರೆ ಆಡಳಿತಾತ್ಮಕವಾಗಿ ಸ್ಪೆಕ್ಟ್ರಂ ವಿತರಿಸಿದರೂ ಸಹ ಅದರ ಬೆಲೆ ಟೆಲಿಕಾಂ ನಿಯಂತ್ರಕ ಟ್ರಾಯ್ ಶಿಫಾರಸ್ಸನ್ನು ಆಧರಿಸಿರುತ್ತದೆ ಎಂದು ಸಚಿವ ಸಿಂಧ್ಯಾ ಹೇಳಿದ್ದಾರೆ.

ತ್ವರಿತವಾಗಿ ಸ್ಪೆಕ್ಟ್ರಂ ವಿತರಿಸಬೇಕು. ಇದರಿಂದ ಆದಷ್ಟು ಶೀಘ್ರ ಸೇವೆ ಒದಗಿಸಲು ಹಾಗೂ ಇದುವರೆಗೂ ಸಂಪರ್ಕ ಇಲ್ಲದಿರುವ ಜಾಗಗಳಿಗೆ ಸಂಪರ್ಕ ಕಲ್ಪಿಸಲು ನೆರವಾಗಲಿದೆ ಎಂದು ಭಾರತೀಯ ಬಾಹ್ಯಾಕಾಶ ಒಕ್ಕೂಟದ ಪ್ರಧಾನ ನಿರ್ದೇಶಕ ಎ.ಕೆ. ಭಟ್ ಹೇಳಿದ್ದಾರೆ.

ಉಪಗ್ರಹ ಟೆಲಿಕಾಂ ಸೇವಾದಾರರು ಮಾರುಕಟ್ಟೆಗೆ ಬಂದಲ್ಲಿ ಟೆಲಿಕಾಂ ಕಂಪನಿಗಳು ಬೆಲೆ ಏರಿಕೆ ಮಾಡುವುದನ್ನು ಮುಂದೂಡಬೇಕಾಗುತ್ತದೆ. ಇದರಿಂದ ಮತ್ತೊಂದು ಸುತ್ತಿನ ದರ ಸಮರ ಆರಂಭವಾಗಲಿದೆ. ಇದು ಕಡಿಮೆ ಹೂಡಿಕೆ ಹೊಂದಿರುವ ನೆಟ್‌ವರ್ಕ್‌ಗಳ ಮೇಲೆ ಒತ್ತಡ ತರಲಿದೆ ಎಂದು ಟೆಲಿಕಾಂ ವಲಯದ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಖಾಸಗಿ ಕಂಪನಿಯಾದ ವೊಡಾಫೋನ್ ಐಡಿಯಾ ಈಗಾಗಲೇ ಭಾರೀ ಸಾಲದ ಹೊರೆಯಲ್ಲಿ ಸಿಲುಕಿದೆ. ಮೂರು ವರ್ಷಗಳಲ್ಲಿ 4ಜಿ ಹಾಗೂ 5ಜಿ ನೆಟ್‌ವರ್ಕ್ ಉಪಕರಣಗಳನ್ನು ಪೂರೈಸಲು ನೋಕಿಯಾ, ಎರಿಕ್ಸನ್ ಹಾಗೂ ಸ್ಯಾಮಸಂಗ್ ಕಂಪನಿಗಳಿಗೆ 30 ಸಾವಿರ ಕೋಟಿ ರೂ. ಗುತ್ತಿಗೆಯನ್ನು ವೊಡಾಫೋನ್ ನೀಡಿದೆ.

ಟೆಲಿಕಾಂ ಕಂಪನಿಗಳು ಗ್ರಾಹಕರು ಪಾವತಿಸಬಹುದಾದ ಶುಲ್ಕ ಕಡೆಗಣಿಸುವಂತಿಲ್ಲ. ಡಾಟಾ ಆಧಾರಿತ ಡಿಜಿಟಲ್ ಆರ್ಥಿಕತೆಗೆ ಟೆಲಿಕಾಂ ಕಂಪನಿಗಳು ಮುಖ್ಯವಾಗಿವೆ. ಆಪರೇಟರ್‌ಗಳು ಟೆಲಿಕಾಂ ಸೌಲಭ್ಯದ ಮೇಲೆ ಹೂಡಿಕೆ ಮುಂದುವರೆಸುವ ಅಗತ್ಯವಿದೆ ಎಂದು ಪರಿಣಿತರು ಅಭಿಪ್ರಾಯ ಪಟ್ಟಿದ್ದಾರೆ.

2030ರ ವೇಳೆಗೆ ಭಾರತದ ಇಂಟರ್‌ನೆಟ್ ಆರ್ಥಿಕತೆ 6 ಪಟ್ಟು ಹೆಚ್ಚಾಗಿ 80 ಲಕ್ಷ ಕೋಟಿ ರೂ.ಗಳಿಗೆ ತಲುಪಲಿದೆ ಎಂದು ಗೂಗಲ್ ವರದಿ ತಿಳಿಸಿದೆ. 2022ರಲ್ಲಿ ಇಂಟರ್‌ನೆಟ್ ಆರ್ಥಿಕತೆ 14.5ಲಕ್ಷ ಕೋಟಿ ರೂ. ಆಗಿದೆ ಎಂದು ಅಂದಾಜಿಸಲಾಗಿತ್ತು.

ಗೂಗಲ್, ಅಮೆಜಾನ್, ಫೇಸ್‌ಬುಕ್, ವಾಟ್ಸಾಪ್ ಮುಂತಾದ ವಿದೇಶಿ ದೈತ್ಯ ಟೆಕ್ ಕಂಪನಿಗಳಿಗಾಗಿ ಶೇ. 80ರಷ್ಟು ಬ್ಯಾಂಡ್‌ವಿಡ್ತ್ ಬಳಕೆಯಾಗುತ್ತಿದೆ. ಇದು ಟೆಲಿಕಾಂ ಜಾಲದ ಮೇಲೆ ಹೊರೆ ಏರುತ್ತಿದೆ. ಹೀಗಾಗಿ ಈ ಕಂಪನಿಗಳು ಆದಾಯವನ್ನು ಹಂಚಿಕೊಳ್ಳಬೇಕು ಎಂದು ಟೆಲಿಕಾಂ ವಲಯದ ಒಕ್ಕೂಟವಾದ ಸಿಓಎಐ ಅಭಿಪ್ರಾಯ ಪಟ್ಟಿದೆ. ಟೆಲಿಕಾಂ ವಲಯ ಉಪಕರಣಗಳ ಕಳ್ಳತನದ ಸಮಸ್ಯೆ ಸಹ ಎದುರಿಸುತ್ತಿದೆ. ಈ ರೀತಿಯ ಕಳ್ಳತನದಿಂದ 800 ಕೋಟಿ ರೂ.ಗಳ ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ. ಇದು ಟೆಲಿಕಾಂ ಸೇವೆಗಳ ವಿಸ್ತರಣೆ ಹಾಗೂ ಗುಣಮಟ್ಟದ ಮೇಲೂ ಪರಿಣಾಮ ಬೀರುತ್ತಿದೆ.

2024ರಲ್ಲಿ ವಂಚಕರ ಕರೆ ಹಾವಳಿ ಸಹ ಹೆಚ್ಚಾಗಿದೆ. ಡಿಜಿಟಲ್ ಬಂಧನ ಹಾಗೂ ಕೃತಕ ಬುದ್ಧಿವಂತಿಕೆಯ ದುರ್ಬಳಕೆಯ ಸವಾಲುಗಳೂ ಎದುರಾಗಿವೆ. ಬಗೆಹರಿಯದ ಈ ಸಮಸ್ಯೆಗಳೊಂದಿಗೆ 2025ಕ್ಕೆ ಟೆಲಿಕಾಂ ವಲಯ ಕಾಲಿಡಬೇಕಿದೆ.

## ಜಿಲ್ಲೆಯ ಇಬ್ಬರು ಪೊಲೀಸರು ನಿವೃತ್ತಿ ; ಬೀಳ್ಕೊಡುಗೆ





ದಾವಣಗೆರೆ, ಜ. 1- ಪೊಲೀಸ್ ಇಲಾಖೆಯಲ್ಲಿ ಸುಧೀರ್ಘ ಸೇವೆ ಸಲ್ಲಿಸಿ 2024, ಡಿಸೆಂಬರ್ 31ರಂದು ವಯೋ ನಿವೃತ್ತಿ ಹೊಂದಿದ ಹರಿಹರ ನಗರ ಪೊಲೀಸ್ ಠಾಣೆಯ ಎಎಸ್‌ಐ ಮಹಮ್ಮದ್ ರಸೂಲ್ ಹಾಗೂ ಜಗಳೂರು ಪೊಲೀಸ್ ಠಾಣೆಯ ಸಿಹೆಚ್‌ಸಿ ಆರ್.ಟಿ. ಗುರುಮೂರ್ತಿ ಅವರುಗಳನ್ನು ಜಿಲ್ಲಾ ಪೊಲೀಸ್ ವತಿಯಿಂದ ಜಿಲ್ಲಾ ಪೊಲೀಸ್ ಕಛೇರಿಯಲ್ಲಿ ನಿನ್ನೆ ನಡೆದ ಸರಳ ಕಾರ್ಯಕ್ರಮದಲ್ಲಿ ಬೀಳ್ಕೊಡಲಾಯಿತು. ಹೆಚ್ಚುವರಿ ಪೊಲೀಸ್ ಅಧೀಕ್ಷಕರುಗಳಾದ ವಿಜಯಕುಮಾರ ಎಂ. ಸಂತೋಷ ಮತ್ತು ಜಿ. ಮಂಜುನಾಥ್ ಅವರುಗಳು ನಿವೃತ್ತರನ್ನು ಸನ್ಮಾನಿಸಿ, ಅಭಿನಂದಿಸಿ ನಿವೃತ್ತ ಜೀವನಕ್ಕೆ ಶುಭ ಕೋರಿದರು.

# ಬದಲಾಗಬೇಕಿರುವುದು ವರ್ಷವಲ್ಲ ಬದುಕು..!

'ನಮ್ಮ ಉತ್ಸಾಹವೆನ್ನುವುದು ಕಲ್ಲಿದ್ದಲಿನ ಕಾವಾಗಬೇಕೇ ಹೊರತು ಕೆಂಡದ ಮೇಲಿನ ಗರಿಕೆಯಾಗಬಾರದು' ಎಂಬ ವಿಶ್ವ ಮಾನವ ಕವಿ ಕುವೆಂಪು ಅವರ ನುಡಿಯಂತೆ ನಮ್ಮ ಅನೇಕ ಸಂತೋಷಗಳು ಹೊಸ ವರ್ಷವೆಂಬ ದಿನದ ಮೂರ್ತಿಗೆ ಅಲಂಕಾರಿಕ ಬಿಡಿ ಹೂವು ಆಗದೇ ಅದು ಅನೇಕ ಮಹಾ ಸಂಕಲ್ಪಗಳ ಎಂದಿಗೂ ಚದುರದ ಇಡಿ ಹೂವಿನ ಗುಚ್ಛವಾಗ ಬೇಕು. ಇಂದಿನ ಜೀವನ ಅದೆಷ್ಟೋ ಭರವಸೆಗಳ ಕೂಟ, ನಾವೆಲ್ಲರೂ ಸೇರಿ ಅದನ್ನು ಸವಿದಾಗ ಬದುಕು ಸಾರ್ಥಕವೆನಿಸುತ್ತದೆ.

ಬರೀ ವರ್ಷ ಬದಲಾದರೆ ಸಾಲದು.! ನಮ್ಮ ಬದುಕು ಬದಲಾಗಿ ಇನ್ನೊಬ್ಬರಿಗೆ ಸ್ಫೂರ್ತಿ ಯಾಗುವಂತಹ, ಮಾದರಿಯಾಗುವಂತಹ ವಿಶ್ವ ಪಥವನ್ನ ನಾವೇ ನಿರ್ಮಿಸಿ ನಡೆದು ಇತರರು ನಡೆಯುವಂತೆ ಮಾಡಬೇಕು. ಇಂದಿನ ತಂತ್ರಜ್ಞಾನ ಯುಗದಲ್ಲಿ ನಾವೆಲ್ಲ ಅದೆಷ್ಟೋ ಸಂಬಂಧಗಳು, ಸಂತೋಷಗಳು, ಪ್ರೀತಿ, ವಾತ್ಸಲ್ಯಗಳನ್ನು ನಮಗೆ ಗೊತ್ತಿಲ್ಲದೆ ಕಳೆದು ಕೊಳ್ಳುತ್ತಿದ್ದೇವೆ. 'ರಾಷ್ಟ್ರಕವಿ ಜಿ ಎಸ್ ಶಿವರುದ್ರಪ್ಪ ನವರು ಹೇಳುವಂತೆ ಹತ್ತಿರ ವಿದ್ದು ದೂರ ನಿಲ್ಲುವೆವು ನಮ್ಮ ಅಹಮಿನ ಕೋಟೆ ಯಲಿ" ಎನ್ನುವಂತೆ ಮನಸಿನ ಅರಮನೆಯಲ್ಲಿ ಗೋಡೆಗಳ ಕಟ್ಟಿಕೊಂಡು ಯಾವುದೋ ಸಣ್ಣ ವಿನಾ ಕಾರಣಕ್ಕೆ ಇನ್ನೊಬ್ಬರಿಂದ ದೂರವಾಗಿರು ತ್ತೇವೆ. ಅಂತ ಸಂಬಂಧವನ್ನು ಮತ್ತೆ ಬೆಸೆಯುವ ಪ್ರಯತ್ನ ಮಾಡಬೇಕು ಮುಕ್ತವಾದ ಮಾತುಕತೆಯ ಮೂಲಕ ಎಂತಹುದೇ ಸಮಸ್ಯೆ ಬಗೆಹರಿಸಿಕೊಳ್ಳ ಬಹುದು. ಅಂತಹ ಮುಕ್ತ ಮಾತುಕತೆಗೆ ಹಾತೊರೆ ಯುವ ಮನಸ್ಸು ನಮ್ಮಲ್ಲಿ ಇರಬೇಕು ಅಷ್ಟೇ .

ಹೊಸ ವರ್ಷದ ನೆಪದಲ್ಲಿ ಅದೆಷ್ಟೋ ಹಣ ವ್ಯಯಿಸುವ ನಾವು ಅದನ್ನ ದುಡಿದು ಕೊಟ್ಟ ಕೈಗಳನ್ನೇ ಮರೆತು ಪಾರ್ಟಿ ಮಾಡುತ್ತೇವೆ. ಆದ್ರೆ ಕೊಟ್ಟ ಕೈಗಳು ಮಾತ್ರ ಎಂದಿಗೂ ನಿಮ್ಮನ್ನ ನಿಮ್ಮ ಸಂತೋಷವನ್ನ ಅಡ್ಡಿಪಡಿಸುವ ಗೋಜಿಗೆ ಹೋಗುವುದಿಲ್ಲ. ಹಾಗಾಗಿ ನಿಮಗೆ ಒಳಿತನ್ನು ಬಯಸುವ ಆ ಮುಖಗಳಲ್ಲಿ ಕೊಂಚ ಹೂ ನಗೆ ಸದಾ ಇರುವಂತೆ ನೋಡಿಕೊಳ್ಳುವ ಶಪಥ ಮಾಡಿಕೊಳ್ಳಿ.

ನಿಮ್ಮ ಕನಸುಗಳು, ಬದುಕಿನಲ್ಲಿ ಹಾಕಿಕೊಂಡ ಗುರಿಗಳು ಎಷ್ಟರ ಮಟ್ಟಿಗೆ ಈಡೇರಿವೆ. ಅವುಗಳ ಸಫಲತೆ, ವಿಫಲತೆಗಳನ್ನು ಒಮ್ಮೆ ಆತ್ಮವಿಮರ್ಶೆ ಮಾಡಿಕೊಳ್ಳಿ ಅವುಗಳ ಸರ್ಕಾರದತ್ತ ಹೊಸ ಹೆಜ್ಜೆಗಳನ್ನು ಇಡುವ ಪ್ರಯತ್ನ ಮಾಡಿ. ಈ ಸುಂದರವಾದ ಬದುಕು ಅದೆಷ್ಟೋ ಜನ್ಮಗಳ ಫಲ. ಇಂಥಹ ಜನ್ಮ ಪಡೆದ ನಾವೇ ಧನ್ಯರು ಎಂಬುದ ಮೊದಲು ಅರಿಯಿರಿ. ಸಾಧ್ಯವಾದರೆ ಇನ್ನೊಬ್ಬರ ನೋವು, ನಲಿವುಗಳಲ್ಲಿ ಭಾಗಿಯಾಗಿ 'ಎಲ್ಲರೊಳಗೆ ಒಂದಾಗು ಮಂಕುತಿಮ್ಮ'ಎಂಬ ಡಿ. ವಿ .ಜಿ ಯವರ ನುಡಿಯಂತೆ ಬದುಕುವುದನ್ನು ಕಲಿತುಕೊಳ್ಳಬೇಕು

ಈ ವರ್ಷದಲ್ಲಿ ನಾವು ಓದಬೇಕಾದ ಪುಸ್ತಕಗಳು, ಕೇಳಬೇಕಾದ ಹಾಡುಗಳು, ಮಾಡಲೇ ಬೇಕಾದ ಒಳ್ಳೆಯ ಕಾರ್ಯಗಳು, ಕಿರಿಯರಿಗೆ ನೀಡಬೇಕಾದ ಸಲಹೆಗಳು ಮತ್ತು ಹಿರಿಯರಿಂದ ಪಡೆಯಬೇಕಾದ ಸಲಹೆಗಳನ್ನು ಪಟ್ಟಿ ಮಾಡಿಕೊಳ್ಳಿ

ಯಾಕೆಂದರೆ ಪುಸ್ತಕಗಳು ,ಹಾಡುಗಳು ಬದುಕಿನ ಬೆಸ್ಟ್ ಇನ್ವೆಸ್ಟ್‌ಮೆಂಟ್ ಅವುಗಳಿಗೆ ಒಮ್ಮೆ ಹಣ ಸುರಿದರೆ ನಿಮ್ಮ ಉಸಿರು ಹೋದರೂ ಅವುಗಳ ಹೆಸರುಗಳು, ಭಾವನೆಗಳು, ಸಂತೋಷ ಗಳು ಅವುಗಳು ಮನಸ್ಸಿಗೆ ನೀಡುವ ಮುದವೆಂದಿಗೂ ಕಡಿಮೆಯಾಗುವುದಿಲ್ಲ . ಹಿಂದಿನ ವರ್ಷಕ್ಕಿಂತ ಈ ವರ್ಷ ಇನ್ನೂ ಹೆಚ್ಚು ಜ್ಞಾನವಂತರಾಗಿ ದಯಾಳು ಗಳಾಗಿ ನಮ್ಮಿಂದ ಇನ್ನೊಬ್ಬರಿಗೆ ತೊಂದರೆಯಾಗ ದಂತೆ ಸ್ವಾಸ್ಥ್ಯ ಸಮಾಜ ಕಟ್ಟುವಂತಹ ಸಂಕಲ್ಪಗಳನ್ನು ಮಾಡಿಕೊಂಡು ಅವುಗಳ ಸಫಲತೆಗಾಗಿ ಎಲ್ಲರೊಂದಿಗೆ ಶ್ರಮಿಸುವಂತಹ ಶಪಥ ಮಾಡಿಕೊಳ್ಳೋಣ..



**- ಬಸವರಾಜ ಕರುವಿನ**
**ಬಸವನಾಳು**




## ಮತ್ತೆ ತಂದಿದೆ ಹೊಸ ವರುಷ

ಮತ್ತೆ ತಂದಿದೆ ಹೊಸ ವರುಷ
ಮುತ್ತಿನಂತಹ ಹೊಸ ಹರುಷ

ಸಂಪಿಗೆ ಹೂವಿನ ಘಮದಂತೆ
ಕಂಪು ಬೀರುವ ಮಲ್ಲಿಗೆಯಂತೆ
ತಂಪು ನೆಮ್ಮದಿಯ ತರುತಿರಲಿ
ಇಂಪು ಜೀವನಕೆ ಇದಾಗಲಿ

ರೋಗ ರುಜಿನಗಳು ಬರದಿರಲಿ
ಸೊಗಸು ಸಂಭ್ರಮ ತುಂಬಿರಲಿ
ಜಗವನು ಸ್ವಚ್ಛ ಮಾಡಿಸುತಿರಲಿ
ಹಗರಣ ಮೋಸ ಇಲ್ಲದಿರಲಿ

ನಾಲ್ಕು ದಿನದ ಈ ಜೀವನದಲ್ಲಿ
ನಾಲ್ಕು ಜನರ ಸೇವೆ ಆಗಲಿ
ನಾಲ್ಕು ತಂತಿಯ ವೀಣೆಯಂತಾಗುತ
ನಾಲ್ಕು ವೇದದ ಸಾರವ ಅರಿಯಲಿ

ಸಂಸ್ಕೃತಿ ಸಂಸ್ಕಾರ ಉಳಿಸೋಣ
ಸಂಸ್ಕರಣೆಯಿಂದ ಬೆಳೆಯೋಣ ಸು
ಸಂಸ್ಕೃತರು ನಾವಾಗೋಣ
ಸಂತತ ಆನಂದವ ಹಂಚೋಣ

ಸುಳ್ಳು ಕಪಟ ವಂಚನೆ ದೂರಾಗಲಿ
ಒಳ್ಳೆ ಭಾವಗಳ ಹೂ ಅರಳಲಿ
ಬಳ್ಳಿಯಂತೆ ಸಿರಿಹರಿಯ ಹಿಡಿಯಲಿ
ಎಲ್ಲ ಸನ್ಮಂಗಳವೇ ಆಗಲಿ

**- ಡಾ. ರೂಪಶ್ರೀ ಶಶಿಕಾಂತ್**, ದಾವಣಗೆರೆ.

## ಮತ್ತೆ ಬಂತು ಹೊಸವರ್ಷ

ದಿನ ಉರುಳಿ ಕಾಲ ಮರಳಿ
ಮತ್ತೆ ಬಂತು ಹೊಸ ವರ್ಷ
ಬಾಡಿದ ಮುಖಗಳನರಳಿಸುತ್ತ
ನವೋಲ್ಲಾಸ ಬೀರುತ
ಚಲಿಸುತಲಿದೆ ಜೀವನ
ಮತ್ತೆ ಬಂತು ಹೊಸ ವರ್ಷ!

ಕೊಲೆ- ಸುಲಿಗೆ; ಮೋಸ; ವಂಚನೆ
ಚುನಾವಣೆ; ಚಲಾವಣೆ
ಯುದ್ಧದ ಕಾರ್ಮೋಡ ಕವಿದು
ಆಯುಧಗಳನು ಹಿಡಿದು
ಅದೆಷ್ಟೋ ಜೀವಗಳ ಬಲಿ ತೆಗೆದುಕೊಂಡಿತು
ಮತ್ತೆ ಬಂತು ಹೊಸ ವರ್ಷ!

ನಾಡಿನ ಜಲಸಿರಿಯು ಪರರ ಪಾಲು
ಯೋಜನೆ-ಆರ್ಥಿಕತೆ ಖೋತಾ
ಹಣವ ಹಂಚಿ ಮತ ಖರೀದಿಸಿ
ಹೊಸ-ಹೊಸ ಪೋಜುಗಳನು ಕೊಡುತ
ಮಾಧ್ಯಮಗಳಲ್ಲಿ ಮುಖ ತೋರಿಸುತ
ಮುನ್ನಡೆಯುತ್ತಿರುವ ಭ್ರಷ್ಟರ ಹಿಂಡು
ಪ್ರಜೆಗಳ ಬಾಳ ಬೇವಾಗಿಸಿ
ಮತ್ತೆ ಬಂತು ಹೊಸ ವರ್ಷ!

ದೇಶ ಸೇವೆಯ ತೊರೆದು
ಕೊಟ್ಟ ಮಾತನ್ನು ಮರೆತು
ಮಳ್ಳ ಮಂದಿಗೆ ಸುಳ್ಳು ಹೇಳುತ್ತ
ಅಧಿಕಾರ ಪಡೆದು ಮತದಾರರಿಗೆ
ಪಂಗನಾಮವ ಹಾಕಿ ಹೋಗಲು
ಮತ್ತೆ ಬಂದಿದೆ ಹೊಸ ವರ್ಷ!

ಉಳ್ಳವರಿಗೆ ಸಂಭ್ರಮದ ಸುದಿನ
ಬಡವರಿಗೆ ದಿಕ್ಕು ತೋಚದ ಕಷ್ಟದ ದಿನ
ಮನೆಯ ಮುಂದಿನ ಮಲ್ಲಿಗೆ ಅರಳಲಿಲ್ಲ
ಪರಿಮಳವ ಬೀರಲಿಲ್ಲ; ಕೋಗಿಲೆ ಹಾಡಲಿಲ್ಲ
ಅದೇ ದಿನ; ಅದೇ ತಿಂಗಳು; ಅದೇ ವರ್ಷ;
ಮತ್ತೇನು ಹೊಸತು ಕಾಣುತ್ತಿಲ್ಲ
ಮತ್ತೆ ಬಂದಿದೆ ಹೊಸ ವರ್ಷ!

ದುಡ್ಡಿದ್ದವರಿಗೆ ಮುದ ನೀಡಲು
ಭಯೋತ್ಪಾದಕರಿಗೆ ಬಲ ಹೆಚ್ಚಿಸಲು
ಪೀಠಾಧಿಪತಿಗಳಿಗೆ ಪೂಜೆ ಸಲ್ಲಿಸಲು
ಬಡವರಿಗೆ ಕಂಟಕವಾಗಿ
ಸಿಹಿ-ಕಹಿಯ ಸೋಗು ಹಾಕಿ
ಮತ್ತೆ ಬಂತು ಹೊಸ ವರ್ಷ!

**- ಜೆಂಬಿಗಿ ಮೃತ್ಯುಂಜಯ,**
ಕನ್ನಡ ಉಪನ್ಯಾಸಕರು, ದಾವಣಗೆರೆ.

## ವರ್ಷಾರಂಭ

ಪರಕೀಯರ ವರ್ಷಾರಂಭ......
ನಮಗಿರಲಿ ನಮ್ಮ ಸಮಾರಂಭ

ಯುಗದ ಆದಿಯ ಪ್ರಾರಂಭ.....
ಭಾರತೀಯರ ವರ್ಷ ಶುಭಾರಂಭ

ಹೊಸ ವರುಷವು-ಹೊಸ ಕಾತುರವು
ಹೋಳಿಗೆ ಸವಿಯಲು ಮನ ಆತುರವು

ಬೇವು-ಬೆಲ್ಲದ ಸವಿ ರುಚಿಯಲ್ಲಿ
ಬಾಳಿಗಿಹುದು ಸುಂದರ ಪಾಠವಲ್ಲಿ

ಉಳಿಸಿಕೊಳ್ಳೋಣ ನಾವು ನಮ್ಮತನ
ಬೆಳಸಿ ಬೆಳಗೋಣ ನಾವೆಂದೂ ಸನಾತನ.

**- ವೀಣಾ ಕೃಷ್ಣಮೂರ್ತಿ**, ದಾವಣಗೆರೆ.

## ಅಭಿಮಾನಿಗಳಿಗೆ ಹೊಸ ವರ್ಷದ ಶುಭಾಶಯ ಹೇಳಿದ ಶಿವರಾಜ್ ಕುಮಾರ್

ಬೆಂಗಳೂರು, ಜ.1- ಕ್ಯಾನ್ಸರ್ ಶಸ್ತ್ರಚಿಕಿತ್ಸೆಗೆ ಒಳಗಾಗಿ ಗುಣ ಮುಖರಾಗುತ್ತಿರುವ ನಟ ಶಿವರಾಜ್ ಕುಮಾರ್ ತಮ್ಮ ಅಭಿಮಾನಿಗಳು ಮತ್ತು ಕರ್ನಾಟಕದ ಜನತೆಗೆ ಹೊಸ ವರ್ಷದ ಶುಭಾಶಯ ಕೋರಿದ್ದಾರೆ.



ಅಮೆರಿಕದ ಮಿಯಾಮಿ ಕ್ಯಾನ್ಸರ್ ಆಸ್ಪತ್ರೆಯಲ್ಲಿ ನಟ ಶಿವರಾಜ್ ಕುಮಾರ್ ಅವರಿಗೆ ಮೂತ್ರಕೋಶ ಶಸ್ತ್ರಚಿಕಿತ್ಸೆ ನಡೆಸಲಾಗಿತ್ತು, ಎಲ್ಲ ವೈದ್ಯಕೀಯ ಪರೀಕ್ಷಾ ವರದಿಗಳು ನೆಗೆಟಿವ್ ಬಂದಿದ್ದು, ಗುಣಮುಖ ರಾಗಿದ್ದಾರೆ ಎಂದು ವೈದ್ಯರು ಅಧಿಕೃತ ಹೇಳಿಕೆ ನೀಡಿದ್ದಾರೆ. ಈ ವೇಳೆ ಮಾತನಾಡಿದ ನಟ ಶಿವರಾಜ್ ಕುಮಾರ್, ಅಭಿಮಾನಿ ದೇವರುಗಳ ಹಾರೈಕೆ ಮತ್ತು ಪ್ರಾರ್ಥನೆಯಿಂದ ನಾನು ಗುಣಮುಖನಾಗಿದ್ದೇನೆ, ವೈದ್ಯರ ಅತ್ಯುತ್ತಮ ಚಿಕಿತ್ಸೆ, ಸ್ನೇಹಿತರು, ಸಹ ಕಲಾವಿದರ ಹಾರೈಕೆಯಿಂದ ಚೇತರಿಸಿಕೊಂಡಿದ್ದೇನೆ ಎಂದಿದ್ದಾರೆ.

## ಮಲೇಬೆನ್ನೂರು : ಮಕ್ಕಳಿಗೆ ಸ್ಕೂಲ್ ಬ್ಯಾಗ್ ವಿತರಣೆ



ಮಲೇಬೆನ್ನೂರು, ಜ. 1- ಶ್ರೀ ಮಾರುತಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಿಗೆ ನವದೆಹಲಿಯ ರಾಷ್ಟ್ರೀಯ ಗ್ರಾಮೀಣ ಸಾಕ್ಷರತಾ ಮಿಷನ್ ಸಂಸ್ಥೆ ಉಚಿತವಾಗಿ ನೀಡಿದ ಸ್ಕೂಲ್ ಬ್ಯಾಗ್‌ಗಳನ್ನು ವಿತರಣೆ ಮಾಡಲಾಯಿತು.

ಹರಿಹರ ತಾ. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಶರಣ ಕುಮಾರ್ ಹೆಗಡೆ, ಮಲೇಬೆನ್ನೂರು ಕೇಂದ್ರದ ಸಂಪನ್ಮೂಲ ವ್ಯಕ್ತಿ ಕರಿಬಸಪ್ಪ ಬಸಲಿ, ತಾ. ಅನುದಾನಿತ ಶಾಲಾ ಶಿಕ್ಷಕರ ಒಕ್ಕೂಟದ ಅಧ್ಯಕ್ಷ ಕೆ. ಭೀಮಪ್ಪ ಇವರುಗಳ ಸಹಕಾರದಿಂದ ನಮ್ಮ ಶಾಲೆಗೆ ವಿವಿಧ ಸೌಲಭ್ಯಗಳು ಸಿಗುತ್ತಿವೆ ಎಂದು ಮಾರುತಿ ವಿದ್ಯಾ ಸಂಸ್ಥೆಯ ನಿರ್ದೇಶಕ ವಾಸವಿ ರಮೇಶ್ ಹೇಳಿದರು.

ಶಿಕ್ಷಕರ ಸೇವಾ ವೇದಿಕೆಯ ಶಿಕ್ಷಕರಾದ ಹೊಸಪಾಳ್ಯ ಪರಶುರಾಮ್, ಯಲವಟ್ಟಿ ರಾಘವೇಂದ್ರ, ಮೂಗಿನ ಗೊಂದಿ ಪ್ರವೀಣ, ಹಾಲಿವಾಣ ಮಲ್ಲಿಕಾರ್ಜುನ್, ವಿದ್ಯಾ ಸಂಸ್ಥೆಯ ಅಧ್ಯಕ್ಷ ಸತ್ಯನಾರಾಯಣ್ ಜೋಯಿಸ್, ಕಾರ್ಯದರ್ಶಿ ಎಂ.ಡಿ. ಮುರುಳೀಧರ್ ರಾವ್, ಶಾಲಾ ಮುಖ್ಯ ಶಿಕ್ಷಕ ಸಿ. ಪರಮೇಶ್ವರಪ್ಪ ಹಾಗೂ ಸಹ ಶಿಕ್ಷಕರು ಈ ವೇಳೆ ಹಾಜರಿದ್ದರು.

## ಲಾವಣ್ಯ ಶ್ರೀಧರ್‌ಗೆ ಚಾಂಪಿಯನ್ ಆಫ್ ಚಾಂಪಿಯನ್‌ಶಿಪ್



ದಾವಣಗೆರೆ, ಜ. 1- ನಗರದ ಎಸ್. ಎ. ಎಸ್. ಎಸ್. ಯೋಗ ಕೇಂದ್ರದ ಶ್ರೀಮತಿ ಎಸ್.ಪಿ. ಲಾವಣ್ಯ ಶ್ರೀಧರ್ ಅವರು ಪತಂಜಲಿ ಕಾಲೇಜ್ ಆಫ್ ರಿಸರ್ಚ್ ಸೆಂಟರ್ ನ್ಯಾಷನಲ್ ಯೋಗ ಅಸೋಸಿಯೇಷನ್ ಆಫ್ ಇಂಡಿಯಾ ಇವರ ಸಹಯೋಗದೊಂದಿಗೆ ಗೋವಾದಲ್ಲಿ ಕಳೆದ ವಾರ ನಡೆದ ರಾಷ್ಟ್ರೀಯ ಯೋಗಾಸನ ಸ್ಪರ್ಧೆಯಲ್ಲಿ ಬಂಗಾರದ ಪದಕ ಪಡೆಯುವುದರ ಮೂಲಕ 'ಚಾಂಪಿಯನ್ ಆಫ್ ಚಾಂಪಿಯನ್‌ಶಿಪ್' ವಿಜೇತರಾಗಿದ್ದಾರೆ.

ಲಾವಣ್ಯ ಶ್ರೀಧರ್ ಅವರಿಗೆ ಎಸ್.ಎ.ಎಸ್.ಎಸ್. ಯೋಗ ಕೇಂದ್ರದ ಸಂಸ್ಥಾಪಕ ಅಧ್ಯಕ್ಷ ಎನ್. ಪರಶುರಾಮ್ ಅಭಿನಂದಿಸಿದ್ದಾರೆ.

## ಜೈನ್ ಕಾಲೇಜ್‌ಗೆ ಶಾಶ್ವತ ಸಂಯೋಜನೆ

ದಾವಣಗೆರೆ, ಜ.1- ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯವು ಜೈನ್ ತಾಂತ್ರಿಕ ಮಹಾ ವಿದ್ಯಾಲಯದ ಕೆಲವು ವಿಭಾಗಗಳಿಗೆ ಶಾಶ್ವತ ಸಂಯೋಜನೆ ನೀಡಿದೆ ಎಂದು ಕಾಲೇಜಿನ ಪ್ರಾಚಾರ್ಯ ಡಾ.ಗಣೇಶ್ ತಿಳಿಸಿದ್ದಾರೆ. ಕಾಲೇಜಿನ ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಇಂಜಿನಿಯರಿಂಗ್ ಹಾಗೂ ಮಾಸ್ಟರ್ ಆಫ್ ಬಿಸಿನೆಸ್ ಅಡ್ಮಿನಿಸ್ಟ್ರೇಷನ್ ವಿಭಾಗಗಳನ್ನು ಶಾಶ್ವತ ಸಂಯೋಜನೆಗೆ ಒಳಪಡಿಸಿ ವಿವಿ ಆದೇಶ ಹೊರಡಿಸಿದೆ.

## ಹೊಸ ವರುಷದ ಹರುಷ

ನವ ನವೀನ ವರುಷ ಬಂದಿದೆ
ನವ ನವೀನ ಸಡಗರ ತಂದಿದೆ
ನವ ಚಿಂತನೆಗೆ ನಾಂದಿ ಹಾಡಿದೆ
ನವ ಸಂವತ್ಸರ ಉದಯವಾಗಿದೆ

ಬದುಕಿನ ಒಂದು ವರ್ಷ ಜಾರಿದೆ
ಸಾಧನೆ ಏನಿತೋ ದೂರವಾಗಿದೆ
ಏನು ಒಳಿತು ಮಾಡಿದೆ ನಾನು
ಅನವರತ ಚಿಂತಿಸಬೇಕಿದೆ

ಸಂತಸ ಸಂಭ್ರಮ ತುಂಬಿದೆ
ಬಾನಾಡಿಯಾಗಿ ಮನ ಹಾರಾಡಿದೆ
ಸಮರಸದಿ ಬಾಳೋಣ ನಾವು
ಕಾಮ ಕ್ರೋಧವ ದುಡೋಣ ನಾವು

ಅಂತರಂಗದ ಕದ ತೆರೆಯಬೇಕು
ಸಂತತ ಹರಿ ಚಿಂತನೆ ಮಾಡಬೇಕು
ದೀನರ ನೆರವಿಗೆ ಧಾವಿಸಿ
ಅನುದಿನ ಮುದ್ದು ಬಾಲಕೃಷ್ಣನ ಸೇವಿಸುವ

**- ಕೋಮಲ ವಿ ಕುಮಾರ್**, ದಾವಣಗೆರೆ.


**ಬೇಕಾಗಿದ್ದಾರೆ**
ರಾತ್ರಿ ಶಿಫ್ಟ್‌ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ ಖುದ್ದಾಗಿ ಜನತಾವಾಣಿ ಕಚೇರಿಯನ್ನು ಬೆಳಿಗ್ಗೆ 12 ರಿಂದ ಸಂಜೆ 5 ಗಂಟೆಯ ಒಳಗೆ ಸಂಪರ್ಕಿಸಿ

**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ ತಿಮ್ಮಾರೆಡ್ಡಿ ಕಾಲೇಜ್ ಹತ್ತಿರ 30x56 North, 30x46 South, 40x35 South 30x45 East, 30x40 North, 40x60 North.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 40x70 ಪೂರ್ವ, ಜೈನ್ ಸ್ಕೂಲ್ ಹಿಂಭಾಗದಲ್ಲಿ 30x55 ಪಶ್ಚಿಮ, 30x40 ಪಶ್ಚಿಮ ಅಕ್ಕ-ಪಕ್ಕ, 35x50 ಉತ್ತರ-ಪಶ್ಚಿಮ ಕಾರ್ನರ್, 40x70 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
1) ಅಕೌಂಟೆಂಟ್ 2) ಸ್ಟೋರ್ ಕೀಪರ್ 3) ಸೇಲ್ಸ್ ಆಫೀಸರ್,
ವಿದ್ಯಾರ್ಹತೆ- PUC, Degree
ಅನುಭವ - 1year (ಆಕರ್ಷಕ ವೇತನ)
Vedavit IT Solutions, Davanagere
9611098942 / 9741741983

**ಬೇಕಾಗಿದ್ದಾರೆ**
ಹೋಟೆಲ್‌ಗೆ ವೆಜ್ ಮತ್ತು ನಾನ್‌ವೆಜ್ ಅಡುಗೆ ಭಟ್ಟರು ಬೇಕಾಗಿದ್ದಾರೆ ಮತ್ತು ಹೆಲ್ಪರ್ಸ್ ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ.
80507 04290

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಪಾರ್ಸಲ್ ಕಟ್ಟಲು ಅನುಭವವುಳ್ಳ ಪುರುಷರು ಬೇಕಾಗಿದ್ದಾರೆ. ದಯವಿಟ್ಟು ಅನುಭವವುಳ್ಳವರು ಮಾತ್ರ ಕರೆ ಮಾಡಿ.
95385 89555

**ಅನುಭವವುಳ್ಳ ಗೋಡಾನ್ ಮ್ಯಾನೇಜರ್ ಬೇಕಾಗಿದ್ದಾರೆ.** ಸಂಪರ್ಕಿಸಿ
**ಸಮ್ಯಕ್ ಸೆರಾಮಿಕ್ಸ್**
ಹದಡಿ ರೋಡ್, ದಾವಣಗೆರೆ.
ಮೊ. : 80888 92673

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯ ಪಕ್ಕ, ಗೀತಂ ಕಾಲೇಜ್ ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x40 ಪೂರ್ವ, 28x30 ಪಶ್ಚಿಮ ಅಕ್ಕ-ಪಕ್ಕ 60 ಅಡಿ ರಸ್ತೆಗೆ 30x40 ಪಶ್ಚಿಮ, 30x50 ಪಶ್ಚಿಮ, 30x40 ದಕ್ಷಿಣ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ವಾಣಿಜ್ಯ ಮಳಿಗೆ ಬಾಡಿಗೆಗಿದೆ**
ಹರಿಹರದ ಟೆಂಪಲ್ ರಸ್ತೆಯಲ್ಲಿರುವ ಪ್ರಭಾಕರ್ ಟೆಕ್ಸ್‌ಟೈಲ್ಸ್ ಎದುರಿಗೆ 18x80 ಅಡಿ ಅಳತೆಯ ಲಿಫ್ಟ್ ಸೌಕರ್ಯವಿರುವ ನೆಲಮಹಡಿ, 1ನೇ ಮಹಡಿ, 2ನೇ ಮಹಡಿಯ ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ. ಆಸಕ್ತರು ವಿಚಾರಿಸಿ
ಮೊ. : 98442 94446

**ಮಳಿಗೆಗಳು ಮಾರಾಟಕ್ಕಿವೆ**
ಬಾಡಿಗೆ ಬರುವಂತಹ ಮಳಿಗೆಗಳು ಮಾರಾಟಕ್ಕಿವೆ ಸಿತಾರಾ ಬಾರ್ ಹತ್ತಿರ 46x24 ಸೈಜಿನಲ್ಲಿ 5 ಮಳಿಗೆಗಳು.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ತಕ್ಷಣ ಬೇಕಾದ್ದಾರೆ**
whole sale ಅಂಗಡಿಗೆ Supervisor ಮತ್ತು ಟ್ಯಾಲಿ ಬಿಲ್ಲಿಂಗ್ ಆಪರೇಟರ್ ಬೇಕಾಗಿದ್ದಾರೆ. ಅನುಭವಿಗಳಿಗೆ ಆದ್ಯತೆ ನೀಡಲಾಗುವುದು. ಶಿಕ್ಷಣ ಅರ್ಹತೆ: PUC/ DEGREE. ವಯಸ್ಸಿನ ಮಿತಿ: 18-45 ವರ್ಷಗಳು. ಸಂಪರ್ಕಿಸಿ :
9482214855

**ಬೇಕಾಗಿದ್ದಾರೆ**
ಅನುಭವವುಳ್ಳ ಸೇಲ್ಸ್ ಮನ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ :
ಗಂಗಾವತಿ ಸಿಲ್ಕ್ಸ್ ಸ್ಯಾರಿ ಸೆಂಟರ್, ಬಿನ್ನಿ ಕಂಪನಿ ರಸ್ತೆ, ದಾವಣಗೆರೆ

**ಸೈಟುಗಳು, ಮನೆಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಶಿವ-ಪಾರ್ವತಿ ಲೇಔಟ್, ಡಾಲರ್ಸ್ ಕಾಲೋನಿ, ಎಸ್.ಎಸ್. ಲೇಔಟ್, ವಿದ್ಯಾನಗರ, ಗ್ಲಾಸ್ ಹೌಸ್ ಲೇಔಟ್ ಹಾಗೂ ಕುಂದುವಾಡ, ಯರಗುಂಟೆಯಲ್ಲಿ ಇನ್‌ವೆಸ್ಟ್‌ಮೆಂಟ್ ಸೈಟುಗಳು, ಮನೆಗಳು & ಕಮರ್ಷಿಯಲ್ ಸೈಟ್ ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ. 30x40, 40x60, 30x50.
97315 12365

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕೆಲಸ ಮಾಡಲು ಅನುಭವ ಇರುವ ಸಪ್ಲೈಯರ್‌ಗಳು ಹಾಗೂ ಹುಡುಗರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ನೀಡಲಾಗುವುದು.
90916 90966, 99453 08661, 98449 84431

**ಬೇಕಾಗಿದ್ದಾರೆ**
**ಮನೆ ಕೆಲಸಕ್ಕೆ & ಮಗು ನೋಡಿಕೊಳ್ಳಲು**
ಬೆಳಿಗ್ಗೆ 7.30 ರಿಂದ ಸಂಜೆ 5.30ರವರೆಗೆ ಬೇಕಾಗಿದ್ದಾರೆ. ದಾವಣಗೆರೆ. ಸಂಪರ್ಕಿಸಿ :
74066 68446

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗ-ಹುಡುಗಿಯರು ಬೇಕಾಗಿದ್ದಾರೆ. ಸಂಪರ್ಕಿಸಿ :
90367 34919

**ವಧು ಬೇಕಾಗಿದೆ**
ರೈತ ಕುಟುಂಬದ ಸಾಧು ಲಿಂಗಾಯತ 38 ವರ್ಷದ ವರನಿಗೆ ಲಿಂಗಾಯತ ವಧು ಬೇಕಾಗಿದೆ. ವಿಧವೆ, ವಿಚ್ಛೇದಿತರು, ಮಕ್ಕಳಿದ್ದರೂ ಸಂಪರ್ಕಿಸಬಹುದು.
74835 71646, 9742448252

**ಎಲೆಕ್ಟ್ರಿಕ್ ಶಾಪ್ ಮಾರಾಟಕ್ಕಿದೆ**
ಎಲೆಕ್ಟ್ರಿಕಲ್ ಸಾಮಾನುಗಳ ಸಮೇತವಾಗಿ (ರ್‍ಯಾಕ್ + ಟೇಬಲ್‌ಗಳು) ಮಾರಾಟಕ್ಕಿವೆ. 60 ಅಡಿ ರಿಂಗ್ ರೋಡ್, ಶ್ರೀನಿವಾಸ ನಗರ, ದಾವಣಗೆರೆ ತಾ.
99165 25870, 99866 29551

**ಗೋಡೌನ್ ಬಾಡಿಗೆಗೆ**
4,000 ಅಡಿ + ಸ್ಟೋರೇಜ್ 2,500 ಅಡಿ ಕರೂರು ಇಂಡಸ್ಟ್ರಿಯಲ್ ಏರಿಯಾ KIADB ಗೋಡೌನ್ ಬಾಡಿಗೆಗೆ ಮತ್ತು ಹಳೆಯ ಡೈನಿಂಗ್ ಚೇರ್‌ಗಳು ಸೇಲ್‌ಗೆ ಇವೆ.
98459 77475
92421 45611

**ಬೇಕಾಗಿದ್ದಾರೆ**
ಶಾಮನೂರು ರಸ್ತೆಯಲ್ಲಿ MRP ಪಕ್ಕದಲ್ಲಿ ನಾನ್‌ವೆಜ್ ಹೋಟೆಲ್ ನಡೆಸಿಕೊಂಡು ಹೋಗಲು ಬೇಕಾಗಿದ್ದಾರೆ. ಎಲ್ಲಾ ಸೌಲಭ್ಯವುಳ್ಳದ್ದಾಗಿರುತ್ತದೆ. 40 ಸಾವಿರ ಅಡ್ವಾನ್ಸ್, ತಿಂಗಳಿಗೆ 12 ಸಾವಿರ ಬಾಡಿಗೆ ಆಸಕ್ತರು ಸಂಪರ್ಕಿಸಿ.
98441 27137

**ಸಾಲಗಳಿಗಾಗಿ ಸಂಪರ್ಕಿಸಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ ಮತ್ತು ಮನೆ ಕಟ್ಟಲು ಫೈನಾನ್ಸ್ ಕಂಪನಿಯಲ್ಲಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಅತೀ ಕಡಿಮೆ ಬಡ್ಡಿದರದಲ್ಲಿ ಸಾಲ ವರ್ಗಾವಣೆ ಮಾಡಿಕೊಡಲಾಗುವುದು.
73385 80345, 99455 22287

**ಹೊಟೇಲ್ ಕೆಲಸಗಾರರು ಬೇಕಾಗಿದ್ದಾರೆ**
ಡೆಂಟಲ್ ಕಾಲೇಜ್ ಎದುರು, ಕುಕ್ಸ್, ನಾರ್ಥ್ ಇಂಡಿಯನ್, ಚೈನೀಸ್, ತಂದೂರಿ ಕಿಚನ್ ಸಹಾಯಕರು ಬೇಕಾಗಿದ್ದಾರೆ.
7411309214, 7738762485

**TUITIONS**
IGCSE, ICSE, CBSE and State Board from class 5th to 12th MCC 'A' blcok, Davangere.
98444 92888

**ಕೆಲಸಕ್ಕೆ ಬೇಕಾಗಿದ್ದಾರೆ**
ಮಹಿಳಾ ಹಾಸ್ಟೆಲ್‌ನಲ್ಲಿ ಕ್ಲೀನಿಂಗ್ ಕೆಲಸಕ್ಕೆ (House Keeping) ಮಹಿಳೆಯರು ಬೇಕಾಗಿದ್ದಾರೆ.
ಕೆಲಸದ ಸಮಯ 10 ರಿಂದ 5:30
63609 76841

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ. ಗರಿಷ್ಠ ವೇತನ ನೀಡಲಾಗುವುದು.
95385 89555

**ಕುಕ್ ಬೇಕಾಗಿದ್ದಾರೆ ಬೆಂಗಳೂರಿನಲ್ಲಿ**
ವೆಜ್ & ನಾನ್ ವೆಜ್ ಗೊತ್ತಿರುವ 10 ವರ್ಷ ಅನುಭವವಿರುವವರು ಬೇಕಾಗಿದ್ದಾರೆ. ವಯಸ್ಸು 25 ರಿಂದ 35, ಸಂಬಳ 15,000 ಊಟ, ವಸತಿ ಉಚಿತ. ಸಂಪರ್ಕಿಸಿ :
97400 98047

**Contact for school / college furnitures**
ಶಾಲಾ / ಕಾಲೇಜು ಪಿಠೋಪಕರಣಗಳಿಗಾಗಿ ಸಂಪರ್ಕಿಸಿ
94815 40812

**CARS FOR SALE**
KIA Sonet Diesel
Renault Duster
Alto K10 VXI
New Hyundai I20 Petrol
*Daivik Iynahalli*
Contact : 99456 43223

**COMPUTER OPERATOR REQUIRED FOR OFFICE WORK**
Tally prime, MS office, Kannada typing
94496 43555

**ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಹರ್ಷ ಹಾರ್ಡ್‌ವೇರ್ & ಪೇಂಟ್ಸ್
ಅಶೋಕ ಟಾಕೀಸ್ ಎದುರು, ದಾವಣಗೆರೆ.

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್, ಫ್ಯಾನ್ಸಿ ಸ್ಟೋರ್, ಬೇಕರಿ ಟೀಸ್ಟಾಲ್, ಫಾಸ್ಟ್ ಫುಡ್ ಹೋಟೆಲ್, ಗ್ಯಾರೇಜ್, ಮೊಬೈಲ್ ಶಾಪ್, ಎಲೆಕ್ಟ್ರಿಕಲ್ ಶಾಪ್, ಚಿಪ್ಸ್ ಶಾಪ್ ಇತ್ಯಾದಿ ಶಾಪ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀಸಾಯಿ ಎಗ್ ಸೆಂಟರ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ
96860 22969

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್ (Nurse) ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
ಸಿ.ಜಿ. ಆಸ್ಪತ್ರೆ ಹಿಂಭಾಗ
ಪೆವಿಲಿಯನ್ ರಸ್ತೆ, ಪಿಜೆ ಬಡಾವಣೆ, ದಾವಣಗೆರೆ.
98450 35710, 77607 39990

**ಕೆಲಸಕ್ಕೆ ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಯುವಕ-ಯುವತಿಯರಿಗೆ ಒಂದು ಸದಾವಕಾಶ
ವಯೋಮಿತಿ : 20-35 ವರ್ಷ
ವಿದ್ಯಾರ್ಹತೆ : ಎಸ್.ಎಸ್.ಎಲ್.ಸಿ.
ಕೆಲಸದ ವಿವರ : ಚಿಕಿತ್ಸಾ ವಿಭಾಗಕ್ಕೆ ಥೆರಪಿಸ್ಟ್
(45 ದಿನಗಳ ಟ್ರೈನಿಂಗ್ ಉಚಿತವಾಗಿ ಕೊಟ್ಟು, ತದನಂತರ ನಮ್ಮಲ್ಲೆ ಸರ್ಟಿಫಿಕೇಟ್ ಕೊಟ್ಟು ಸಂಬಳ ನೀಡಲಾಗುವುದು)
ಹೆಚ್ಚಿನ ಮಾಹಿತಿಗಾಗಿ
8618642929, 08192-252228

**ಫ್ಲಾಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ಸಿಟಿ ಎಸ್.ಎಸ್. ಬಡಾವಣೆ, ಎ ಬ್ಲಾಕ್, ಇಂಡೋರ್ ಸ್ಟೇಡಿಯಂ ಹತ್ತಿರ ನಿರ್ಮಿಸಿರತಕ್ಕ ಅಪಾರ್ಟ್‌ಮೆಂಟ್‌ನಲ್ಲಿ 2 BHK, ಗ್ರಾನೈಟ್ ಫ್ಲೋರಿಂಗ್, ವಾರ್ಡ್‌ರೂಬ್, ದೇವರಮನೆ, ನೀರಿನ ಸೌಕರ್ಯ, ಲಿಫ್ಟ್ ಸೌಕರ್ಯ, ಕಾರ್ ಪಾರ್ಕಿಂಗ್ ಸೌಲಭ್ಯವುಳ್ಳ ಫ್ಲಾಟ್‌ಗಳು ರಿಯಾಯ್ತಿ ದರದಲ್ಲಿ ಮಾರಾಟಕ್ಕಿವೆ
98440 65710

**LOANS/ಸಾಲ**
ಉಚಿತವಾಗಿ Legal & Valuvation ಮಾಡಿಸಿ ಮನೆ ಕಟ್ಟಲು/ ಖರೀದಿಸಲು/ ಸೈಟ್ / ಖರೀದಿಸಲು Loan ಮಾಡಿಕೊಡಲಾಗುವುದು
96118 66449
* Conditions apply

**2 BHK ಮನೆ ಬಾಡಿಗೆಗಿದೆ**
2BHK ದಕ್ಷಿಣ ಮುಖ, 2ನೇ ಮಹಡಿ ಸುಸಜ್ಜಿತ ಮನೆ ಬೋರ್ /ಕಾರ್ಪೊರೇಷನ್ ನೀರು, ಸೋಲಾರ್ ಸೌಲಭ್ಯವಿದೆ. ನಿಜಲಿಂಗಪ್ಪ ಬಡಾವಣೆ, ಎ ಬ್ಲಾಕ್, 5ನೇ ಮೇನ್, ಸಹನಾ ರವಿ ಇಂಟರ್ ನ್ಯಾಷನಲ್ ಸ್ಕೂಲ್ ಹತ್ತಿರ, ದಾವಣಗೆರೆ.
92422 45311

ರಕ್ತದಾನ - ಶ್ರೇಷ್ಠದಾನ

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಕೆಲಸಗಾರರು, ಡೆಂಟಲ್ ಕಾಲೇಜ್ ಎದುರು, ಸಪ್ಲೈಯರ್ಸ್, ಟೇಬಲ್ ಕ್ಲೀನರ್ಸ್, ಪಾತ್ರೆ ತೊಳೆಯಲು ಹೆಂಗಸರು ಬೇಕಾಗಿದ್ದಾರೆ.
7411309214, 7738762485

**ಬೇಕಾಗಿದ್ದಾರೆ**
ನಮ್ಮ ಕಾಫೀ ಶಾಪ್‌ನಲ್ಲಿ ಮತ್ತು ಕಾಫೀ ಕೌಂಟರ್‌ಗಳಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತಿವುಳ್ಳವರು ತಮ್ಮ ವಿವರಗಳೊಂದಿಗೆ ಸಂಪರ್ಕಿಸಿ :
ANS ಫುಡ್ಸ್
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎದುರು, ಮಂಡಿಪೇಟೆ, ದಾವಣಗೆರೆ-1.
86604 12149

**ಹೊಸ 2 BHK ಮನೆ ಸಿಂಗಲ್ ರೂಂ ಬಾಡಿಗೆಗಿದೆ**
2 BHK 1ನೇ ಫ್ಲೋರ್, ಹನಗವಾಡಿ ಬಡಾವಣೆ, ಹೊಸ ಕುಂದವಾಡ ಸರ್ವೀಸ್ ರಸ್ತೆ, ಸ್ವಾದ ಕೆಫೆ ಹಿಂಭಾಗ, ದಾವಣಗೆರೆ.
99011 20921

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಸೈಟ್ ಮಾರಾಟಕ್ಕಿದೆ**
ಉತ್ತರಾಭಿಮುಖ 29.5 x70=2065 feet ಎಸ್.ಎಸ್. ಲೇಔಟ್, ಬಿ ಬ್ಲಾಕ್, ಇಂಡೋರ್ ಸ್ಟೇಡಿಯಂ ಹಿಂಭಾಗ
74119 19668

**ಅಡಿಕೆ ತೋಟ ಮಾರಾಟಕ್ಕಿವೆ**
NH-4 ರಸ್ತೆಯಲ್ಲಿ 5 1/2 ವರ್ಷದ ಗಿಡ, 6 1/2 ಎಕರೆ ಅಡಿಕೆ ತೋಟ ಮಾರಾಟಕ್ಕಿದೆ. 200 ಮೀ ಒಳಗೆ ಇವೆ. 2 ಎಕರೆ ಗದ್ದೆ ಇದೆ, ಕಲ್ಲು ಬಂಡೆ ಹತ್ತಿರ. ಬೇರೆ ಕಡೆ ಜಮೀನು ಬೇಕಾಗಿದ್ದಲ್ಲಿ ವಿಚಾರಿಸಿ.
ಏಜೆಂಟರು
81231 15137

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಓಂ ವರಸಿದ್ಧಿ ವಿನಾಯಕ**
SS ದಾವಣಗೆರೆ ಶೈಲಿಯ ಕ್ಲೌಡ್ ಕಿಚನ್ ಮನೆಯಿಂದಲೇ ನಾನ್‌ವೆಜ್ ಊಟ ತಯಾರಿಸಿ ಕೊಡುತ್ತೇವೆ ಮತ್ತು ಮನೆಯಲ್ಲಿಯೇ ತಯಾರಿಸಿದ ಮಸಾಲ ಪೌಡರ್‌ಗಳು ಸಿಗುತ್ತವೆ.
91102 74329

**ಬಾಡಿಗೆಗೆ ಇದೆ**
ಪುಷ್ಪಾಂಜಲಿ ಟಾಕೀಸ್ ರೋಡ್ ರೈಲ್ವೆ ಟ್ರ್ಯಾಕ್ ಪಕ್ಕ ಉತ್ತರಾಭಿಮುಖವಾಗಿ 16x36 3 ಮಳಿಗೆ. 1 ಮಳಿಗೆ 32x36 ಪೂರ್ವಾಭಿಮುಖ L ಶೇಪ್ ಕಾರ್ನರ್, ಲೋಡಿಂಗ್ ಮತ್ತು ಅನ್‌ಲೋಡಿಂಗ್ ಪಾರ್ಕಿಂಗ್ ಇರುತ್ತದೆ. ಪ್ಲೈವುಡ್ ಶಾಪ್, ಹಗ್ಗದ ಅಂಗಡಿ, ಬಳೆ ಶಾಪ್, ಪೈಪ್ ಅಂಗಡಿ, ಫಸ್ಟ್ ಫ್ಲೋರ್ 80x36 ಅಳತೆಯ ಲಿಫ್ಟ್ ವ್ಯವಸ್ಥೆ ಇರುವ, ಬಾತ್ ರೂಂ ವ್ಯವಸ್ಥೆ ಇರುತ್ತದೆ. ಹಾಸ್ಪಿಟಲ್ ಮತ್ತು ಸ್ಕೂಲ್ ಯೋಗ್ಯವಾಗಿದೆ.
99451 59582
99451 99770

**ಬೇಕಾಗಿದ್ದಾರೆ**
ಹೊಸದಾಗಿ ಪ್ರಾರಂಭವಾಗುತ್ತಿರುವ ಹೋಂ ಅಪ್ಲೈಯನ್ಸಸ್ ಶಾಪ್‌ಗೆ ಕೆಲಸ ಮಾಡಲು
* ಸೇಲ್ಸ್ ಗರ್ಲ್ಸ್ & ಬಾಯ್ಸ್
* ಅಕೌಂಟ್ಸ್ * ಟೆಲಿಕಾಲರ್ಸ್
ಅನುಭವವುಳ್ಳವರಿಗೆ ಪ್ರಥಮ ಆದ್ಯತೆ
ಸ್ಥಳ : ಹರಿಹರ.
77603 10603
99648 75861

**CHANGE OF NAME**
I RISHIKA RAAJU VITHAL RAO D/O RAAJU VITHAL RAO, resident @ #2007-5-6, 2nd Mani, 2nd Cross, Siddaveerappa Extension, Davangere - 04. That in my passport my name is mentioned as RISHIKA. I have changed my name as RISHIKA RAAJU VITHAL RAO vide affidavit dated 01.01.2025 sworn before Notary Davangere. Henceforth all my transations & dealings will be in my new name RISHIKA RAAJU VITHAL RAO.

**CHANGE OF NAME**
I RUTHVI RAAJU VITHAL RAO D/O RAAJU VITHAL RAO, resident @ #2007-5-6, 2nd Mani, 2nd Cross, Siddaveerappa Extension, Davangere - 04. That in my passport my name is mentioned as RUTHVII. I have changed my name as RUTHVI RAAJU VITHAL RAO vide affidavit dated 01.01.2025 sworn before Notary Davangere. Henceforth all my transations & dealings will be in my new name RUTHVI RAAJU VITHAL RAO.

**Avoid Mosquiteos**
Mosquito Nets for doors & windows
**Sri Gowri Enterprises**
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಮಾಂತ್ರಿಕ ಮೋಡಿ ಬೆಟ್ಟಪ್ಪ ನಂ. 1 ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ, ಲೈಂಗಿಕ, ದಾಂಪತ್ಯ ಸಮಸ್ಯೆ, ನೀವು ಇಷ್ಟ ಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲಿ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ :
ಕೊಳ್ಳೆಗಾಲದಿಂದ ನೇರ ಪರಿಹಾರ
89716 99826

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



## ದಾವಣಗೆರೆ ಹಳೆ ಊರಿನ ಚಳಿಗಾಲದ ಸ್ವಾರಸ್ಯಗಳು...

# ಬೇಗನೆ ಎದ್ದ - ಪೊಂಗಲ್‌ಗಾಗಿ ಸಿದ್ಧ !!'

**ಹೆಚ್.ಬಿ. ಮಂಜುನಾಥ್**
ಹಿರಿಯ ಪತ್ರಕರ್ತ, ದಾವಣಗೆರೆ.

ಸುಮಾರು 1965 ರ ಇಸ್ವಿ ಇರಬಹುದು. ಡಿಸೆಂಬರ್ ತಿಂಗಳ ಚಳಿಗಾಲದ ಬೆಳಗಿನ ಜಾವ, ಇಜಾರ್ ದಾರ್ ಗಲ್ಲಿ ಮಾಳಿಗೆ ಮನೆಯವರ ಕಟ್ಟೆಗೆ ಡಿಪೋ ಸಮೀಪದ ರಾಧಮ್ಮ ಅಂಗಳಕ್ಕೆ ನೀರು ಹಾಕುತ್ತಿದ್ದವರು ರತ್ನಮಾಲ, ಗೀತಾ, ದ್ವಾರಕನಾಥ, ನಾಗರಾಜ, ಅನಿತಾ ಮುಂತಾದ ಚಿಕ್ಕ ಮಕ್ಕಳು ಕೈಯಲ್ಲಿ ಲೋಟ ಬಟ್ಟಲು ಹಿಡಿದುಕೊಂಡು ಹೋಗುತ್ತಿರುವುದನ್ನು ನೋಡಿ 'ಯಾವ ಕಡೆ ಹೋಗಕತ್ತೀರಿ?' ಎಂದು ಕೇಳಿದರು. 'ಅಮ್ಮನೋರ ದೇವಸ್ಥಾನಕ್ಕೆ ಹೋಗ್ತಿದೀವಿ, ಪೊಂಗಲ್ ಪ್ರಸಾದ ಕೊಡತಾರೆ' ಎಂದರು ಮಕ್ಕಳು.

ಅಮ್ಮನವರ ದೇವಸ್ಥಾನ ಎಂದರೆ ಶ್ರೀ ಕನ್ನಿಕಾಪರಮೇಶ್ವರಿ ದೇವಸ್ಥಾನ. ದಾವಣಗೆರೆ ಹಳೆ ಊರಿನ ದೊಡ್ಡಪೇಟೆಯಿಂದ ಶ್ರೀ ದುರ್ಗಾಂಬಿಕಾ ದೇವಸ್ಥಾನದ ಕಡೆ ಹೋಗುವ ಎಸ್.ಕೆ.ಪಿ ರಸ್ತೆ ಅಂದರೆ ಶ್ರೀ ಕನ್ನಿಕಾ ಪರಮೇಶ್ವರೀ ರಸ್ತೆ. ಇಲ್ಲಿ ಬಹುತೇಕ ವೈಶ್ಯರೇ ವಾಸವಾಗಿದ್ದರಿಂದ ಬಹಳ ಹಿಂದೆ ಈ ರಸ್ತೆಗೆ 'ಕೋಮಟರ ಗಲ್ಲಿ' ಅಂದರೆ ವೈಶ್ಯರ ಗಲ್ಲಿ ಎಂದು ಕರೆಯಲಾಗುತ್ತಿತ್ತು. ಇಲ್ಲಿ ಬಹುಶಃ ಸುಮಾರು 1916 ವೇಳೆಗೆ ಶ್ರೀ ಕನ್ನಿಕಾಪರಮೇಶ್ವರೀ ದೇವಸ್ಥಾನ ಸ್ಥಾಪಿಸಿದ್ದಿರಬಹುದು. ಕಲ್ಲಿನ ಮಹಾದ್ವಾರ, ಅದರ ಹಿಂದೆ ಅಮ್ಮನವರ ಗರ್ಭಗುಡಿ, ಪಕ್ಕದಲ್ಲಿ ಶ್ರೀ ನಗರೇಶ್ವರ ದೇವರು ಮತ್ತೊಂದು ಪಕ್ಕದಲ್ಲಿ ಶ್ರೀದೇವಿ ಭೂದೇವಿ ಸಹಿತ ಶ್ರೀ ಜನಾರ್ದನ ಸ್ವಾಮಿ, ನಗರೇಶ್ವರ ದೇವರ ಮುಂದೆ ನವಗ್ರಹಗಳು.

ದೇವಸ್ಥಾನದ ಹಿಂಭಾಗದಲ್ಲಿ ಚನ್ನಗಿರಿ ಕೃಷ್ಣಪ್ಪನವರ ಮನೆ. ಮೊದಲು ಈ ದೇವಸ್ಥಾನದ ಅರ್ಚಕರಾಗಿ ಹರಿಹರ ಪುರೋಹಿತ ಸುಬ್ರಹ್ಮಣ್ಯ ಶಾಸ್ತ್ರೀ ಯವರನ್ನು ಆಗಿನ ಕಾಸಲ್ ಕಾಫಿ ಕಂಪನಿಯ ಸೂರ್ಯನಾರಾಯಣ ಶೆಟ್ಟರು ಅರ್ಚಕರಾಗಿ ನೇಮಿಸಿದ್ದಿರಬೇಕು. ಆಗ ಚನ್ನಗಿರಿ ರಂಗಪ್ಪನವರ ತಂದೆಯವರಾದ ವಿರೂಪಾಕ್ಷಪ್ಪನವರು, ಕಾಸಲ ಶ್ರೀರಂಗಪ್ಪ ಶೆಟ್ಟರು, ಕಾಸಲ ಕೃಷ್ಣಪ್ಪನವರು, ಚನ್ನಗಿರಿ ಗುಂಡಪ್ಪ ಶೆಟ್ಟರು, ಮಾಲೂರು ನಂದಿಬಸಪ್ಪ ಶೆಟ್ಟರು, ಚನ್ನಗಿರಿ ವೆಂಕಟಪ್ಪನವರು, ಚನ್ನಗಿರಿ ಕೃಷ್ಣಪ್ಪನವರು, ಚನ್ನಗಿರಿ ಲಕ್ಷ್ಮಿ ಪತಿಯಪ್ಪ ಶೆಟ್ಟರು, ಅಮರಾವತಿ ಹಾಲಪ್ಪನವರು, ಮಾಳ ಶೆಟ್ಟರ ಮೈಲಾರಪ್ಪನವರು, ಶಾಮನೂರು ಶ್ರೀನಿವಾಸ ಶೆಟ್ರು, ಕಾಸಲ ಶ್ರೀನಿವಾಸ ಶೆಟ್ರು ಮುಂತಾದವರು ಕಮಿಟಿಯ ಮುಖ್ಯಸ್ಥರಾಗಿದ್ದರು ಎಂದು ಕೀರ್ತಿ ಶೇಷ ವಿಶ್ವನಾಥ ಶಾಸ್ತ್ರೀಗಳು (ಸುಬ್ರಹ್ಮಣ್ಯ ಶಾಸ್ತ್ರಿಗಳ ಮೊಮ್ಮಗ) ಹೇಳುತ್ತಿದ್ದರು.

ಅರ್ಚಕ ಸುಬ್ರಹ್ಮಣ್ಯ ಶಾಸ್ತ್ರಿಗಳನ್ನು ಎಲ್ಲರೂ ಸುಬ್ಬಣ್ಣ ಭಟ್ಟರು ಎಂದೇ ಕರೆಯುತ್ತಿದ್ದರು. ಅವರ ಮಗ ವೇದಮೂರ್ತಿ ಹೆಚ್.ಪಿ. ಶಂಕರ ಭಟ್ಟರು ಅರ್ಚಕ ವೃತ್ತಿಯನ್ನು ಮುಂದುವರೆಸಿದ್ದರು. ಇವರು ಮುಂದೆ ದಾವಣಗೆರೆಯ 'ರಾಜಪುರೋಹಿತ'ರೆಂದೇ ಖ್ಯಾತರಾಗಿದ್ದರು.

ಧನುರ್ಮಾಸ ಎಂದರೆ ಸೂರ್ಯನು ಧನು ರಾಶಿಯನ್ನು ಪ್ರವೇಶಿಸಿದ ಮಾಸ. ಇದು ಡಿಸೆಂಬರ್ 16 ರಿಂದ ಜನವರಿ 15 ರವರೆಗಿನ ಚಳಿಗಾಲದ ತಿಂಗಳು. ಈ ಧನುರ್ಮಾಸದಲ್ಲಿ ದೇವಸ್ಥಾನಗಳಲ್ಲಿ ಸೂರ್ಯೋದಯಕ್ಕೂ ಮುಂಚಿತವಾಗಿ ಬೆಳಗಿನ ಜಾವವೇ ಪೂಜೆ. ಇದೇ ರೀತಿ ಶ್ರೀ ಕನ್ನಿಕಾ ಪರಮೇಶ್ವರೀ ದೇವಸ್ಥಾನದಲ್ಲೂ ಧನುರ್ಮಾಸದ ಬೆಳಗಿನ ಜಾವ ಪೂಜೆಯ ನೈವೇದ್ಯಕ್ಕಾಗಿ ಸಿಹಿ ಪೊಂಗಲ್ ಮಾಡುತ್ತಿದ್ದರು. ಶಂಕರ ಭಟ್ಟರ ಮಕ್ಕಳಾದ ವಿಶ್ವನಾಥ ಶಾಸ್ತ್ರಿ ಇವರು ಶ್ರೀ ಕನ್ನಿಕಾ ಪರಮೇಶ್ವರಿ ಕೋ ಆಪರೇಟಿವ್ ಬ್ಯಾಂಕಿನ ವ್ಯವಸ್ಥಾಪಕರೂ ಆಗಿದ್ದರು. ಇವರ ತಮ್ಮ ಭೀಮರಾಜ್ ಶಾಸ್ತ್ರೀಯ ಸಂಗೀತಾದಿಗಳಲ್ಲಿ ತುಂಬಾ ಆಸಕ್ತಿ ಉಳ್ಳವರು. ಇವರ ತಮ್ಮ ಬಾಲಚಂದ್ರ ಶಾಸ್ತ್ರೀ ದಾವಣಗೆರೆ ಕಾಟನ್ ಮಿಲ್‌ನ ಉದ್ಯೋಗಿಯಾಗಿದ್ದರು. ಈ ಸಹೋದರರು ಅದರಲ್ಲೂ ಮುಖ್ಯವಾಗಿ ವಿಶ್ವನಾಥ ಶಾಸ್ತ್ರೀಗಳು ಬೆಳಗಿನ ಜಾವವೇ ಸುಮಾರು ಎರಡು ಸೇರು ಅಕ್ಕಿ ಅದಕ್ಕೆ ಸಮ ಪ್ರಮಾಣದ ಹೆಸರು ಬೇಳೆ, ಬೆಲ್ಲ, ತುಪ್ಪ ಹಾಕಿ ಸಿಹಿ ಪೊಂಗಲ್ ಅನ್ನು ದೇವರ ನೈವೇದ್ಯಕ್ಕಾಗಿ ಮಡಿಯಲ್ಲಿ ಸಿದ್ಧಪಡಿಸುತ್ತಿದ್ದರು.

ಬೆಳಗಿನ ಜಾವ ನೈವೇದ್ಯ ಮಹಾಮಂಗಳಾರತಿಯ ನಂತರ ಈ ಪೊಂಗಲ್ ಪ್ರಸಾದವನ್ನು ಮುಖ್ಯವಾಗಿ ಮಕ್ಕಳಿಗೆ ವಿತರಿಸಲಾಗುತ್ತಿತ್ತು. ಘಮಘಮಿಸುವ ಪರಿಮಳದ ಬಿಸಿ - ಬಿಸಿ ಸಿಹಿ ಪೊಂಗಲ್ ತುಂಬಾ ಸವಿಯಾಗಿರುತ್ತಿತ್ತು. ಪೊಂಗಲ್ ಪ್ರಸಾದ ಪಡೆಯಲು ಹೊರಟ ಮಕ್ಕಳನ್ನು ನೋಡಿದ ರಾಧಮ್ಮ ಹೇಳಿದರು 'ನಮ್ ಮಗ ಸಿದ್ದೂನೂ (ಸಿದ್ದ ಎಂದರೆ ಸಿದ್ದಾರ್ಥ) ಕಳಿಸ್ತೀನಿ, ಅವನನ್ನೂ ಕರೆದುಕೊಂಡು ಹೋಗ್ರಿ' ಎಂದು ಒಳ ಹೋಗಿ ಮಲಗಿದ್ದ ಸಿದ್ದನನ್ನು ಬಹಳ ಪರಿಶ್ರಮ ಪಟ್ಟು ಏಳಿಸಿ, ಮುಖ ತೊಳೆಸಿ ಕಳಿಸಿದರು. ಏಕೆಂದರೆ ಸಿದ್ದ ನಿತ್ಯವೂ ಸೂರ್ಯ ಮೂಡಿ ಎಷ್ಟು ಹೊತ್ತು ಆದರೂ ಏಳಲು ಕೇಳುತ್ತಿರಲಿಲ್ಲ. ಅಂತೂ ಅವತ್ತು ತಾಯಿಯ ಒತ್ತಾಯಕ್ಕೆ ಎದ್ದು ಹೋಗಿ ಸಿದ್ದು ಪೊಂಗಲ್ ಪ್ರಸಾದ ತೆಗೆದುಕೊಂಡು ಬಂದು ತಿಂದ, ತಿಂದವನಿಗೆ ಅದರ ರುಚಿ ಹತ್ತಿತಂತೆ !, ಅಂದು ರಾತ್ರಿ ಮಲಗುವಾಗ ಸಿದ್ದ ತಾಯಿಗೆ 'ನಾಳೆ ಬೆಳಿಗ್ಗೆನೂ ಜಲ್ದಿ ಎಬ್ರಿಸು, ಪ್ರಸಾದ ತಗೊಳಕ್ಕೆ ಹೋಗ್ತೀನಿ' ಎಂದು ತಾನಾಗೇ ಹೇಳಿದನಂತೆ. ಹೀಗೆ ಧನುರ್ಮಾಸ ಮುಗಿಯುವವರೆಗೂ ಪ್ರಸಾದದ ಆಸೆಗಾಗಿ ಬೆಳಗಿನ ಜಾವ ಬೇಗನೇ ಏಳುವುದನ್ನು ಅಭ್ಯಾಸ ಮಾಡಿಕೊಂಡ ಸಿದ್ದ ಅರ್ಥಾತ್ ಸಿದ್ಧಾರ್ಥ ಧನುರ್ಮಾಸ ಕಳೆದ ಮೇಲೂ ಬೆಳಿಗ್ಗೆ ಬೇಗ ಏಳುವುದನ್ನು ರೂಢಿ ಮಾಡಿಕೊಂಡನಂತೆ !!. 'ನಮ್ಮ ಹುಡುಗನ್ನ ಬೆಳಗಾ ಮುಂಜಾನೆ ಜಲ್ದಿ ಎಬ್ಬರಸಕ್ಕೆ ಏನೆಲ್ಲಾ ಪ್ರಯತ್ನ ಮಾಡಿದ್ರೂ ಆಗತಿದ್ದಿಲ್ಲ. ಅಮ್ಮನೋರ ದೇವಸ್ಥಾನದ ಪೊಂಗಲ್ಲು ಆ ಕೆಲಸ ಮಾಡ್ಬಿಡ್ತು!!' ಅಂತ ರಾಧಮ್ಮ ಹಿಡಿಯಲಾರದ ಸಂತೋಷದಿಂದ ಹೇಳುತ್ತಿದ್ದರು.





# ಪುಟ್ಟಣ್ಣ ಕಣಗಲ್ ನಿರೀಕ್ಷೆಯನ್ನೂ ಮೀರಿ ಬೆಳೆದ ಸಾಹಸಸಿಂಹ ಡಾ. ವಿಷ್ಣುವರ್ಧನ್

ದಾವಣಗೆರೆ, ಜ.1 - ಪುಟ್ಟಣ್ಣ ಕಣಗಾಲ್ ಅವರು ನಾಗರ ಹಾವು ಚಿತ್ರದ ಮೂಲಕ ಡಾ. ವಿಷ್ಣುವರ್ಧನ್ ಅವರನ್ನು ಅಂದು ಕನ್ನಡ ಜನತೆಗೆ ಪರಿಚಯಿಸಿದರು. ತನ್ಮೂಲಕ ಒಬ್ಬ ಪ್ರಬುದ್ಧ ಕಲಾವಿದನನ್ನು ಸೃಷ್ಟಿಸಿದ ಕೀರ್ತಿ ಪುಟ್ಟಣ್ಣ ಕಣಗಾಲ್ ಅವರಿಗೆ ಸಲ್ಲತಕ್ಕದ್ದು ಎಂದು ಕರ್ನಾಟಕ ಜನಮನ ವೇದಿಕೆಯ ಸಂಸ್ಥಾಪಕ ಅಧ್ಯಕ್ಷ ನಾಗೇಂದ್ರ ಬಂಡೀಕರ್ ತಿಳಿಸಿದರು.

ಡಾ. ವಿಷ್ಣುವರ್ಧನ್ ಅವರು ನಿಧನರಾಗಿ ನಿನ್ನೆಗೆ 14 ವರ್ಷಗಳು ತುಂಬಿ 15ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದ ಸಂದರ್ಭದಲ್ಲಿ ನಮ್ಮ ಜೈ ಕರುನಾಡ ವೇದಿಕೆ ವತಿಯಿಂದ ವಿಷ್ಣುವರ್ಧನ್ ಅವರ ಪುಣ್ಯಸ್ಮರಣೆಯನ್ನು ಪುಟ್ಟರಾಜ ಗವಾಯಿಗಳವರ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ವಿಷ್ಣುವರ್ಧನ್ ಅವರು ಅತ್ಯಂತ ಜನಪ್ರಿಯ ಕಾದಂಬರಿಗಳ ಚಿತ್ರಗಳನ್ನು ಮಾಡುವುದರ ಮೂಲಕ ಕನ್ನಡ ಸಾಹಿತ್ಯಕ್ಕೆ ಅಪಾರ ಕೊಡುಗೆಯನ್ನು ನೀಡಿರುವುದು ಮಾತ್ರವಲ್ಲದೇ ಅನೇಕ ಕೌಟುಂಬಿಕ ಚಿತ್ರಗಳನ್ನು ನೀಡಿ ಸಮಾಜಕ್ಕೆ ಉತ್ತಮ ಸಂದೇಶವನ್ನು ನೀಡಿದ ಮಹಾನ್ ನಟರೆನಿಸಿದ್ದಾರೆ ಎಂದು ಬಂಡೀಕರ್ ತಿಳಿಸಿದರು.

ಅನೇಕ ಕನ್ನಡಪರ ಸಂಘಟನೆಗಳು ನಾಡು, ನುಡಿಗಾಗಿ ಇಂದಿಗೂ ಶ್ರಮಿಸುತ್ತಿರುವುದನ್ನು ನಾವು ಕಾಣಬಹುದಾಗಿದೆ ಎಂದು ಮಹಾನಗರ ಪಾಲಿಕೆಯ ಉಪ ಮಹಾಪೌರರಾದ ಸೋಗಿ ಶಾಂತಕುಮಾರ್ ಅವರು ತಿಳಿಸುತ್ತಾ, ಅತ್ಯಂತ ಸರಳ ರೀತಿಯಲ್ಲಿ ಕಾರ್ಯಕ್ರಮ ಸಂಯೋಜನೆ ಮಾಡುವುದರ ಮೂಲಕ ಸಾಧಕರನ್ನೂ ಸನ್ಮಾನಿಸಿ, ಸಮುದಾಯಕ್ಕೆ ಉತ್ತಮ ಸಂದೇಶ ನೀಡಿದ ನಮ್ಮ ಜೈ ಕರುನಾಡ ವೇದಿಕೆಯ ಪ್ರಯತ್ನ ಆದರ್ಶಪ್ರಾಯವಾಗಿದೆ ಎಂದು ಶ್ಲಾಘಿಸಿದರು

ಸಮಾರಂಭದಲ್ಲಿ ಶೈಕ್ಷಣಿಕವಾಗಿ ಪ್ರಗತಿ ಸಾಧಿಸಿದ ಸಿಮ್ರಾನ್, ನಯನ (ಪಿಯುಸಿ), ಪತ್ರಕರ್ತ ಜಿ.ಎಸ್. ವಸಂತ ಕುಮಾರ್, ಕ್ರೈಮ್ ಪೊಲೀಸ್ ಶಂಕರ್ ಆರ್. ಜಾಧವ್ ಮತ್ತು ಛಾಯಾಗ್ರಹಣ ಹಾಗೂ ವಿಡಿಯೋ ಸಂಕಲನಕಾರ ಎಸ್. ರಂಗಸ್ವಾಮಿ ಅವರುಗಳನ್ನು ಸನ್ಮಾನಿಸಲಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಟಿ. ಮಂಜುನಾಥಗೌಡ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ ಮಾತನಾಡಿ, ಇಂತಹ ಸ್ಮರಣೋತ್ಸವದ ಸಮಾರಂಭದಲ್ಲಿ ರಕ್ತದಾನ ಮಾಡುವುದರ ಮೂಲಕ ರಕ್ತದಾನ ಶಿಬಿರವನ್ನು ಏರ್ಪಡಿಸಿರುವುದು ಸ್ತುತ್ಯಾರ್ಹ ಸಂಗತಿ ಎಂದರು. ಎಲ್ಲಾ ಕನ್ನಡಪರ ಸಂಘಟನೆಗಳು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಬೆಳೆಸುವ ಮೂಲಕ ಸಮಾಜಮುಖಿಯ ಸರಳತೆಯನ್ನು ರೂಢಿಸಿಕೊಳ್ಳಬೇಕೆಂದರು.

ಮುಖ್ಯಅತಿಥಿಗಳಾಗಿ ಅಖಂಡ ಕರ್ನಾಟಕ ರಕ್ಷಣಾ ವೇದಿಕೆಯ ಸಂಸ್ಥಾಪಕ ಅಧ್ಯಕ್ಷ ಎಸ್.ಜಿ. ಸೋಮಶೇಖರ್, ರಾಜ್ಯ ಪ್ರಧಾನ ಕಾರ್ಯದರ್ಶಿ ಕೃಷ್ಣಮೂರ್ತಿ, ಮೈಸೂರಿನ ಜಿಲ್ಲಾ ಉಪಾಧ್ಯಕ್ಷ ಶರೀಫ್ ಸಾಬ್, ಮೈಸೂರಿನ ಜಿಲ್ಲಾ ಸಂಚಾಲಕ ಬಸವರಾಜ್, ಬಳ್ಳಾರಿ ಅಧ್ಯಕ್ಷ ಚಂದ್ರಪ್ಪ, ದಾವಣಗೆರೆ ಜಿಲ್ಲಾಧ್ಯಕ್ಷ ಲಿಂಗಪ್ಪ, ಯುವಘಟಕದ ಅಧ್ಯಕ್ಷ ಸಾಯಿ, ರಾಜ್ಯ ಯುವಘಟಕದ ಅಧ್ಯಕ್ಷ ಸಾಗರ್ ಸೇರಿದಂತೆ ಜಯಂತ್, ಅರುಣ್‌ಕುಮಾರ್, ಲೋಕೇಶ್, ವಿದ್ಯಾರ್ಥಿ ಘಟಕದ ಮಹಿಳಾ ಅಧ್ಯಕ್ಷರಾದ ಮಮತಾ, ನೇಹ, ಛಾಯಾಗ್ರಾಹಕ ವಿಜಯ್ ಕುಮಾರ್ ಜೈನ್, ವಿದ್ಯಾರ್ಥಿ ಘಟಕದ ಅಧ್ಯಕ್ಷರಾದ ಕೌಶಿಕ್‌ಗೌಡ, ತಿಪ್ಪೇಶ್, ಜಾಕೀರ್‌ಸಾಬ್, ಸೂರಿ ಸೇರಿದಂತೆ ಇನ್ನು ಮುಂತಾದವರು ಪಾಲ್ಗೊಂಡಿದ್ದರು.

## ಪರಶುರಾಮ್ ಅವರಿಗೆ ಪ್ರಶಸ್ತಿ ಪ್ರದಾನ



ದಾವಣಗೆರೆ, ಜ. 1- ಪತಂಜಲಿ ಕಾಲೇಜ್ ಆಫ್ ಯೋಗ ಅಂಡ್ ರಿಸರ್ಚ್ ಸೆಂಟರ್ (ತಮಿಳುನಾಡು), ನ್ಯಾಷನಲ್ ಯೋಗ ಅಸೋಸಿಯೇಷನ್ ಆಫ್ ಇಂಡಿಯಾದ ಆಶ್ರಯದಲ್ಲಿ ಗೋವಾದ ಫಿಟ್ನೆಸ್ ಸ್ಟುಡಿಯೋ ಓಪನ್ ಪಾರ್ಕ್‌ನಲ್ಲಿ ಕಳೆದ ವಾರ ನಡೆದ ಆಲ್ ಇಂಡಿಯಾ ಯೋಗಾಸನ ಚಾಂಪಿಯನ್ ಶಿಪ್ ಸಮಾರಂಭದಲ್ಲಿ ಎಸ್ಎವಿಎಸ್ಸೆಸ್ ಯೋಗ ಕೇಂದ್ರದ ಸಂಸ್ಥಾಪಕ, ಯೋಗಾಚಾರ್ಯ ಎನ್. ಪರಶುರಾಮ್ ಅವರಿಗೆ 'ಯುವಶ್ರೀ ಕಲಾಭೂಷಣ' ಪ್ರಶಸ್ತಿ ಪ್ರದಾನ ಮಾಡಲಾಯಿತು.

## ಶೇ.98ರಷ್ಟು ನೋಟು ವಾಪಸ್: ಆರ್‌ಬಿಐ




ಮುಂಬೈ, ಜ. 1 - ರೂ. 2 ಸಾವಿರ ಮುಖಬೆಲೆಯ ಶೇ 98.12ರಷ್ಟು ನೋಟುಗಳು ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿದ್ದು, ಜನರ ಬಳಿ ಇನ್ನೂ ರೂ.6,691 ಕೋಟಿ ಮೌಲ್ಯದ ನೋಟುಗಳು ಉಳಿದಿವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಬುಧವಾರ ತಿಳಿಸಿದೆ.

ರೂ.2 ಸಾವಿರ ಮುಖಬೆಲೆಯ ಒಟ್ಟು ರೂ.3.56 ಲಕ್ಷ ಕೋಟಿ ಮೌಲ್ಯದ ನೋಟುಗಳನ್ನು ಚಲಾವಣೆಯಿಂದ ಹಿಂಪಡೆಯುವುದಾಗಿ 2023ರ ಮೇ 19ರಂದು ಆರ್‌ಬಿಐ ಘೋಷಿಸಿತ್ತು.

ಬ್ಯಾಂಕ್‌ಗಳಲ್ಲಿ ಠೇವಣಿ ಇಡುವ ಹಾಗೂ ಬೇರೆ ಮುಖಬೆಲೆಯ ನೋಟುಗಳೊಂದಿಗೆ ಬದಲಾಯಿಸಿಕೊಳ್ಳುವುದಕ್ಕೆ ಬೆಂಗಳೂರು ಸೇರಿ ಆರ್‌ಬಿಐನ 19 ಪ್ರಾದೇಶಿಕ ಕಚೇರಿಗಳಲ್ಲಿ ಅವಕಾಶ ಕಲ್ಪಿಸಲಾಗಿದೆ.

## ನಗರದಲ್ಲಿ ಇಂದು ಗುರು ನಮನ



ಭಾರತ ವಿಕಾಸ ಪರಿಷದ್ ಗೌತಮ ಶಾಖೆ ವತಿಯಿಂದ ಇಂದು ಸಂಜೆ 7 ಗಂಟೆಗೆ ಚೌಕಿಪೇಟೆಯ ಶ್ರೀ ಗುರು ಬಕ್ಕೇಶ್ವರ ಮಹಾಸ್ವಾಮಿ ದೇವಸ್ಥಾನದ ಆವರಣದಲ್ಲಿ ನಡೆಯುತ್ತಿರುವ ಶ್ರೀ ಶರಣ ಬಸವೇಶ್ವರರ ಪುರಾಣ ಕಾರ್ಯಕ್ರಮ ಸ್ಥಳದಲ್ಲಿ ಜ್ಞಾನಯೋಗಿ ಲಿಂ. ಶ್ರೀ ಸಿದ್ದೇಶ್ವರ ಸ್ವಾಮಿಗಳವರಿಗೆ ದೀಪ ಬೆಳಗಿಸುವ ಮೂಲಕ ದೀಪ ನಮನದೊಂದಿಗೆ ಭಕ್ತಿ ಸಮರ್ಪಣೆಯ 'ಗುರು ನಮನ' ಕಾರ್ಯಕ್ರಮ ನಡೆಯಲಿದೆ ಎಂದು ಭಾರತ ವಿಕಾಸ ಪರಿಷದ್ ಅಧ್ಯಕ್ಷ ಎ.ಎಸ್. ವಿಜಯಕುಮಾರ್ ತಿಳಿಸಿದ್ದಾರೆ.



## ಉಚಿತ ನೇತ್ರ ತಪಾಸಣಾ ಶಿಬಿರ

ದಾವಣಗೆರೆ, ಜ. 1- ಸಮಾಜ ಸೇವಕ, ರಾಜಕಾರಣಿ, ಯುವ ನೇತಾರ, ಉದ್ಯಮಿ ಪ್ರವೀಣ್ ಹುಲ್ಲುಮನೆ ಅವರ ಹುಟ್ಟುಹಬ್ಬದ ಪ್ರಯುಕ್ತ ಸೇಂಟ್ ಜಾನ್ಸ್ ಶಾಲೆಯಲ್ಲಿ ದಾವಣಗೆರೆ ನೇತ್ರಾಲಯದ ಯುನಿಟ್ ಡಾ. ಅಗರ್‌ವಾಲ್ಸ್ ಕಣ್ಣಿನ ಆಸ್ಪತ್ರೆ ಇವರ ಸಹಯೋಗದಲ್ಲಿ ಶಾಲೆಯ ವಿದ್ಯಾರ್ಥಿಗಳಿಗೆ, ಬೋಧಕ, ಬೋಧಕೇತರ ವೃಂದದವರಿಗೆ ಉಚಿತ ನೇತ್ರ ತಪಾಸಣೆ ನಡೆಸಲಾಯಿತು.

ಶಿಬಿರದಲ್ಲಿ ವಿದ್ಯಾಸಂಸ್ಥೆಯ ಅಧ್ಯಕ್ಷ ಹೆಚ್. ಅನಿಲ್‌ಕುಮಾರ್, ಕಾರ್ಯದರ್ಶಿ ಟಿ.ಎಂ. ಉಮಾಪತಯ್ಯ, ಖಜಾಂಚಿ ಪ್ರವೀಣ್ ಹುಲ್ಲುಮನೆ, ಶಾಲೆಯ ಪ್ರಾಂಶುಪಾಲರಾದ ಸೈಯದ್ ಆರೀಫ್ ಆರ್., ಶ್ರೀಮತಿ ಪ್ರೀತಾ ಟಿ. ರೈ, ಉಪ ಪ್ರಾಂಶುಪಾಲರಾದ ಎಸ್.ಎಂ. ನೇತ್ರಾವತಿ, ಹೊನ್ನೂರು ಗೊಲ್ಲರಹಟ್ಟಿ ಶ್ರೀ ವಾಸವಿ ರಾಷ್ಟ್ರೀಯ ವಿದ್ಯಾಲಯದ ಮುಖ್ಯ ಶಿಕ್ಷಕಿ ಶ್ರೀಮತಿ ರಶ್ಮಿ, ಸಂಯೋಜಕರಾದ ಶ್ರೀಮತಿ ಎಸ್.ಎಂ. ರೂಪಾ ಉಪಸ್ಥಿತರಿದ್ದರು.

## ರಾಜ್ಯ ಮಟ್ಟದ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿ



ದಾವಣಗೆರೆ, ಜ. 1 - ನಗರದಲ್ಲಿ ನಡೆದ ರಾಜ್ಯ ಮಟ್ಟದ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ (14 ವರ್ಷದೊಳಗಿನ ಬಾಲಕರ ವಿಭಾಗ) ಬೆಂಗಳೂರು ವಿಭಾಗದ ಹಿರಿಯೂರು ತಾಲ್ಲೂಕು ಧರ್ಮಪುರದ ಸ್ವಾಭಿಮಾನ ವಸತಿ ಶಾಲೆ ದ್ವಿತೀಯ ಸ್ಥಾನ ಪಡೆದುಕೊಂಡಿದೆ. ತಂಡದ ಆಟಗಾರರಿಗೆ ಹಾಗೂ ತರಬೇತುದಾರ ಮುರುಳಿಧರ್ ಅವರನ್ನು ದಾವಣಗೆರೆ ಜಿಲ್ಲಾ ಪತ್ರಿಕಾ ವಿತರಕರ ಸಂಘದ ಅಧ್ಯಕ್ಷರಾದ ಹಿರಿಯ ಕ್ರೀಡಾಪಟು ಟಿ. ಕುಮಾರ ಸ್ವಾಮಿ ಅಭಿನಂದಿಸಿದ್ದಾರೆ.

## ರಾಣೇಬೆನ್ನೂರಿನಲ್ಲಿ ಇಂದು ನ್ಯಾಷನಲ್ ಪಬ್ಲಿಕ್ ಶಾಲೆಯ ವಾರ್ಷಿಕೋತ್ಸವ

ಹುಣಸಿಕಟ್ಟೆ ರಸ್ತೆಯಲ್ಲಿರುವ ನ್ಯಾಷನಲ್ ಪಬ್ಲಿಕ್ ಶಾಲೆಯಲ್ಲಿ 22ನೇ ವರ್ಷದ ಶಾಲಾ ವಾರ್ಷಿಕೋತ್ಸವವು ಶಾಲಾ ಆವರಣದಲ್ಲಿ ಇಂದು ಜರುಗಲಿದೆ. ಶಾಲೆಯ ಅಧ್ಯಕ್ಷರಾದ ಶ್ರೀಮತಿ ವಜ್ರೇಶ್ವರಿ ವಿ. ಲದ್ವಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿಕೊಳ್ಳಲಿದ್ದಾರೆ. ಮುಖ್ಯ ಅತಿಥಿಗಳಾಗಿ ನಿವೃತ್ತ ಉಪನ್ಯಾಸಕರು ಹಾಗೂ ಸಂಪಾದಕರಾದ ರವೀಂದ್ರ ರೇಷ್ಮೆ, ರಾಣೇಬೆನ್ನೂರಿನ ಕ್ಷೇತ್ರ ಶಿಕ್ಷಣಾಧಿಕಾರಿ ಶ್ಯಾಮಸುಂದರ ಅಡಿಗ ರವರು, ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ತುಳಜಪ್ಪ ಲದ್ವಾ ಇತರರು ಉಪಸ್ಥಿತರಿರುವರು. ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕ ವೃಂದದವರು, ಮುದ್ದು ಮಕ್ಕಳು, ಪಾಲಕರು, ಪೋಷಕ ಬಂಧುಗಳು ಹಾಜರಿರುವರು. ಅಂದು ಮಕ್ಕಳಿಂದ ವಿವಿಧ ಬಗೆಯ ಸಾಂಸ್ಕೃತಿಕ ಹಾಗೂ ಮನರಂಜನಾ ಕಾರ್ಯಕ್ರಮಗಳು ಜರುಗುವವು ಎಂದು ಶಾಲೆಯ ಪ್ರಾಂಶುಪಾಲ ಶೈನ್ ಜೋಶ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಸ್‌ಪಿಎಸ್ ನಗರ , ಬಿಐಎನ್ -1 ಲೇಔಟ್ , ಭಾಷಾ ನಗರ , ಚೌಡೇಶ್ವರಿ ನಗರ, ಗಾಂಧಿನಗರ, ಶಿವನಗರ, ಎಸ್ಎಸ್ಎಂ ನಗರ, ಬಿ.ಡಿ. ಲೇಔಟ್, ಬಿಸ್ಮಿಲ್ಲಾ ಲೇಔಟ್, ಹೆಗ್ಡೆ ನಗರ, ಮುಸ್ತಫಾ ನಗರ, ಆಜಾದ್ ನಗರ, ಭಾಷಾ ನಗರ ಮೇನ್ ರೋಡ್, ಎಸ್‌ಜೆಎಂ ನಗರ 1 ನೇ ಕ್ರಾಸ್ ನಿಂದ 16 ನೇ ಕ್ರಾಸ್ ವರೆಗೆ, ಸೇವಾದಳ ಕಾಲೋನಿ, ಹೊಸ ಕ್ಯಾಂಪ್, ಬಿಐಎನ್ ಲೇಔಟ್, ಮಾಗಾನಹಳ್ಳಿ ಲೇಔಟ್ ಸುತ್ತ ಮುತ್ತ, ಕೊಂಡಜ್ಜಿ ರೋಡ್, ವಿಜಯನಗರ ಬಡಾವಣೆ, ಎಸ್‌ಎಂಕೆ ನಗರ 2ನೇ ಹಂತದ ಸುತ್ತ ಮುತ್ತಲ್ಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಪಾಲಿಕೆ ನೌಕರ ವೈ. ಮಲ್ಲೇಶ್‌ಗೆ ವಯೋನಿವೃತ್ತಿ : ಬೀಳ್ಕೊಡುಗೆ



ದಾವಣಗೆರೆ, ಜ. 1- ಮಹಾನಗರ ಪಾಲಿಕೆ ನೌಕರ ಮಲ್ಲೇಶ್ ವೈ. ಅವರು ನಿನ್ನೆ ವಯೋ ನಿವೃತ್ತಿ ಹೊಂದಿದ್ದು, ಅವರನ್ನು ಮಹಾನಗರ ಪಾಲಿಕೆ ನೌಕರ ಸಂಘದ ವತಿಯಿಂದ ಸನ್ಮಾನಿಸಲಾಯಿತು. ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ ಅವರು ಸನ್ಮಾನಿಸಿದರು. ಈ ಸಂದರ್ಭದಲ್ಲಿ ನೌಕರ ಸಂಘದ ಅಧ್ಯಕ್ಷ ಕೆ.ಎಸ್.ಗೋವಿಂದರಾಜು, ಟಿ.ಸಿ. ಬಸವರಾಜಯ್ಯ, ಸುರೇಶ್ ಪಾಟೀಲ್, ಅಸ್ಲಾಂ, ಸಿ. ಕೃಷ್ಣಪ್ಪ ಸೇರಿದಂತೆ ಅಧಿಕಾರಿ, ನೌಕರರು ಉಪಸ್ಥಿತರಿದ್ದರು.

## ಅಮೆರಿಕದಲ್ಲಿ ಹೊಸ ವರ್ಷದ ಸಂಭ್ರಮದ ವೇಳೆ ಲಾರಿ ಹರಿಸಿ 10 ಸಾವು

ನ್ಯೂ ಆರ್ಲಿಯನ್ಸ್, ಜ. 1- ಅಮೆರಿಕದ ನ್ಯೂ ಆರ್ಲಿಯನ್ಸ್‌ನಲ್ಲಿ ಹೊಸ ವರ್ಷದ ಸಂಭ್ರಮಾಚರಣೆ ವೇಳೆ ವ್ಯಕ್ತಿಯೋರ್ವ ಲಾರಿ ಹರಿಸಿದ ಕಾರಣ ಹತ್ತು ಜನ ಸಾವನ್ನಪ್ಪಿದ್ದಾರೆ ಹಾಗೂ 30 ಜನ ಗಾಯಗೊಂಡಿದ್ದಾರೆ.

ಇಲ್ಲಿನ ಪ್ರಸಿದ್ಧ ಕೆನಾಲ್ ಮತ್ತು ಬೋರ್ಬನ್ ಸ್ಟ್ರೀಟ್ ನಲ್ಲಿ ಬೆಳಗಿನ ಜಾವ ವಾಹನ ಹರಿಸಿ ಹತ್ಯೆ ಮಾಡಲಾಗಿದೆ.

ಘಟನಾ ಸ್ಥಳದಲ್ಲಿ ಸುಧಾರಿತ ಸ್ಫೋಟಕ ಒಂದು ಪತ್ತೆಯಾಗಿದೆ ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

ದಾಳಿ ನಡೆಸಿದ ವ್ಯಕ್ತಿ ಪೊಲೀಸರ ಮೇಲೆ ಗುಂಡು ಹಾರಿಸಿದಾಗ ಇಬ್ಬರು ಗಾಯಗೊಂಡಿದ್ದಾರೆ. ನಂತರ ಪೊಲೀಸರು ವ್ಯಕ್ತಿಯನ್ನು ಹೊಡೆದುರುಳಿಸಿದ್ದಾರೆ.

## ನಗರದಲ್ಲಿ ವಿಶ್ವ ಕನ್ನಡ ಸಮ್ಮೇಳನದ ಆಯೋಜನೆಗೆ ಆಗ್ರಹಿಸಲು ಇಂದು ಸಭೆ

ದಾವಣಗೆರೆಯಲ್ಲಿ ವಿಶ್ವ ಕನ್ನಡ ಸಮ್ಮೇಳನ ಆಯೋಜಿಸುವಂತೆ ಸರ್ಕಾರವನ್ನು ಒತ್ತಾಯಿಸಲು ಇಂದು ಮಧ್ಯಾಹ್ನ 3 ಘಂಟೆಗೆ ಕುವೆಂಪು ಕನ್ನಡ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಆಶ್ರಯದಲ್ಲಿ ಸರ್ವ ಕನ್ನಡಿಗರ ಪೂರ್ವಭಾವಿ ಸಭೆ ಕರೆಯಲಾಗಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ವಾಮದೇವಪ್ಪ ತಿಳಿಸಿದ್ದಾರೆ.

ಇದೇ ದಿನಾಂಕ 5 ರ ಭಾನುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಗರಕ್ಕೆ ಭೇಟಿ ನೀಡಲಿದ್ದು, ಅಂದು ಅವರನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಲೋಕಸಭಾ ಸದಸ್ಯರಾದ ಡಾ.ಪ್ರಭಾ ಮಲ್ಲಿಕಾರ್ಜುನ ಹಾಗೂ ಜಿಲ್ಲೆಯ ಎಲ್ಲಾ ಶಾಸಕರ ನೇತೃತ್ವದಲ್ಲಿ ನಿಯೋಗದ ಮೂಲಕ ಭೇಟಿ ಮಾಡಿ ಮನವಿ ಸಲ್ಲಿಸಬೇಕಾಗಿರುವ ಹಿನ್ನೆಲೆ ಯಲ್ಲಿ ಈ ಸಭೆಯನ್ನು ಆಯೋಜಿಸಲಾಗಿದೆ ಎಂದು ವಾಮದೇವಪ್ಪ ವಿವರಿಸಿದ್ದಾರೆ.

## ಚರ್ಮ ವಸ್ತುಗಳ ಮೇಲೆ ರಿಯಾಯಿತಿ

ದಾವಣಗೆರೆ, ಜ. 1 - ಕ್ರಿಸ್‌ಮಸ್ ಮತ್ತು ಹೊಸ ವರ್ಷದ ಪ್ರಯುಕ್ತ ಲಿಡಕರ್ ನಿಗಮದಿಂದ ಇಂದಿನಿಂದ ನಾಲ್ಕು ದಿನ ಚರ್ಮದ ಪಾದರಕ್ಷೆ, ಶೂ, ಬೆಲ್ಟ್, ಪರ್ಸ್, ಟ್ರಾವಲ್ ಬ್ಯಾಗ್, ಲ್ಯಾಪ್‌ಟಾಪ್ ಬ್ಯಾಗ್, ಮಹಿಳೆಯರ ಪರ್ಸ್, ವ್ಯಾನಿಟಿ ಬ್ಯಾಗ್‌ಗಳ ಮೇಲೆ ಶೇ.20 ರಿಂದ 40 ರಷ್ಟು ರಿಯಾಯತಿ ಇರುತ್ತದೆ ಎಂದು ಲಿಡಕರ್ ನಿಗಮದ ವ್ಯವಸ್ಥಾಪಕರು ತಿಳಿಸಿದ್ದಾರೆ.

## ಕವಿಗೋಷ್ಠಿ, ವೇಷಭೂಷಣ ಸ್ಪರ್ಧೆ

ದಾವಣಗೆರೆ, ಜ.1- ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಹಾಗೂ ಸ್ಫೂರ್ತಿ ಪ್ರಕಾಶನ ವತಿಯಿಂದ ಇದೇ ದಿನಾಂಕ 19ರ ಭಾನುವಾರ ಬೆಳಗ್ಗೆ 11ಕ್ಕೆ ನಗರದ ಹೊರವಲಯದ ತೋಟದೊಳಗೆ 'ಕವಿಗೋಷ್ಠಿ ಹಾಗೂ ಹಳ್ಳಿ ಸೊಗಡಿನ ವೇಷ ಭೂಷಣ ಸ್ಪರ್ಧೆ' ಆಯೋಜಿಸಲಾಗಿದೆ ಎಂದು ಗುಂಡಗಟ್ಟಿ ರಾಜಶೇಖರ್ ತಿಳಿಸಿದ್ದಾರೆ.

'ಸಂಕ್ರಾಂತಿಯ ಸೊಬಗು, ಹಳ್ಳಿ ಹಸುರಿನ ಮಡಿಲೊಳು' ಈ ಶೀರ್ಷಿಕೆಯಡಿ ಕವಿಗೋಷ್ಠಿ ನಡೆಯಲಿದ್ದು, ಭಾಗವಹಿಸಲು ಇಚ್ಛಿಸುವವರು ಜ.5ರ ಒಳಗಾಗಿ 9844718412, 7019353970 ಹಾಗೂ 9611969690 ಸಂಪರ್ಕಿಸಿ ಹೆಸರು ನೋಂದಾಯಿಸಬಹುದು. ಮಾಹಿತಿಗಾಗಿ ಮೇಲಿನ ಸಂಖ್ಯೆಗೆ ಸಂಪರ್ಕಿಸಲು ಅಣಬೇರು ತಾರೇಶ್ ತಿಳಿಸಿದ್ದಾರೆ.

# ನಗರದಲ್ಲಿ ನಾಳೆಯಿಂದ 3 ದಿನ 'ಸೋಮೇಶ್ವರೋತ್ಸವ'

ದಾವಣಗೆರೆ, ಜ. 1- ನಗರದ ಶ್ರೀ ಸೋಮೇಶ್ವರ ವಿದ್ಯಾ ಸಂಸ್ಥೆ ಆವರಣದಲ್ಲಿ ನಾಡಿದ್ದು ದಿನಾಂಕ 3, 4 ಹಾಗೂ 5 ರಂದು ಮೂರು ದಿನಗಳ ಕಾಲ 'ಶ್ರೀ ಸೋಮೇಶ್ವರೋತ್ಸವ-2025' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಪ್ರಾಂಶುಪಾಲರಾದ ಪ್ರಭಾವತಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ನಾಡಿದ್ದು ದಿನಾಂಕ 3 ರ ಶುಕ್ರವಾರ ಸಂಜೆ 5.45 ಕ್ಕೆ ನಡೆಯಲಿರುವ ಕಾರ್ಯಕ್ರಮದ ಸಾನ್ನಿಧ್ಯ ವನ್ನು ಹುಬ್ಬಳ್ಳಿಯ ಚಿನ್ಮಯ ಮಿಷನ್ ನ ಸ್ವಾಮಿ ಕೃತಾತ್ಮಾನಂದ ಜೀ ವಹಿಸಲಿದ್ದು, ಸಾಹಿತಿ ಅಶೋಕ ಹಂಚಲಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ.ಎ.ಹೆಚ್. ಶಿವಯೋಗಿಸ್ವಾಮಿ, ಮಾಜಿ ಶಾಸಕ ಅರುಣಕುಮಾರ್ ಮತ್ತಿತರರು ಭಾಗವಹಿಸಲಿದ್ದಾರೆ.

ಇದೇ ವೇಳೆ ನಿವೃತ್ತ ಶಿಕ್ಷಕ ಮಹಾಲಿಂಗಪ್ಪ ಯಾದವ್, ಫಿಜಿಯೋಥೆರಪಿಸ್ಟ್ ಡಾ. ಬಸವರಾಜ ಶಿವಪೂಜಿ ಅವರಿಗೆ 'ಸೋಮೇಶ್ವರ ಸಿರಿ' ಪ್ರಶಸ್ತಿ ನೀಡಿ ಗೌರವಿಸಲಾಗುವುದು.

ದಿನಾಂಕ 4 ರ ಶನಿವಾರ ಸಂಜೆ 5.45ಕ್ಕೆ ನಡೆಯುವ ಸಮಾರಂಭದಲ್ಲಿ ಹರಿಹರ ಪಂಚಮಸಾಲಿ ಗುರುಪೀಠದ ಶ್ರೀ ವಚನಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಅವರು ಪ್ರತಿಭಾ ಪುರಸ್ಕಾರ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಆಗಮಿಸಲಿದ್ದಾರೆ.

**ಹುಬ್ಬಳ್ಳಿಯ ಚಿನ್ಮಯ ಮಿಷನ್ ನ ಸ್ವಾಮಿ ಕೃತಾತ್ಮಾನಂದ ಜೀ ಸಾನ್ನಿಧ್ಯದ ಕಾರ್ಯಕ್ರಮದಲ್ಲಿ ಸಾಹಿತಿ ಅಶೋಕ ಹಂಚಲಿ ಮುಖ್ಯ ಅತಿಥಿ**

**ಸಾಮಾಜಿಕ ಕಾರ್ಯಕರ್ತರಾದ ಕು. ಹಾರಿಕಾ ಮಂಜುನಾಥ್ ವಿಶೇಷ ಉಪನ್ಯಾಸ**

**ಗಾಯಕಿ ಎಂ.ಡಿ. ಪಲ್ಲವಿ, ನಟ ರಮೇಶ್ ಅರವಿಂದ್ ಅವರಿಂದ ಹೃದಯ ಸ್ಪರ್ಶಿ ಸಂಜೆ ಕಾರ್ಯಕ್ರಮ**

'ಮಕ್ಕಳನ್ನು ಸತ್ಪ್ರಜೆಗಳನ್ನಾಗಿ ರೂಪಿಸುವಲ್ಲಿ ಕುಟುಂಬದ ಪಾತ್ರ' ವಿಷಯ ಕುರಿತು ಬೆಂಗಳೂರಿನ ಸಾಮಾಜಿಕ ಕಾರ್ಯಕರ್ತರಾದ ಕು. ಹಾರಿಕಾ ಮಂಜುನಾಥ್ ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಇದೇ ಸಂದರ್ಭದಲ್ಲಿ ಕೆನರಾ ಬ್ಯಾಂಕ್ ಎಂಪ್ಲಾಯೀಸ್ ಅಸೋಸಿಯೇಷನ್ ರಾಷ್ಟ್ರೀಯ ಕಾರ್ಯದರ್ಶಿ ಕೆ. ರಾಘವೇಂದ್ರ ನಾಯರಿ ಅವರಿಗೆ 'ಸೋಮೇಶ್ವರ ಸಿರಿ' ಪ್ರಶಸ್ತಿ ನೀಡಲಾಗುವುದು. ಎಸ್ಸೆಸ್ಸೆಲ್ಸಿ ರಾಜ್ಯ ಪಠ್ಯಕ್ರಮದಲ್ಲಿ ಪ್ರಥಮ ಸ್ಥಾನ ಪಡೆದ ವೈ.ಎಂ. ಸೃಜನ, ಕೇಂದ್ರ ಪಠ್ಯಕ್ರಮದಲ್ಲಿ ಪ್ರಥಮ ಸ್ಥಾನ ಪಡೆದ ಹೆಚ್.ಎಂ.ಪವನ್ ಅವರಿಗೆ 'ಸೋಮೇಶ್ವರ ಸಾಧನಾ ಸಿರಿ' ಪುರಸ್ಕಾರ ಮತ್ತು 25 ಸಾವಿರ ನಗದು ಬಹುಮಾನ ನೀಡಲಾಗುವುದು ಎಂದರು.

ದಿನಾಂಕ 5 ರ ಭಾನುವಾರ ನಡೆಯುವ ಕಾರ್ಯಕ್ರಮದಲ್ಲಿ ಕಣ್ವಕುಪ್ಪೆ ಗವಿಮಠದ ಶ್ರೀ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ಡಿಡಿಪಿಐ ಜಿ. ಕೊಟ್ರೇಶ್, ಉದ್ಯಮಿ ಬಿ.ಸಿ.ಉಮಾಪತಿ, ವೈದ್ಯ ಡಾ. ಅಂದನೂರು ರುದ್ರಮುನಿ ಮತ್ತಿತರರು ಭಾಗವಹಿಸಲಿದ್ದಾರೆ. ಇದೇ ವೇಳೆ ನಿವೃತ್ತ ಶಿಕ್ಷಕ ಮಳಲಕೆರೆ ಗುರುಮೂರ್ತಿ ಅವರಿಗೆ 'ಸೋಮೇಶ್ವರ ಶಿಕ್ಷಣ ಸಿರಿ' ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಹಿರಿಯ ಪತ್ರಕರ್ತರಾದ ರಮೇಶ್ ಜಹಗೀರ್ ದಾರ್, ದೇವಿಕಾ ಸುನೀಲ್ ಅವರಿಗೆ 'ಸೋಮೇಶ್ವರ ಸಿರಿ' ಪ್ರಶಸ್ತಿ ನೀಡಿ ಗೌರವಿಸಲಾಗುವುದು.

ಅಂದು ಸಂಜೆ ಗಾಯಕಿ ಎಂ.ಡಿ. ಪಲ್ಲವಿ, ನಟ ರಮೇಶ್ ಅರವಿಂದ್ ಅವರಿಂದ ಹೃದಯ ಸ್ಪರ್ಶಿ ಸಂಜೆ ಕಾರ್ಯಕ್ರಮ ನಡೆಯಲಿದೆ. ಪತ್ರಿಕಾಗೋಷ್ಠಿಯಲ್ಲಿ ಸಿ.ಎನ್. ಪರಮೇಶ್ವರಪ್ಪ, ಕೆ. ಗಾಯತ್ರಿ, ಎನ್.ಆರ್. ಹರೀಶ್ ಬಾಬು ಉಪಸ್ಥಿತರಿದ್ದರು.

ಜನ್ಮ ದಿನದ ಶುಭಾಶಯಗಳು



ರಿಯಲ್ ಎಸ್ಟೇಟ್ ಏಜೆಂಟ್‌ರಾದ
ಶ್ರೀ ಸುರೇಶ್ ಕಟ್ಟಿಮನಿ
ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು.
ಶುಭ ಕೋರುವವರು
ಜಿ.ಎನ್. ಸುರೇಂದ್ರ ಗುಜ್ಜರ್, ಕಕ್ಕರಗೊಳ್ಳ
ಜಿ.ಎನ್. ನರೇಂದ್ರ ಗುಜ್ಜರ್, ಪತ್ರಿಕಾ ವಿತರಕರು
ಮಾಲತೇಶ್ ಎನ್.ಗುಜ್ಜರ್
ಎಂ.ಜಿ. ಟ್ರೆಂಡ್ಸ್
ಹಗೇದಿಬ್ಬ ಸರ್ಕಲ್, ಹಳೇಬೆತೂರು ರಸ್ತೆ, ದಾವಣಗೆರೆ.



## ಋಗ್ವೇದ ಸ್ವಾಹಾಕಾರ ಹೋಮ

ಶ್ರೀ ಪೇಜಾವರ ಅಧೋಕ್ಷಜ ಮಠದ ಶ್ರೀ ವಿಶ್ವೇಶತೀರ್ಥ ಪಾದಂಗಳವರ ಪಂಚಮ ಆರಾಧನಾ ಮಹೋತ್ಸವದ ಅಂಗವಾಗಿ ನಗರದ ಪಿ.ಜೆ. ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಗುರುವಾರ ಋಗ್ವೇದ ಸ್ವಾಹಾಕಾರ ಹೋಮ ನಡೆಯಿತು.

# 5ರಿಂದ ಕಾಲುವೆಗೆ ನೀರು ಹರಿಸಲು ರೈತ ಒಕ್ಕೂಟದ ಆಗ್ರಹ

ದಾವಣಗೆರೆ, ಜ.1- ಭತ್ತದ ಬೆಳೆಗಾಗಿ ಜನವರಿ 5ರಿಂದ ಭದ್ರಾ ಡ್ಯಾಮಿನ ನೀರನ್ನು ಕಾಲುವೆಗೆ ಹರಿಸುವಂತೆ ಆಗ್ರಹಿಸಿ ಜಿಲ್ಲಾ ರೈತರ ಒಕ್ಕೂಟವು ಬುಧವಾರ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರ ಸ್ವಾಮಿ ಅವರಿಗೆ ಮನವಿ ಸಲ್ಲಿಸಿತು.

ಈ ವೇಳೆ ಮಾತನಾಡಿದ ರೈತ ಮುಖಂಡರು, ಭದ್ರಾ ಡ್ಯಾಂ ಜಿಲ್ಲೆಯ ರೈತರ ಜೀವನಾಡಿಯಾಗಿದ್ದು, ಈ ಡ್ಯಾಮಿನ ಆಸರೆಯಿಂದ ಜಿಲ್ಲೆಯಲ್ಲಿ ಸುಮಾರು 1ಲಕ್ಷ 60ಸಾವಿರ ಎಕರೆ ಪ್ರದೇಶದಲ್ಲಿ ಭತ್ತ ಬೆಳೆಯಲಾಗುತ್ತದೆ ಎಂದು ಹೇಳಿದರು.

ಪ್ರಸ್ತುತ ಬೇಸಿಗೆ ಹಂಗಾಮಿನಲ್ಲಿ ಭತ್ತ ಬೆಳೆಯಲು ಕೊಳವೆಬಾವಿ ಮತ್ತು ಇತರೆ ನೀರಿನ ಸೌಲಭ್ಯ ಇರುವವರು ಈಗಾಗಲೇ ಸಸಿಮಡಿ ತಯಾರಿಸಿ, ಬೀಜ ಚೆಲ್ಲಿದ್ದಾರೆ. ಇನ್ನುಳಿದ ಕೆಲವು ರೈತರು ಸಸಿಮಡಿಗೆ ಬೀಜ ಚೆಲ್ಲಲು ಕಾಲುವೆಗಳಲ್ಲಿ ನೀರು ಹರಿಸುವುದನ್ನು ಕಾಯುತ್ತಿದ್ದಾರೆ ಎಂದು ಜಿಲ್ಲಾಧಿಕಾರಿಗಳಿಗೆ ಹೇಳಿದರು.



ಕೆಲವು ರೈತರು ಬೀಜ ಉಗ್ಗುವ ಮೂಲಕ ನೇರ ಬಿತ್ತನೆ ಮಾಡುವ ಮುಖೇನ ಚೆಲ್ಲುವ ಪದ್ಧತಿ ಅನುಸರಿಸುವವರೂ ನೀರು ಹರಿಸುವುದನ್ನು ಕಾಯುತ್ತಿದ್ದಾರೆ. ಪ್ರಸಕ್ತ ಡ್ಯಾಮ್‌ನಲ್ಲಿ ನೀರಿನ ಮಟ್ಟ 183ಅಡಿ ಇದ್ದು, ಡ್ಯಾಮ್ ತುಂಬಿದೆ. ನೀರು ಬಿಡುವುದು ತಡವಾದರೆ ಬೇಸಿಗೆ ಹಂಗಾಮಿನಲ್ಲಿ ಭತ್ತದ ಬೆಳೆಗೆ ಅನಾನುಕೂಲ ವಾಗುತ್ತದೆ. ಆದ್ದರಿಂದ ತಕ್ಷಣವೇ ಭದ್ರಾ ನೀರಾವರಿ ಸಲಹಾ ಸಮಿತಿ (ಐಸಿಸಿ) ಸಭೆ ಕರೆದು ನೀರು ಹರಿಸುವ ವೇಳಾಪಟ್ಟಿ ಪ್ರಕಟಿಸಬೇಕೆಂದು ಒತ್ತಾಯಿಸಿದರು.

ಕಾಲುವೆಗಳಲ್ಲಿ ಬೆಳೆದಿರುವ ಗಿಡ-ಗಂಟಿ ಮತ್ತು ಹೂಳನ್ನು ತೆಗೆದು, ನೀರು ಸರಾಗವಾಗಿ ಕೊನೆಯ ಭಾಗಕ್ಕೆ ಹರಿಯುವಂತೆ ಮಾಡಬೇಕು ಮತ್ತು ಭದ್ರಾ ಡ್ಯಾಮ್ ಸುರಕ್ಷತೆ ಬಗ್ಗೆ ಸಮೀಕ್ಷೆ ನಡೆಸಿ, ಸೂಕ್ತ ಭದ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಡ್ಯಾಮ್ ನಿರ್ವಹಣೆಯ ಕ್ರೇನ್‌ಗಳನ್ನು ರೀ ಕಂಡೀಷನ್ ಮಾಡಿಸಬೇಕು ಹಾಗೂ ತಳಭಾಗದ ಬಫರ್ ಜೋನ್ ಪ್ರದೇಶದಲ್ಲಿ ಯಾವುದೇ ರೀತಿಯ ಅವೈಜ್ಞಾನಿಕ ಕಾಮಗಾರಿ ಕೈಗೊಳ್ಳಬಾರದು ಎಂದು ಮನವಿ ಮಾಡಿದರು.

ಈ ವೇಳೆ ರೈತ ಮುಖಂಡರಾದ ಕೋಲೇನಹಳ್ಳಿ ಬಿ.ಎಂ ಸತೀಶ್, ಅಣಬೇರು ಕುಮಾರಸ್ವಾಮಿ, ಮಾಜಿ ಮೇಯರ್ ಹೆಚ್.ಎನ್. ಗುರುನಾಥ್, ಕುರ್ಕಿ ರೇವಣಸಿದ್ದಪ್ಪ, ಕುಂದುವಾಡದ ಜಿಮ್ಮಿ ಹನುಮಂತಪ್ಪ ಇತರರಿದ್ದರು.

## ಯರವನಾಗ್ತಿಹಳ್ಳಿ ಕ್ಯಾಂಪ್‌ನಲ್ಲಿ 10ರಂದು ವೈಕುಂಠ ಏಕಾದಶಿ



ದಾವಣಗೆರೆ, ಜ. 1- ತಾಲ್ಲೂಕಿನ ಲೋಕಿಕೆರೆ ರಸ್ತೆಯಲ್ಲಿರುವ ಯರವನಾಗ್ತಿಹಳ್ಳಿ ಕ್ಯಾಂಪ್‌ನಲ್ಲಿರುವ ಶ್ರೀ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಇದೇ ದಿನಾಂಕ 10ರಂದು ವೈಕುಂಠ ಏಕಾದಶಿ ನಡೆಯಲಿದೆ. ಮುಂಜಾನೆ 3 ರಿಂದ ವಿಶೇಷ ಪಂಚಾಮೃತ ಅಭಿಷೇಕ, ಪುಷ್ಪಾಲಂಕಾರ, ವಿಶೇಷ ಪೂಜೆ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ನಂತರ ಬೆಳಿಗ್ಗೆ 7 ರಿಂದ ಉತ್ತರ ವೈಕುಂಠ ದ್ವಾರದಿಂದ ಸ್ವಾಮಿಯ ದರ್ಶನ ನಡೆಯಲಿದೆ.

## ತೇಜಸ್ವಿನಿ ಕುರ್ಕಿ ಅವರಿಗೆ ಚಿನ್ನದ ಪದಕ



ದಾವಣಗೆರೆ, ಜ. 1 - ನಗರದ ಸೇಂಟ್ ಜಾನ್ಸ್ ಶಾಲೆಯ ವಿದ್ಯಾರ್ಥಿನಿ ಕೆ. ಎಸ್. ತೇಜಸ್ವಿನಿ ಕುರ್ಕಿ ಅವರು 2023 - 24 ನೇ ಶೈಕ್ಷಣಿಕ ಸಾಲಿನ ಎಸ್.ಎಸ್.ಎಲ್ ಸಿ, ಪರೀಕ್ಷೆಯಲ್ಲಿ ರಾಷ್ಟ್ರ ಭಾಷೆ ಹಿಂದಿಯಲ್ಲಿ 100ಕ್ಕೆ 100 ಮತ್ತು ಮಾತೃ ಭಾಷೆ ಕನ್ನಡದಲ್ಲಿ 125ಕ್ಕೆ 125 ಅಂಕಗಳ ಮೂಲಕ 625 ಕ್ಕೆ 608 (ಶೇ.97.28 ) ಅಂಕಗಳನ್ನು ಪಡೆದು ವಿಶಿಷ್ಠ ದರ್ಜೆಯಲ್ಲಿ ಸಾಧನೆಗೈದು, ಹುಲ್ಲುಮನೆ ರಾಮಪ್ಪ ಭೀಮಪ್ಪ ಚಿನ್ನದ ಪದಕ ಪಡೆದು ಪ್ರತಿಭಾನ್ವಿತ ವಿದ್ಯಾರ್ಥಿನಿ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ. ತೇಜಸ್ವಿನಿ, ಕುರ್ಕಿ ಗ್ರಾಮದ ಕೆ.ಜಿ. ಶಿವಶಂಕರಪ್ಪ ಲಲಿತಮ್ಮನವರ ಮೊಮ್ಮಗಳು, ಸಾಹಿತಿ ಎಸ್. ಸಿದ್ದೇಶ್ ಕುರ್ಕಿ ಮತ್ತು ಶ್ರೀಮತಿ ಶೀಲಾ ದಂಪತಿ ಪುತ್ರಿ. ತೇಜಸ್ವಿನಿ, ಅವರನ್ನು ಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ ಶಾಲೆಯ ಆಡಳಿತ ಮಂಡಳಿಯವರು ಅಭಿನಂದಿಸಿದ್ದು, ಸಮಾರಂಭದಲ್ಲಿ ಚಿತ್ರದುರ್ಗದ ಜಿಲ್ಲಾ ಕೈಗಾರಿಕೆ ಕೇಂದ್ರದ ಜಂಟಿ ನಿರ್ದೇಶಕರಾದ ಬಿ. ಆನಂದ, ಶಾಲೆಯ ಕಾರ್ಯದರ್ಶಿ ಟಿ.ಎಂ. ಉಮಾಪತಯ್ಯ, ಖಜಾಂಚಿ ಹುಲ್ಲುಮನೆ ಪ್ರವೀಣ್ ಉಪಸ್ಥಿತರಿದ್ದರು.

## ನಗರದಲ್ಲಿ ಶ್ರೀಮದ್ ರಂಭಾಪುರಿ ಜಗದ್ಗುರುಗಳ ಇಷ್ಟಲಿಂಗ ಮಹಾಪೂಜೆ



ದಾವಣಗೆರೆ, ಜ. 1 - ಜಿಲ್ಲಾ ವೀರಶೈವ ಸದ್ಬೋದನಾ ಸಮಿತಿ ಅಧ್ಯಕ್ಷ ದೇವರ ಮನೆ ಶಿವಕುಮಾರ್ ಅವರ ಮಾತೃಶ್ರೀ ದೇವರಮನೆ ರತ್ನಮ್ಮ ಮಹಾರುದ್ರಪ್ಪ ಅವರು ಈಚೆಗೆ ನಿಧನರಾಗಿದ್ದು, ಅವರ ಸ್ಮರಣಾರ್ಥ ಅವರ ಮನೆಯಲ್ಲಿ ನಿನ್ನೆ ಶ್ರೀ ರಂಭಾಪುರಿ ಜಗದ್ಗುರುಗಳು ಇಷ್ಟಲಿಂಗ ಮಹಾಪೂಜೆ ನೆರವೇರಿಸಿದರು.

# ದಾವಣಗೆರೆ ಪೊಲೀಸ್ ತಂಡಕ್ಕೆ ಆರ್‌ಪಿಎಲ್ ಕಪ್



ದಾವಣಗೆರೆ, ಜ.1- ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಭಾನುವಾರ ನಡೆದ 'ರೇಂಜ್ ಪ್ರೀಮಿಯರ್ ಲೀಗ್' ಕ್ರಿಕೆಟ್ ಪಂದ್ಯಾವಳಿಯಲ್ಲಿ ದಾವಣಗೆರೆ ಜಿಲ್ಲಾ ಪೊಲೀಸ್ ತಂಡವು 'ಆರ್‌ಪಿಎಲ್' ಕಪ್ ತನ್ನದಾಗಿಸಿಕೊಂಡಿತು.

ಪೂರ್ವ ವಲಯದ ಜಿಲ್ಲೆಗಳಾದ ದಾವಣಗೆರೆ, ಶಿವಮೊಗ್ಗ, ಹಾವೇರಿ ಹಾಗೂ ಚಿತ್ರದುರ್ಗ ಜಿಲ್ಲೆಯ ತಂಡಗಳ ನಡುವೆ ಆರ್‌ಪಿಎಲ್ ಲೀಗ್ ಪಂದ್ಯಾವಳಿ ನಡೆದಿದ್ದು, 'ದಾವಣಗೆರೆ' ಮತ್ತು 'ಹಾವೇರಿ' ತಂಡಗಳು ಫೈನಲ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದವು.

ರೋಚಕ ಫೈನಲ್ ಪಂದ್ಯಾವಳಿಯಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ದಾವಣಗೆರೆ ತಂಡ 6 ಓವರ್‌ಗಳಲ್ಲಿ 86 ರನ್ ಗಳಿಸುವ ಮೂಲಕ ಹಾವೇರಿ ತಂಡಕ್ಕೆ 87 ರನ್‌ಗಳ ಟಾರ್ಗೆಟ್ ನೀಡಿತು. ಫೈನಲ್ ಪಂದ್ಯದಲ್ಲಿ ದಾವಣಗೆರೆ ಜಿಲ್ಲಾ ಪೊಲೀಸ್ ತಂಡದ ನೂರ್ ಅಹ್ಮದ್ 1 ಓವರ್ ನಲ್ಲಿ 5 ಸಿಕ್ಸ್ ಭಾರಿಸುವ ಮೂಲಕ ಉತ್ತಮ ಅಡಿಪಾಯ ಹಾಕಿಕೊಟ್ಟರು.

ದಾವಣಗೆರೆ ತಂಡದ ಟಾರ್ಗೆಟ್ ಬೆನ್ನತ್ತಿದ ಹಾವೇರಿ ತಂಡವು 6 ಓವರ್ ಗಳಲ್ಲಿ ಆಲ್ ಔಟ್ ಆಗಿ 42 ರನ್ ಗಳಿಸಿತು. ಹಾವೇರಿ ತಂಡ ಸೋಲಿಗೆ ಶರಣಾಗಿದ್ದರಿಂದ ದಾವಣಗೆರೆ ಜಿಲ್ಲಾ ಪೊಲೀಸ್ ತಂಡಕ್ಕೆ 'ಆರ್‌ಪಿಎಲ್ ಕಪ್'ಒಲಿದು ಬಂದಿತು.

ಎಸ್ಪಿ ಉಮಾ ಪ್ರಶಾಂತ್ ಆರ್‌ಪಿಎಲ್ ಕ್ರಿಕೆಟ್ ಪಂದ್ಯಾವಳಿಗೆ ವಿಧ್ಯುಕ್ತ ಚಾಲನೆ ನೀಡಿದರು. ಇದೇ ವೇಳೆ ಪೂರ್ವ ವಲಯದ ನಾಲ್ಕೂ ಜಿಲ್ಲೆಗಳಿಂದ ರಾಜ್ಯ ಮಟ್ಟದ ಪಂದ್ಯಾವಳಿಗೆ ಪೂರ್ವ ವಲಯದಿಂದ ಕ್ರಿಕೆಟ್ ತಂಡವನ್ನು ಆಯ್ಕೆ ಮಾಡಲಾಯಿತು.

ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ವಿಜಯಕುಮಾರ ಎಂ. ಸಂತೋಷ್, ಜಿ. ಮಂಜುನಾಥ, ಚನ್ನಗಿರಿ ಉಪ ವಿಭಾಗದ ಎಎಸ್ಪಿ ಸ್ಯಾಮ್ ವರ್ಗೀಸ್, ಡಿವೈಎಸ್ಪಿ ಬಸವರಾಜ್ ಬಿ.ಎಸ್, ಮಲ್ಲೇಶ್ ದೊಡ್ಮನಿ, ಪಿ.ಬಿ ಪ್ರಕಾಶ್ ಹಾಗೂ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಕ್ರೀಡಾ ಕೂಟದಲ್ಲಿದ್ದರು.

## ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನ ಆಚರಣೆ



ದಾವಣಗೆರೆ, ಜ. 1 - ಜಿಲ್ಲಾಡಳಿತ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಯನ್ನು ಬುಧವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಅವರ ಭಾವ ಚಿತ್ರಕ್ಕೆ ಪುಷ್ಪ ಅರ್ಪಿಸುವ ಮೂಲಕ ಆಚರಿಸಲಾಯಿತು.

ಈ ವೇಳೆ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರ ಸ್ವಾಮಿ, ಅಪರ ಜಿಲ್ಲಾಧಿಕಾರಿ ಪಿ. ಎನ್. ಲೋಕೇಶ್, ಪಾಲಿಕೆ ಉಪಮಹಾಪೌರ ಸೋಗಿ ಶಾಂತಕುಮಾರ್, ಪಾಲಿಕೆ ಸದಸ್ಯರು, ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ, ವಿಶ್ವಕರ್ಮ ಸಮಾಜದ ಮುಖಂಡರು ಹಾಗೂ ಇತರರು ಇದ್ದರು.

## ವೀಸಾ ದರ ಕಡಿತ ಮತ್ತೆ 1 ವರ್ಷ ವಿಸ್ತರಣೆ ಮಾಡಿದ ಚೀನಾ

ದೆಹಲಿ, ಜ. 1 - ಭಾರತೀಯ ನಾಗರಿಕರಿಗೆ ವೀಸಾ ದರಗಳ ಕಡಿತವನ್ನು ಮತ್ತೊಂದು ವರ್ಷ ವಿಸ್ತರಿಸಲಾಗಿದೆ ಎಂದು ಭಾರತದಲ್ಲಿನ ಚೀನಾದ ರಾಯಭಾರ ಕಚೇರಿ ಪ್ರಕಟಿಸಿದೆ.

ಭಾರತದ ಜೊತೆಗಿನ ಸಂಬಂಧವನ್ನು ಬಲಪಡಿಸುವ ಉದ್ದೇಶದಿಂದ ಚೀನಾ ಈ ನಿರ್ಣಾಯಕ ನಿರ್ಧಾರವನ್ನು ತೆಗೆದುಕೊಂಡಿದೆ. ವೀಸಾ ಶುಲ್ಕವನ್ನು ಕಡಿತಗೊಳಿಸುವ ಗಡುವು ಡಿಸೆಂಬರ್ 31, 2025 ರವರೆಗೆ ಮುಂದುವರೆಯುತ್ತದೆ. ಚೀನಾಕ್ಕೆ ಪ್ರಯಾಣಿಸಲು ಬಯಸುವ ವಿದೇಶಿಯರ ಪ್ರಯಾಣದ ಮಾದರಿಗಳನ್ನು ನಿಯಂತ್ರಿಸಲು ಈ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ರಾಯಭಾರ ಕಚೇರಿ ತಿಳಿಸಿದೆ.

ವಾಸ್ತವವಾಗಿ, ಕಳೆದ ವರ್ಷ ವೀಸಾ ಬೆಲೆಗಳನ್ನು ಕಡಿಮೆ ಮಾಡಲಾಯಿತು. ಸಿಂಗಲ್ ಎಂಟ್ರಿ ವೀಸಾಗೆ 2,900 ರೂ., ಡಬಲ್ ಎಂಟ್ರಿ ವೀಸಾಗೆ 4,400 ರೂ. ಆರು ತಿಂಗಳವರೆಗೆ ಮಾನ್ಯತೆ ಹೊಂದಿರುವ ಬಹು ಪ್ರವೇಶ ವೀಸಾಗಳು 5,900 ರೂ., ಒಂದು ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ಮಾನ್ಯತೆ ಹೊಂದಿರುವ ಮಲ್ಟಿ-ಎಂಟ್ರಿ ವೀಸಾಗಳು 8,800 ರೂ. ಕಳೆದ ವರ್ಷದಿಂದ ಇದೇ ಬೆಲೆಗಳು ನಡೆಯುತ್ತಿವೆ. ಚೀನಾ ಈ ಬೆಲೆಗಳನ್ನು ಮತ್ತೊಂದು ವರ್ಷ ವಿಸ್ತರಿಸಿದೆ.

## 7ರಂದು ರಂಭಾಪುರಿ ಜಗದ್ಗುರುಗಳ 69ನೇ ಜನ್ಮ ದಿನೋತ್ಸವ



ಬಾಳೆಹೊನ್ನೂರು, ಜ. 1 - ತೆಲಂಗಾಣ ರಾಜ್ಯದ ಯಾದಾದ್ರಿ ಭುವನಗಿರಿ ಜಿಲ್ಲೆ ಅಲೇರು ಮಂಡಲ ಕೊಲನುಪಾಕ ಶ್ರೀ ಚಂಡಿಕಾಂಬಾ ಸಮೇತ ಸ್ವಯಂಭೂ ಶ್ರೀ ಸೋಮೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಇದೇ ದಿನಾಂಕ 7 ರಂದು ಬಾಳೆಹೊನ್ನೂರಿನ ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳವರ 69ನೇ ಜನ್ಮ ದಿನೋತ್ಸವ ಹಾಗೂ ವೀರಶೈವ ಸಂಸ್ಕೃತಿ ಸಂವರ್ಧನಾ ಸಮಾರಂಭ ನಡೆಯಲಿದೆ. ನಾಡಿದ್ದು ದಿನಾಂಕ 3 ರಿಂದ 7ರ ವರೆಗೆ ಪ್ರತಿ ದಿನ ಪ್ರಾತ: ಕಾಲ ಶ್ರೀ ಜಗದ್ಗುರು ರೇಣುಕಾಚಾರ್ಯರು ಅವತರಿಸಿದ ಶ್ರೀ ಸ್ವಯಂಭೂ ಸೋಮೇಶ್ವರ ಮಹಾಲಿಂಗಕ್ಕೆ ಮಹಾರುದ್ರಾಭಿಷೇಕ, ವಿಶೇಷ ಪೂಜೆ, ಸಹಸ್ರ ಪುಷ್ಪಾರ್ಚನೆ ಹಾಗೂ ಶ್ರೀ ಚಂಡಿಕಾಂಬಾ ದೇವಿಗೆ ಕುಂಕುಮಾರ್ಚನೆ ಹಾಗೂ ಶ್ರೀ ರಂಭಾಪುರಿ ಜಗದ್ಗುರುಗಳವರ ಇಷ್ಟಲಿಂಗ ಮಹಾಪೂಜೆ ಜರುಗುವುದು. ಐದೂ ದಿನಗಳ ಸಮಾರಂಭಗಳಲ್ಲಿ ಕರ್ನಾಟಕ ಮತ್ತು ತೆಲಂಗಾಣದ ಸಚಿವರು, ಗಣ್ಯರು, ವಿವಿಧ ಮಠಾಧೀಶರು ಪಾಲ್ಗೊಳ್ಳುವರು.

## ರಾಣೇಬೆನ್ನೂರಿನಲ್ಲಿ ನೀರು ಸರಬರಾಜು ವ್ಯತ್ಯಯ

ರಾಣೇಬೆನ್ನೂರು, ಜ.1- ನಗರದ ನೀರು ಸರಬರಾಜು ಮುಖ್ಯ ಪೈಪ್ ಲೈನ್ ದುರಸ್ತಿ ಇರುವುದರಿಂದ ನಾಡಿದ್ದು ದಿನಾಂಕ 3 ಮತ್ತು 4 ರಂದು ಎರಡು ದಿನಗಳ ಕಾಲ ನಗರಕ್ಕೆ 24×7 ಕುಡಿಯುವ ನೀರು ಸರಬರಾಜು ಇರುವುದಿಲ್ಲ ಎಂದು ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ.

**ಹೃತ್ಪೂರ್ವಕ ಕೃತಜ್ಞತೆಗಳು**

**ದಾವಣಗೆರೆ ತಾಲ್ಲೂಕು ತುಂಬಿಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ**

ನೂತನ ಅಧ್ಯಕ್ಷರನ್ನಾಗಿ ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡಿದ ಆಡಳಿತ ಮಂಡಳಿ ಸದಸ್ಯರಿಗೂ, ಗ್ರಾಮಸ್ಥರಿಗೂ ಹಾಗೂ ಪ್ರತ್ಯಕ್ಷ, ಪರೋಕ್ಷವಾಗಿ ಸಹಕರಿಸಿದ ಸರ್ವರಿಗೂ ಹೃತ್ಪೂರ್ವಕ ಕೃತಜ್ಞತೆಗಳು.



ಶ್ರೀ ಡಿ.ಎಸ್. ಸುರೇಶ್
ಅಧ್ಯಕ್ಷರು, ತುಂಬಿಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ

**ಬೇಕಾಗಿದ್ದಾರೆ**

**WANTED**

**CASHIER**
MALE ONLY

Salary + ESI, PF

Get proper resume along with a photo attested & a xerox of your Adhaar Card.

**ಆಶೂಜಿ ಡಿಸ್ಟ್ರಿಬ್ಯೂಟರ್ಸ್**
# 323 / 1D, ಬಿನ್ನಿ ಕಂಪನಿ ರಸ್ತೆ, ದಾವಣಗೆರೆ

## ತಾಯಿ, ನಾಲ್ವರು ಸಹೋದರಿಯರ ಕತ್ತು ಸೀಳಿ ಹತ್ಯೆ

ಲಕ್ನೌ, ಜ. 1- ಉತ್ತರ ಪ್ರದೇಶದ ಆಗ್ರಾದ 24 ವರ್ಷದ ವ್ಯಕ್ತಿಯೋರ್ವ ತನ್ನ ತಾಯಿ ಹಾಗೂ ನಾಲ್ವರು ಸಹೋದರಿಯರನ್ನು ಕತ್ತು ಸೀಳಿ ಹತ್ಯೆಗೈದ ಘಟನೆ ನಡೆದಿದೆ.

ನಂತರ ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ಒಂದನ್ನು ಹರಿ ಬಿಟ್ಟಿರುವ ಈತ, ನೆರೆಹೊರೆಯವರ ದೌರ್ಜನ್ಯದ ಕಾರಣದಿಂದ ಹತಾಶೆಗೊಂಡು ಈ ಕೃತ್ಯ ಎಸಗಿರುವುದಾಗಿ ಹೇಳಿದ್ದಾನೆ. ಅರ್ಷದ್ ಎಂಬ ವ್ಯಕ್ತಿ ಈ ಕೃತ್ಯ ಎಸಗಿದ್ದು, ಘಟನೆ ಬೆಳಕಿಗೆ ಬಂದ ನಂತರ ಪೊಲೀಸರು ಆತನನ್ನು ಬಂಧಿಸಿದ್ದಾರೆ.

ಈ ಕೃತ್ಯಕ್ಕೆ ತನ್ನ ತಂದೆ ಸಹ ನೆರವಾಗಿರುವುದಾಗಿ ಅರ್ಷದ್ ವಿಡಿಯೋದಲ್ಲಿ ಹೇಳಿದ್ದಾನೆ. ಪೊಲೀಸರು ಆತನ ತಂದೆಯ ಶೋಧ ನಡೆಸಿದ್ದಾರೆ.

ಅರ್ಷದ್ ಹಾಗೂ ಆತನ ತಂದೆ ಯಾರ ಜೊತೆಗೂ ಉತ್ತಮ ಸಂಬಂಧ ಹೊಂದಿರಲಿಲ್ಲ. ಅವರು ತಮ್ಮ ಮನೆಯ ಹೆಣ್ಣು ಮಕ್ಕಳ ಜೊತೆಗೂ ಉತ್ತಮವಾಗಿ ನಡೆದುಕೊಳ್ಳುತ್ತಿರಲಿಲ್ಲ ಎಂದು ಸ್ಥಳೀಯರು ಹೇಳಿದ್ದಾರೆ.

## ವಿವಿಧ ಕಾಮಗಾರಿಗಳನ್ನು ಪರಿಶೀಲಿಸಿದ ಸ್ಥಾಯಿ ಸಮಿತಿ ಅಧ್ಯಕ್ಷೆ ಸವಿತಾ ಹುಲ್ಲುಮನಿ



ದಾವಣಗೆರೆ, ಜ. 1 - ಮಹಾನಗರ ಪಾಲಿಕೆಯ ವಿವಿಧ ವಾರ್ಡ್‌ಗಳಲ್ಲಿ ಸಾರ್ವಜನಿಕರ ದೂರಿನ ಮೇರೆಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಅಧ್ಯಕ್ಷರಾದ ಶ್ರೀಮತಿ ಸವಿತಾ ಹುಲ್ಲುಮನಿ ಗಣೇಶ್ ಅವರು ಇಂದು ಭೇಟಿ ನೀಡಿ ಸಿವಿಲ್ ಕಾಮಗಾರಿಗಳನ್ನು ಪರಿಶೀಲಿಸಿದರು. 39ನೇ ವಾರ್ಡಿನ ವಿದ್ಯಾನಗರದಲ್ಲಿ ಅಡ್ಡ ರಸ್ತೆಗಳು ಮುಖ್ಯ ರಸ್ತೆಗೆ ಸಂಪರ್ಕಿಸುವ ಅಪ್ರೋಚ್‌ಗಳಲ್ಲಿ ದುರಸ್ಥಿ ಕಾಮಗಾರಿಯನ್ನು ಸರಿಯಾಗಿ ನಿರ್ವಹಿಸಲು ಗುತ್ತಿಗೆದಾರರಿಗೆ ಸೂಚಿಸಿದರು.

ಮಹಾನಗರ ಪಾಲಿಕೆ ತಾಂತ್ರಿಕ ಅಭಿಯಂತರರಿಗೆ ಈ ಕೂಡಲೇ ಗುಣಮಟ್ಟದೊಂದಿಗೆ ತ್ವರಿತಗತಿಯಲ್ಲಿ ದುರಸ್ತಿ ಕಾಮಗಾರಿ ಪೂರೈಸಿ, ಸಾರ್ವಜನಿಕರ ಓಡಾಟಕ್ಕೆ ಅನುಕೂಲವಾಗುವಂತೆ ಕ್ರಮ ಕೈಗೊಳ್ಳಲು ಆದೇಶಿಸಿದರು. ಕಳೆದ 2 ದಿನಗಳಿಂದ ನಗರದ ವಿವಿಧ ವಾರ್ಡ್‌ಗಳಲ್ಲಿನ ರಸ್ತೆಗಳಲ್ಲಿರುವ ಗುಂಡಿಗಳನ್ನು ಮುಚ್ಚಿಸುವ ಕಾಮಗಾರಿಗಳನ್ನು ಕೈಗೊಂಡಿರುವ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿಯ ಗುಣಮಟ್ಟ ಮತ್ತು ವಾರ್ಡ್‌ಗಳಲ್ಲಿ ಸಾರ್ವಜನಿಕರು ಮನವಿ ಸಲ್ಲಿಸಿದ್ದ ರಸ್ತೆ ದುರಸ್ತಿಯನ್ನು ಸಹ ತುರ್ತಾಗಿ ಕೈಗೊಳ್ಳಲು ಸ್ಥಳದಲ್ಲಿಯೇ ಅಧಿಕಾರಿಗಳಿಗೆ ಸೂಚಿಸಿದರು. ಈ ಸಂದರ್ಭದಲ್ಲಿ ಉಪ ಮಹಾಪೌರ ಸೋಗಿ ಶಾಂತ್ ಕುಮಾರ್, ಲೆಕ್ಕ ಪತ್ರ ಸ್ಥಾಯಿ ಸಮಿತಿ ಅಧ್ಯಕ್ಷರಾದ ಸುಧಾ ಇಟ್ಟಿಗುಡಿ ಮಂಜುನಾಥ್, ಪಾಲಿಕೆ ಸದಸ್ಯರಾದ ಜಾಕೀರ್, ಮುಖಂಡ ವಿನಯ್ ದಿಳ್ಯಪ್ಪ ಹಾಗೂ ಸಾರ್ವಜನಿಕರು ಹಾಜರಿದ್ದರು.

**ತೋಳಹುಣಸೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ**
**ತೋಳಹುಣಸೆ, ದಾವಣಗೆರೆ ತಾಲ್ಲೂಕು**

**ಹೃದಯಪೂರ್ವಕ ಕೃತಜ್ಞತೆಗಳು**

ಇದರ ಐದು ವರ್ಷಗಳ ಅವಧಿಗೆ ನಡೆದ ಆಡಳಿತ ಮಂಡಳಿಯ ಚುನಾವಣೆಯಲ್ಲಿ ನಮ್ಮನ್ನು ನಿರ್ದೇಶಕರುಗಳನ್ನಾಗಿ ಅವಿರೋಧವಾಗಿ ಆಯ್ಕೆಮಾಡಿದ ತೋಳಹುಣಸೆ, ವಡ್ಡಿನಹಳ್ಳಿ, ಪಾಮೇನಹಳ್ಳಿ ಗ್ರಾಮಗಳ ಸದಸ್ಯರುಗಳಿಗೆ ಮುಖಂಡರುಗಳಿಗೆ ಸಿಬ್ಬಂದಿ ವರ್ಗದವರಿಗೂ ಹಾಗೂ ಚುನಾವಣಾಧಿಕಾರಿಗಳಾದ ಶ್ರೀ ಸತೀಶ್‌ನಾಯ್ಕರವರಿಗೂ, ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿದ ಪ್ರತಿಯೊಬ್ಬರಿಗೂ ನೂತನ ನಿರ್ದೇಶಕರುಗಳಿಂದ ಎಲ್ಲಾ ಸಹಕಾರಿ ಬಂಧುಗಳಿಗೆ ಹೃದಯಪೂರ್ವಕ ಕೃತಜ್ಞತೆಗಳು ಹಾಗೂ ಹೊಸ ವರ್ಷ ಮತ್ತು ಸಂಕ್ರಾಂತಿ ಹಬ್ಬದ ಹಾರ್ದಿಕ ಶುಭಾಶಯಗಳು...


ಜಿ.ಕೆ. ನಿಂಗರಾಜು
ಅಧ್ಯಕ್ಷರು


ರುದ್ರಪ್ಪ ಜಿ.
ಉಪಾಧ್ಯಕ್ಷರು


ವೈ.ಎಸ್. ಶಿವಕುಮಾರ್
ನಿರ್ದೇಶಕರು


ಜಿ. ಸಿದ್ದಬಸಪ್ಪ
ನಿರ್ದೇಶಕರು


ಕೆ.ಎನ್. ನಾಗರಾಜಪ್ಪ
ನಿರ್ದೇಶಕರು


ಕೆ.ಎನ್. ರಾಜಪ್ಪ
ನಿರ್ದೇಶಕರು


ಕೆ. ಮಂಜುನಾಥ್
ನಿರ್ದೇಶಕರು


ಟಿ.ಎನ್. ನಿಂಗರಾಜು
ನಿರ್ದೇಶಕರು


ಕೆ.ಎನ್. ಶಿವಕುಮಾರ್
ನಿರ್ದೇಶಕರು


ಶ್ರೀಮತಿ ಜಿ.ಪಿ. ಪುಷ್ಪಾ
ನಿರ್ದೇಶಕರು


ಶ್ರೀಮತಿ ಸುಧಾ
ನಿರ್ದೇಶಕರು


ಸಂಜಯ್ ಬಿ. ಗೌಡ
ನಿರ್ದೇಶಕರು

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas